M. Gopalakrishna Adiga, Mogeri

"Service of the Poor is the Service of God"

"ಬಡವರ ಬಂಧು"

ಮಂಗಳೂರು.

BADAVARA BANDHU or THE FRIEND OF THE POOR
MANGALORE.

A HIGH CLASS CANARESE MONTHLY.

ಪುಷ್ಪ ೧. DECEMBER, 1933. ಎಸಳು ೬.

Editor:—Mangalore Jarappa. *Associate Editor:*—B. Narsappa.

ನಾನು—ನೀನು.

ಅಲ್ಲಿಲ್ಲ—ಇಲ್ಲಿಲ್ಲ,
ಎಲ್ಲೆಲ್ಲು ನೀನಿಲ್ಲ;
ನೀನು ಎಲ್ಲಿ?
ನಿನ್ನ ಹುಡುಕಲೆಲ್ಲಿ?
ಕೂಗುವೆನು ನಾ ಜೀವ,
ಬಾಗುವೆನು ಹೇ ದೇವ!
ಬಾರೆಯೇನು?
ನೀನು ತೋರೆಯೇನು?
ಜೀವನೇ ನೀ ದೇವ,
ದೇವನೇ ನೀ ಜೀವ,
ದೇವ ಜೀವ—
ನೀನು ಎನ್ನ ಕಾವ.

ನಿನ್ನಿರವೆ ಜಗದಿರವು,
ಜಗದಿರವೆ ನಿನ್ನಿರವು,
ನೀನೆ ಪತಿಯು,-
ನೀನೆ ಎನ್ನ ಗತಿಯು,
ನೀನಿರುವೆ ನನ್ನಲ್ಲಿ,
ನಾನಿಲ್ಲ ನಿನ್ನಲ್ಲಿ,
ನಾನು ನೀನೆ?
ಏನು ನೀನು ನಾನೆ?
ನಿನ್ನಿರವೆ ನನ್ನಿರವು,
ನನ್ನಿರವೆ ನಿನ್ನಿರವು,
ಕಾಣದೇನು?
ದೇವ, ನಾನು ನೀನು.

ಕಂದಕ ಈಶ್ವರ

ವಾರ್ಷಿಕ ಚಂದಾ—ಪರ ಊರವರಿಗೆ .... ರೂ. 1—4—0.
,, ,,— ಊರವರಿಗೆ .... ರೂ. 1—0—0.

ಈ ಸಂಚಿಕೆಯ ಬೆಲೆ: 0—1—6.

"BADAVARA BANDHU"

PATRONS

LIFE DONORS.

M. R. Ry. K. N. Guruswamy Avl., Excise Contractor to the Government of Mysore, Bangalore Rs. 100—0—0

M. R. Ry. B. G. Mangalore-kar, Avl., Tardeo Road, Bombay ,, 100—0—0

A Well-wisher ... ... ,, 50—0—0

M. R. Ry. Rao Bahadur N. N. Suvarna Avl., Advocate Mangalore ,, 50—0—0

PATRONS.

M. R. Ry. D. Manjaya Heggade Avl., Manager, Temple Dharmastala, S. Kanara ,, 10—0—0

M. R. Ry. K. Raghuchandra Ballal Avl., Land-Lord, Mangalore ,, 10—0—0

'A Bandhu' ... ... ,, 10—0—0

M. R.Ry. K. T. Kerkera Avl., Thomas Street, Colaba, Bombay. ,, 10—0—0

M. R.Ry. M. Narayana, Avl., Editor, 'Thodalnudi' 140 Bohra Bazaar Street, Fort Bombay. 10—0—0

Srimathi Avantika Bai K. Kudalkar. 281 Bazar Gate St. Top Floor, Fort Bombay 10-0-0

Dr. M. Rama Rao. L. C. P. S. Fort Bombay 10—0—0

MEMBERS FOR FIVE RUPEES' SCHEME.

M. R. Ry. M. N. Prabhu Avl., Government Pleader and Public Prosecutor Mangalore.

M. R. Ry. H. Narsappa Avl., Assistant Income-Tax Officer, Mangalore.

M. R. Ry. M. A. Talwar Avl., B. A. B. L., M. R. A. S. Vakil, Mangalore.

M. R. Ry. S. G. Shastry Avl., B. A., Msc. (Lond F. C. S. F. M. U., Industrial Chemist and Chemical Engineer, Government Soap Factory Bangalore.

Mrs. N. Sharada Bai, wife of M. R Ry. T. Narsappa Avl., Hon. Bench Magistrate, Mangalore.

M. R. Ry. H. Coragappa Avl., Sahukar and Hon. Bench Magistrate, Mangalore.

A Hon. Bench Magistrate.

Messrs. Kochikar Bros., Agents Bombay Life Assurance Co., Ltd., Udipi.

M. R. Ry. J. A Puthran Avl., M. C., B. Manager Asian Assurance Co., Ltd., Mangalore.

M. R. Ry. M. K. Vaidyer Avl., Mangalore,

M. R Ry. Guthedar B. Babu, Avl., Mangalore.

M. R. Ry. S. Narayan Shastry Avl., Manager Cooverjee Ardeshier & Co., Mangalore.

M. R. Ry. M. V. Shastry Avl., Ayurveda Bhusana, Bheshajashram, Mangalore.

Dr. K. Gopalachar, Senior Physician Sri Rama Krishna Dharma Vaidyashram, Mangalore.

M. R. Ry. A. M. Naganna Hegde, M. C. Prop., Satyanarayan Tile Works, Mangalore.

M. R. Ry. V. N. Bolar Avl., Messrs. Kochikar Bros., Udipi.

M. R. Ry. Abbahithilu Ishwar Poojary Avl., Land Lord and Sowcar Boloor, Mangalore.

M. R. Ry. Contractor K. Guddappa Avl., Kodialbail Mangalore.

M. R. Ry. M. Venkappaya Avl., Merchant Bendoor, Mangalore.

M. R. Ry. K. Devappa Avl., Soda Factory, Kodialbail, Mangalore.

M. R. Ry. M. Vasudev Nayak Avl., Messrs. Manel Krishna Nayak & Sons Mangalore.

Dr. I. K. P. Sharma. Ayurveda Visharada and Bhushana, Medical Officer-in-charge of Municipal Ayurvedic Dispensary. Mangalore.

Mr. K. Raffuddin Ahmad Saheb, District Manager, The Great Eastern Industrial & All India Insurance Co., Ltd., River View, Mangalore.

M. R. Ry. B. Narsappa Kotian Avl., C/o Poly Clinic 20 New Queens' Road, Bombay.

M. R. Ry. B. M. Kotian Avl., P. B. 827 Bombay.

OUR PATRONS.

Continued.

Mr. John Steven D'Souza,
Manager, Baker Shop, Kudroli,
Mangalore.

M. R. Ry. Laxman Govind Pal Avl.,
Proprietor, Banian Mart,
Market Road, Mangalore.

M. R. Ry. S. Madhava Laxumana Naik Avl.,
Merchant Bunder, Mangalore.

M. R. Ry. E. D. Anchan Avl,
Proprietor Zenith Cap Mart,
Market Road, Mangalore

M. R. Ry. Potail Devappa Malli Avl.,
Potail of Kunjathabail S. K.

M. R. Ry. K. Venkoji Rao Avl.,
Gollarkeri, Mangalore.

M. R. Ry. Annappa B. Shettigara, Avl. Agent
Hindustan Co-operative Insurance.
Society Ltd. Commissariat Building,
Fort Bombay.

M. R. Ry. A. B. Kukian Avl.,
c/o National City Bank of
New York, Church-gate Street,
Fort Bombay.

M. R. Ry. M. R. Shriyan Avl.,
c/o Abdulla Hirji Esq.,
2nd Floor, No. 5, Dalal Street,
Fort Bombay

M. R. Ry. K. C. Kaverappa Avl.,
Manager, Dodnandi Coffe Estate,
Bankal, Kadur Dt.

M. R. Ry. K. Talawar Avl.,
Proprietor, Messrs K. Chapman & Co.
Girgaum, Bombay.

M. R. Ry. Contractor Koragappa Avl.,
Kodialbail, Mangalore.

M. R. Ry. Tukrappa Avl.,
Messrs. Pais shop,
Mangalore.

M. R. Ry. Datt Shet Avl.,
Bharat Jewellery Mart,
Mangalore.

M. R. Ry. Menka Fakira Shetty Avl.,
(Ulyaragoli) The Sharad Vilas,
Hindu Dinner House,
69 Ghoga Street, Fort Bombay.

M. R. Ry. A. P. Kirodian Avl.,
Dadar Post, Bombay.

Dr. K. V. Bhat, L.I.M. Physician in charge,
Municipal Ayurvedic Dispensary,
Jeppu, Mangalore.

Swasthi Sri Charukeerthi Panditacharya-
varya Swamiji, Danasala Mutt, Mudabidri.

M. R.Ry. V. S. Prabhu, Avl., Proprietor,
West India Soap & Industrials Co.
Mangalore.

M. R. Ry. Shesappa J. Shriyan Avl.,
The Yokohama Specie Bank Ltd.,
Post Box No. 207, Bombay

M. R. Ry. Bolar Narayana Rao Avl.,
Proprietor,
Popular Tailoring Shop,
Sir Pheroj Shah Metha Road,
Fort Bombay.

M. R. Ry. H. Vasudev Shetty Avl.,
Proprietor, Hindu Restaurant,
Bruce Street,
Fort Bombay.

M. R. Ry. M. B. Shetty Avl,
c/o Charles Lister & Co.,
Novsari Chamber Outram Road,
Bombay.

M. R. Ry. Bolanthur Laxminarayan
Prabhu, Avl. Merchant,
Bunder, Mangalore.

Prof. N. Sheshappa,
South Kanara Physical Culture Institute,
Bombay.

Hon. Secretary,
Kannada Sangeetha Sabha,
12, Maruthi Lane, Bombay.

M. R. Ry. A. Sitarama, Avl.,
Sub-Registrar, Katachera,
North Malabar.

OUR PATRONS. (Continued.)

M. R. Ry. B. Narayana, Avl., C/o B. Babu, Merchant Bolar, Mangalore.

M. R. Ry. A. Ramappa Avl., Pandeshwar Mangalore.

M. R. Ry. N. Srinivasa Avl., District Health Office, Mangalore.

M. R. Ry. B. Devappa, Avl., Manager Soda Factory Kadri Road, Mangalore.

Messrs. Rao & Rao, Chevrolet Sub Dealers, Maidan Road, Mangalore.

M. R. Ry. M. Vittappa Prabhu Avl., Manager Coffee Hotel, Mannagudde Mangalore.

M. R. Ry. K. Kanthappa Avl., Contractor, Mangalore.

M. R. Ry. B. Rangappa Avl., Proprietor Star Cycle & Motor Co., Mangalore.

M. R. Ry. M. N. Shetty Avl. C/o Messrs Langley & Co., P. Box No. 384 Fort Bombay,

M. R. Ry. M. D. Kuckian Avl., C/o Messrs Langley & Co., P. Box No. 384 Bombay.

M. R. Ry. Narayan A. Karkera Avl., C/o Messrs Langley & Co., P. Box 384 Bombay.

M. R. Ry. S. Hoovaya Salian Avl., C/o P. A. Homarjee & Co., 70 Forbes Street Fort Bombay.

M. R. Ry. T. A. Kotian Avl., C/o Ciba (India) Ltd. Exchange Building, Ballard Estate, Bombay.

M. R. Ry. Babu K. Kotian Avl., Kian Gwan Co, (India), Churchgate House, Churchgate St., Fort Bombay.

Messrs. G. J. Bros., 25 Raghunath Dadaji Street, Bombay.

"A Friend of the Poor" Bombay.

M. R. Ry. Jarappa A. Suvarna Avl. Sassoon & Din & Co, 143. Esplanade Road, Fort Bombay.

M. R. Ry. U. Rangappa Avl. C/o Lallubhai Ranchhoddas, Agakhan Buildings, Dalal Street, Fort Bombay.

M. R. Ry. M. R. Shenoy. Gopalkrishna Avl., Hindu Hotel, 259 Hornby Road, Bombay.

M. R. Ry. M. R. Chander Avl., Havero Trading Co. Ltd., Fosberry Road, Mazagoan, Bombay No. 10

M. R. Ry. K. B. Amin Avl., C/o Messrs Langley & Co., P. B. No. 384 Fort Bombay.

M. R. Ry. M. Kuppaya Avl., C/o Western India Match Company Nical Road Vulcan House Ballard Estate, Bombay.

M. R. Ry. Kumar M. Kundar Avl., C/o Toyo Menka Kaisha & Co., P. O Box 594-192 Hornby Road Bombay.

M. R. Ry. S. Anthappa Avl., Master Tailor 64 Barbar Lane Fort Bombay.

M. R. Ry. Narayan S. Shetty Avl., C/o Belgian East India Trading Co., 41-45 Stock Exchange Building Bombay.

M. R. Ry. M. K. Annappa Avl., C/o Ramakrishna Ashram Beedi Shop No. 35 Medows Street, Fort Bombay.

M. R. Ry. M. K. Kotian Avl., 128-30 Bora Bazar Street 4th Floor, Haji Cassim Buildings Fort Bombay

Mrs. M. Yamuna Bai, 128 Bora Bazar Street, 4th Floor Fort Bombay.

M. R. Ry, Kuppaya. S. Amin Avl., C/o Messrs M. R. Ved & Co., Share Brokers Agakhan Buildings, Dalal Street, Fort Bombay.

M. R. Ry. Paddoo Gurikara Avl. C/o V. F. Counto Esq, B. A., LL. B. Advocate, High Court, Kalbadevi Road, Bombay No. 2

M. R. Ry. H. Ramaya Avl. The Pangole National Bank Ltd. Amir Buildings, P. B. 266, Bombay

Dr. N. R. Suvarna, M. S. (Bom) New Surgical Home, Tram Terminus, Sandhurst Road, Bombay.

M. R. Ry. Moolur Sheenappa Shetty Avl, N/o Domba Shetty, Baarath Hindu Uparagraha, Progressive Land Blds., No. 1 Kala Chowky Church Pokly, Post No. 12. Bombay.

M. R. Ry. Rama T. Amin Avl. C/o Dr. Jal & Patel, Bombay House, Bruce Street, Bombay,

M. R. Ry. N. J. Suvarna Avl., Proprietor, Furniture Mart Mangalore.

M. R. Ry. Somappa B. Shetty, Avl., Prop. Hindu Hotel, Alexander Dock, Red Gate Shed, No. 4 Fort Bombay.

1898ನೇ ಇಸವಿಯಿಂದಲೂ ಪ್ರಸಿದ್ಧಿಯಾದುದು.

ಅಪರ ಧನ್ವಂತರೀ, ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ, ಪ್ರಸಿದ್ಧವಾದ ಔಷಧರಾಜಗಳು.

ಜೀವಾಮೃತವು

(ರಿಜಿಸ್ಟರ್ಡ್)

ಅತ್ಯುತ್ತಮ ಬಲವರ್ಧಕ ಟಾನಿಕ್.

ಇದು ಬಲಹೀನ ದೇಹಗಳಿಗೆ ಅದ್ಭುತವಾದ ಟಾನಿಕ್ಕು. ಇದರ ಉಪಯೋಗದಿಂದ ಮಲಬದ್ಧತೆ, ನಿದ್ರಾರಾಹಿತ್ಯ, ಅಜೀರ್ಣ, ನರಗಳಲ್ಲಿ ನಿಶ್ಶಕ್ತಿ, ಕಾಲು ಕೀಳುವಿಕೆ, ರಕ್ತ ಕ್ಷೀಣತೆ, ಒಣಗಿಕೊಂಡು ಹೋಗುವಿಕೆ, ಜ್ಞಾಪಕಶಕ್ತಿ ಕಡಿಮೆಯಾಗುವಿಕೆ, ತಲೆನೋವು, ಉಬ್ಬಸ, ಇವುಗಳನ್ನೆಲ್ಲಾ ಗುಣ ಮಾಡಿ, ವೀರ್ಯವೃದ್ಧಿ, ರಕ್ತವೃದ್ಧಿ, ಉಂಟು ಮಾಡುತ್ತದೆ.

ಬೆಲೆ ಸೀಸೆ ಒಂದಕ್ಕೆ 3-4-0. **ಅರ್ಧ ಸೀಸೆ ಒಂದಕ್ಕೆ 1-12-0.**

ಅಮೃತಾಮಲಕ ತೈಲ

ಮಿದುಳಿಗೂ, ದೇಹಕ್ಕೂ, ಕಣ್ಣುಗಳಿಗೂ ತಂಪುಂಟು ಮಾಡಿ, ಜ್ಞಾಪಕ ಶಕ್ತಿ ವೃದ್ಧಿ ಮಾಡುವ ಅಭ್ಯಂಗನ ತೈಲ.

ಬಾಟ್ಲಿ 1ಕ್ಕೆ ರೂ. 1-0-0.

ಮಾತುಲುಂಗ ರಸಾಯನ

ಗರ್ಭಿಣಿ ಸ್ತ್ರೀಯರ ಸಮಸ್ತ ವ್ಯಾಧಿಗಳನ್ನೂ ಗುಣ ಮಾಡಿ ಗರ್ಭಾಶಯಕ್ಕೆ ಬಲವನ್ನು ಕೊಟ್ಟು, ಸುಖ ಪ್ರಸವವನ್ನು ಉಂಟು ಮಾಡುವ ಸಂಜೀವಿನಿ. **ಬೆಲೆ ಸೀಸೆ ಒಂದಕ್ಕೆ ರೂ. 1-12-0.**

ದ್ರಾಕ್ಷಾರಿಷ್ಟ

(ದೇಹಕ್ಕೂ, ಮೆದುಳಿಗೂ ಉಲ್ಲಾಸವನ್ನು ಕೊಡುವ ಪಾನೀಯ.) ಅಜೀರ್ಣ, ಅರುಚಿ, ಮಂಕು, ಕೆಮ್ಮುಲು, ನೆಗಡಿ, ನಿದ್ರಾಹೀನತೆ, ಇವುಗಳನ್ನು ಹೋಗಲಾಡಿಸಿ, ಶಕ್ತಿಯನ್ನು ಉಂಟುಮಾಡುತ್ತದೆ.

ಒಂದುವರೆ ಪೌಂಡಿಗೆ 2- 0-0.
ಒಂದು ,, 1- ೮-0.
ಅರ್ಧ ,, 0-14-0.

ಚ್ಯವನಪ್ರಾಶ

ಕೆಮ್ಮುಲು, ಉಬ್ಬಸ, ಕ್ಷಯ ಮುಂತಾದುವನ್ನು ಹೋಗಲಾಡಿಸಿ, ಬಲವನ್ನೂ, ವೀರ್ಯ ಪಟುತ್ವವನ್ನೂ ಉಂಟು ಮಾಡುವ, ಬಲವರ್ಧಕವಾದ, ರುಚಿಕರವಾದ ರಸಾಯನ.

ಪೌಂಡು ಒಂದಕ್ಕೆ 2- 8-0.
ಅರ್ಧ ,, 1- 8-0.
ಕಾಲು ,, 0-13-0.

ಅಶೋಕಾರಿಷ್ಟ

ಸ್ತ್ರೀಯರಿಗೆ ಉತ್ತಮವಾದ ಟಾನಿಕ್ಕು. ಗರ್ಭಾಶಯ ಸಂಬಂಧವಾದ ವ್ಯಾಧಿಗಳನ್ನು ಅಂದರೆ, ಬಹಿಷ್ಠೆ ಕಾಲದ ಹೊಟ್ಟೆನೋವು, ಎದೆನೋವು, ಮೂತ್ರವ್ಯಾಧಿಗಳು ಇವುಗಳನ್ನು ಹೋಗಲಾಡಿಸುತ್ತದೆ.

ಒಂದುವರೆ ಪೌಂಡಿಗೆ ರೂ. 2- 0 0.
ಒಂದು ,, 1- 8-0.
ಅರ್ಧ ,, 0-14-0.

ಆಯುರ್ವೇದಾಶ್ರಮ, ಮದ್ರಾಸು.

ಸೋಲ್ ಏಜಂಟ್ಸ್:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆನ್ಸಿ,

೯೨ ಚಿಕ್ಕಪೇಟೆ, (ಉಡುಪಿ ಹೊಟೇಲ್ ಹತ್ತಿರ) ಬೆಂಗಳೂರು ಸಿಟಿ.

ಬಡವರ ಸೇವೆಯೇ ಭಗವಂತನ ಸೇವೆಯು.

ಬಡತನದ
ವರವು ಎಲ್ಲರಿಗೆ
ದೊರೆಯಲಾ
ರದು,
ದೇವರ ಮಕ್ಕಳೇ
ಅದಕ್ಕೆ ಅರ್ಹರು

ESTABLISHED 1932.

"ಬಡವರ ಬಂಧು"

ಬಡತನದಲ್ಲಿ
ಮರುಗುವವರು
ಮೂರ್ಖರು.
ಸಿರಿತನದಲ್ಲಿ
ಸುಖಿಸುವವರು
ಮೂಢರು.
ಅವು ಸ್ಥಿರವಲ್ಲ.

"BADAVARA BANDHU"

ಸಂಪುಟ 2	ದಶಂಬರ 1933.	ಸಂಚಿಕೆ 6

BADAVARA BANDHU

Bandhu of the help-less–
Bandhu of the hap-less–
Bandhu of the home-less–
Bandhu of the cheer-less–

Bandhu of the oppressed–
Bandhu of the depressed–
Bandhu of the distressed–
Bandhu of the suppressed–

Bandhu of the lowest–
Bandhu of the weakest–
Bandhu of the poorest–
Bandhu of the humblest–

Banddu of the pitiable–
Bandhu of the miserable–
Bandhu of the charitable–
Bandhu of the amiable–

Bandhu of the dumb-million–
Bandhu of the starving-million–
Bandhu of the teeming-million–
Bandhu of the toiling-million–

M. S. UPADHYA.

ಸತ್ಯ ಮತ್ತು ಅಹಿಂಸೆಗಳ ಬಲದಿಂದ ನೀವು ಈ ಜಗತ್ತನ್ನೇ ನಿಮ್ಮ ಪಾದದಲ್ಲಿ ತಂದಿರಿಸಿಕೊಳ್ಳಬಹುದು.

With Sathya combined with Ahimsa you can bring the world to your feet.—Gandhiji

ದೇವಮ್ಮಾಜಿ

ಲೇಖಕರು—ಶ್ರೀ ಕೆ. ಎ. ತಮ್ಮಯ್ಯ ಬಿ. ಎ. ಕೊಡಗು.

ಕ್ರೈಸ್ತಾಬ್ದದ ಸಾವಿರದ ಎಂಟು ನೂರ ಇಪ್ಪತೆಯ ಸಂವತ್ಸರ. ವಸಂತ ಕಾಲ. ಸಾಯಂಕಾಲ ಸಾಧಾರಣ ನಾಲ್ಕು ಗಂಟೆಯ ಸಮಯ. ದಿವಾಕರನು ತನ್ನ ಪೂರ್ವ ಪತ್ನಿಯನ್ನು ಧಿಕ್ಕರಿಸಿ, ಪಶ್ಚಿಮ ರಮಣಿಯ ಸೆರೆಯಲ್ಲಿ ಸಿಲುಕಿದ್ದನು—ಹಾಗೂ ಕಳೆಗುಂದುತಿದ್ದನು. ತನ್ನ ಭೀಷಣ ಕಿರಣಗಳು, ತಡೆಯಲಾರದ ಜಳ—ಇವು ಸತ್ವಹೀನವಾಗಿದ್ದುವು. ಮಂದ ಮಾರುತವು ತನ್ನ ಸೋಂಕಿನಿಂದಲೂ, ಖಗಾವಳಿಗಳು ತಮ್ಮ ಇಂಪಾದ ಗಾನದಿಂದಲೂ ವನದೇವಿಯನ್ನು ನಿದ್ರೆಗೊಳಿಸುತ್ತಿದ್ದುವು. ವನದೇವಿಯ ಸೌಂದರ್ಯ! ಎತ್ತರವಾಗಿ, ಗಂಭೀರವಾಗಿ ಬೆಳೆದು ತಮ್ಮ ಕೊಂಬೆಗಳನ್ನು ಬಹು ದೂರಕ್ಕೆಸೆದ ಮರಗಳು—ಇವುಗಳ ಮಧ್ಯೆ ಸಣ್ಣ ಸಣ್ಣ ಮರಗಿಡಗಳು; ದಟ್ಟವಾದ ಕುರಿಚಲುಗಳು. ಮರಗಿಡಗಳನ್ನು ಆಶ್ರಯಿಸಿ ಮುಂದು ವರಿಯುವ ಲತಾಲಲನೆಯರು. ಕುರಿಚಲುಗಳು ಮುಗುಳ್ನಗುವುವೊ ಎಂಬಂತೆ ತೋರುವ ಅವುಗಳಲ್ಲಿನ ಪುಷ್ಪಗಳು. ಪೈರುಪಚ್ಚೆಗಳಿಲ್ಲದೆ ಬೋಳಾಗಿದ್ದ ಗದ್ದೆಗಳು. ಇಂತಹ ಗದ್ದೆಗಳಲ್ಲಿ ದನಕರುಗಳು ಒಂದೆಡೆ ಮೇಯುತ್ತಲೂ, ಇನ್ನೊಂದು ಕಡೆ ಮಲಗಿ ಮೆಲುಕಾಡುತ್ತಲೂ, ಮತ್ತೊಂದೆಡೆ "ಅಂಬಾ" ಎಂದರಚುತ್ತಲೂ ಇದ್ದುವು.

ಇಂತಹ ಸಮಯದಲ್ಲಿ, ವಿಶ್ರಸ್ವಭಾವಿಯಾದ ಕೊಡಗಿನ ಅರಸು ಲಿಂಗರಾಜೇಂದ್ರ ಒಡೆಯನು ಪರಿವಾರ ಸಮೇತನಾಗಿ ಮೂರ್ನಾಡಿನಿಂದ ಈಗ ಅಮ್ಮತ್ತಿಗೆ ಹೋಗುವ ಮಾರ್ಗವಾಗಿ ಹೊರಟಿದ್ದಾನೆ. ಪ್ರತಿಯೊಬ್ಬನ ಹಸ್ತದಲ್ಲಿಯೂ ಒಂದೊಂದು ಬಂದೂಕವಿದ್ದಿತು. ಮೆಲ್ಲನೆ ನಡೆಯುತ್ತಾ ಸಾಧಾರಣ ಅರ್ಧ ಹರದಾರಿ ದೂರ ಹೋಗಿದ್ದರು. ರಾಜನು ಒಮ್ಮೆಲೆ ತಟಸ್ಥನಾಗಿ ನಿಂತನು! ಪರಿವಾರದವರಿಗೆ 'ದಿಸ್ಮ್ಮ'ಂದಿತು! ಆದರೆ, ಹೆದರಲು ಕಾರಣವಿರಲಿಲ್ಲ!

ರಾಜನು ನಿಂತಲ್ಲಿಂದ ಗದ್ದೆಯ ಶಾಖೆಯೊಂದು ಹೊರಟು ಒಂದು ಮೈದಾನಕ್ಕೆ ಮುಟ್ಟಿದ್ದಿತು. ಗದ್ದೆಯು ಮೈದಾನಕ್ಕೆ ಕೂಡಿದ ಸ್ಥಳದಲ್ಲಿ ಒಂದು ಕೋಣವು ತನ್ನಷ್ಟಕ್ಕೆ ತಾನೇ ಮೇಯುತ್ತಿದ್ದಿತು. ಅದರ ಬೆನ್ನ ಮೇಲೊಂದು ಕಾಗೆಯಿದ್ದಿತು. ರಾಜನು ನಿಂತಲ್ಲಿಂದ ಕೋಣನಿದ್ದೆಡೆಗೆ ಸಾಧಾರಣ ನಾಲ್ನೂರನಲ್ವತ್ತು ಗಜಗಳಿದ್ದಿರಬಹುದು. ಅರಸನು ತನ್ನ ಕೋವಿಯಿಂದ ಕೋಣದ ಮೇಲಿದ್ದ ಕಾಗೆಗೆ ಹೊಡೆದನು. ಕಾಗೆಯು ನೆಲಕ್ಕುರುಳಿತು. ಕೋಣವು ಭೂಲೋಕದಲ್ಲಿ ತಾನೊಂದಲ್ಲದೆ ಇನ್ನೂ ಜೀವಿಗಳಿವೆಯೋ ಎಂಬಂತೆ ಮೇಲ್ಮೊಗವಾಗಿ ನೋಡಿತು!

ಇದಾದ ನಂತರ ಪ್ರಭು ಸಮೇತ ಜನರು ಮುಂದುವರಿದರು. ಕತ್ತಲಾಗುತ್ತಲೇ ಹಿಂದಿರುಗಿದರು. ಮೂರ್ನಾಡಿಗೆ ಇನ್ನೂ ಒಂದು ಮೈಲು ಮಾತ್ರ; ಅಷ್ಟರಲ್ಲೇ, ತಾವು ನಡೆಯುವ ರಸ್ತೆಯ ಬಲಪಾರ್ಶ್ವದ ಒಂದು ಮರದಲ್ಲಿ ಒಂದು 'ಹಾರು ಬೆಕ್ಕು' (ಸ್ಥಳೀಕ ಪದ) ರಾಜನ ಕಣ್ಣಿಗೆ ಬಿದ್ದಿತು. ಅರಸನು ಗುಂಡು ಹಾರಿಸಿದನು. ಬೆಕ್ಕು ಕೆಳ ಬೀಳಲಿಲ್ಲ. ಮತ್ತೊಮ್ಮೆ, ಮಗದೊಮ್ಮೆ, ಹತ್ತು ಸಾರಿ, ಇಪ್ಪತ್ತು ಸಲ ಗುಂಡು ಹಾರಿಸಿದನು. ಬೆಕ್ಕು ಮಾತ್ರ ಕದಲಲಿಲ್ಲ. (ಈ ಜಾತಿಯ ಬೆಕ್ಕಿನ ವಿಷಯ ಹೀಗಾಗುವುದಿದೆ.) ಅರಸನು ಕೋಪದಿಂದಲೂ ನಾಚಿಕೆಯಿಂದಲೂ ಕುದಿಯ ತೊಡಗಿದನು. ಹಾಗೂ, "ನಿಮ್ಮಲ್ಲಿ ಯಾರಾದರೊಬ್ಬನು ಆ ಬೆಕ್ಕನ್ನು ಒಂದೇ ಗುಂಡಿಗೆ ಬೀಳಿಸುವಿರೋ? ಒಂದೇ ಏಟಿಗೆ ಬೀಳಿಸದಿದ್ದರೆ, ಅವನ ತಲೆಯು ನೆಲಕ್ಕುರುಳುವುದು" ಎಂದು ಹೇಳಲು ಜನರು ಒಬ್ಬನ ಮುಖವನ್ನು ಇನ್ನೊಬ್ಬನು ನೋಡತೊಡಗಿದರು.

ಅಷ್ಟರಲ್ಲಿಯೇ ರಾಜನಿಗೆ ಬಿದಿರು ಕಡಿಯಲಿಕ್ಕೆ ಹೋಗಿದ್ದ (ರಾಜನ "ಹಿಟ್ಟಬಿಟ್ಟಿ ಚಾಕರಿ"ಯನ್ನು ಒಂದೊಂದು ಕುಟುಂಬದವರು, ಬೇರೆ ಬೇರೆ ಕಾಲದಲ್ಲಿ ಮಾಡಬೇಕೆಂದಿತ್ತು. ಈ ವಿಷಯವನ್ನು ಸ್ಥಳ ಸಂಕೋಚದಿಂದ ಕೊಡಲಾಗಲಿಲ್ಲ.) ಕೆಲವು ಕೊಡಗು ವೀರರು ಆ ಮಾರ್ಗವಾಗಿ ಬಂದರು. ಇವರನ್ನು ಕಾಣುತ್ತಲೇ, ರಾಜನ 'ಖಾಸಾ ಮುನಷಿ"ಯಾಗಿದ್ದ ಮುಕ್ಕಾಟಿರ ಮುದ್ದೈಯ್ಯನ ಕಾರ್ಮೋಡದಂತಿದ್ದ ಮುಖದಲ್ಲಿ ಮಿಂಚಿನಂತಹ ಮುಗುಳ್ನಗೆಯು ಕಂಡು ಬಂದಿತು! ಅವನು ತನ್ನ ಪ್ರಭುವಿನ ಎದುರಿನಲ್ಲಿ ನಿಂತು ನಮಸ್ಕರಿಸಿ—"ಸ್ವಾಮಿ, ಅಲ್ಲಿ ನನ್ನ ತಮ್ಮನು ಬರುತ್ತಿರುವನು. ಅವನು ಆ ಬೆಕ್ಕನ್ನುರುಳಿಸುವನು" ಎಂದು ವಿಜ್ಞಾಪಿಸಿದನು.

ರಾಜನು ಹಾಸ್ಯ ನಗೆ ನಕ್ಕು—'ಹೊ! ನಿನ್ನ ತಮ್ಮ! ನಿನ್ನಿಂದಾಯಿತಲ್ಲವೇ! ನಿನ್ನ ತಮ್ಮ!' ಎಂದನು.

ಮುದ್ದೈಯ್ಯನು ಪುನಃ—'ಸ್ವಾಮಿ! ಅವನು ಸಾಮಾನ್ಯನಲ್ಲ. ಒಂದು ಮಗುವಿನ ತಲೆಯಲ್ಲಿ ಒಂದು ಮೊಟ್ಟೆಯನ್ನಿಟ್ಟರೆ ಅದನ್ನು ಮಗುವಿಗೆ ಅಪಾಯವಿಲ್ಲದೆ ಗುಂಡಿನಿಂದ ಹಾರಿಸುವನು" ಎಂದನು.

ರಾಜನು ಮುದ್ದೈಯ್ಯ ಮುನಷಿಯ ತಮ್ಮನನ್ನು ಕರೆಸಿದನು. "ನಿನ್ನ ಹೆಸರೇನೆ"ಂದು ಕೇಳಿದನು.

"ಅಯ್ಯಪ್ಪ"

"ಆ ಬೆಕ್ಕನ್ನು ಒಂದೇ ಗುಂಡಿಗೆ ಬೀಳಿಸುವಿಯೋ?

"ಅಪ್ಪಣೆ ಮಹಾ ಸ್ವಾಮಿ"

"ಇಲ್ಲವಾದರೆ ನಿನ್ನ ತಲೆಯು ನೆಲಕ್ಕುರುಳುವುದು"

"ಸ್ವಾಮಿಯವರ ಅಪ್ಪಣೆ"

ಐಯ್ಯಪ್ಪನು ಗುರಿ ನೋಡಿ ಬೆಕ್ಕಿಗೆ ಹೊಡೆದನು. ಬೆಕ್ಕು ನೆಲಕ್ಕುರುಳಿತು!

ಪ್ರಭುವಿಗೆ ಆನಂದವೂ ಸ್ವಲ್ಪ ನಾಚಿಕೆಯೂ ಉಂಟಾಯಿತು. ಆದರೆ, ಕೊಡಗಿನ ಯಾವ ಅರಸನೇ ಆಗಲಿ, ಪರಾಕ್ರಮಕ್ಕೆ ತಕ್ಕಂತೆ ಮಾನಿಸದೆ ಇರುತ್ತಿರಲಿಲ್ಲ. ಈಗಿನ ಬಂಗಾರದ ಪದಕದ ಬದಲು ಆ ಕಾಲದಲ್ಲಿ ಜಾಗೀರುಗಳು ಕೊಡಲ್ಪಡುತ್ತಿದ್ದುವು. (ರಾಜನಿಂದ ಕೊಡಲ್ಪಟ್ಟ ಜಾಗೀರುಗಳಿಗೆ ಈಗಲೂ ಕೂಡ ಕಂದಾಯವಿರುವುದಿಲ್ಲ) ಯಾವ ಮತದವರೇ ಆಗಲಿ, ಅವರು ದೇಶಭಕ್ತರೂ, ಪ್ರಭು ಭಕ್ತರೂ ಆಗಿದ್ದರೆ, ಅವರಿಗೆ ಮಾನ್ಯವು ದೊರೆಯುತ್ತಿದ್ದಿತು. (ಎಷ್ಟೋ ಎಕ್ರೆ ಜಾಗೀರು ತಲೆಯಾಂತರದಿಂದ ಈಗಿನ ವರೆಗೂ, ಕೊಡಗಿನ ಕೆಲವು ಮುಸಲ್ಮಾನ ಕುಟುಂಬದಿಂದ ಅನುಭವಿಸಲ್ಪಡುತ್ತಾ ಬಂದಿದೆ. ಏಳು ತಲೆಯಾಂತರಕ್ಕೆ ಮಾತ್ರವಿದ್ದ ಒಂದು ಕುಟುಂಬದ ಜಾಗೀರೊಂದು ೧೯೩೦ರಲ್ಲಿ ಕೊನೆಗಂಡಿತು. ಅಂದಿನಿಂದ ಅವರು ೧೫೦೦ ರೂಪಾಯಿ ಕಂದಾಯ ಕೊಡಲು ತೊಡಗಿದ್ದಾರೆ) ಆ ಕಾಲದಲ್ಲಿ ಯೋಗ್ಯರಿಗೆ ಮಾನ್ಯ-ಇಂದು ಕಪಟಿಗಳಿಗೆ ಮಾನ್ಯ!

ರಾಜನು ಐಯ್ಯಪ್ಪನನ್ನು ಕುರಿತು "ಎಲೋ, ನಾಳೆ ಬೆಳಿಗ್ಗೆ ಹತ್ತು ಗಂಟೆಯ ಸಮಯಕ್ಕೆ ಮಡಿಕೇರಿ ಅರಮನೆಯಲ್ಲಿ ಹಾಜರಿರತಕ್ಕದ್ದು, ತಿಳಿದಿಯೋ"

"ಅಪ್ಪಣೆ ಮಹಾ ಸ್ವಾಮಿ" ಎಂದು ಐಯ್ಯಪ್ಪನು ಉತ್ತರವಿತ್ತನು.

ರಾಜನು ಪರಿವಾರದೊಂದಿಗೆ ಅರಮನೆಗೆ ತೆರಳಿದನು. ಬಿದಿರು ಕಡಿಯುವವರು (ರಾಜನ ಹಿಟ್ಟು ಬಿಟ್ಟಿ ಚಾಕರಿಯವರು] ತಮ್ಮ ತಮ್ಮ ಮನೆಗಳ ಕಡೆಗೆ ಸಾಗಿದರು. ದಾರಿ ನಡೆಯುತ್ತಿರುವಲ್ಲಿ ಅವರಲ್ಲೊಬ್ಬನು "ಲೋ, ಐಯ್ಯಪ್ಪನಿಗೆ ಜಾಗೀರು ಸಿಕ್ಕುತ್ತದೇನೊ" ಎಂದನು. ಮತ್ತೊಬ್ಬನು "ಅವನಿಗೆ ರಾಜನ ಮಗಳನ್ನು ಕೊಡುತ್ತಾರೆ, ನೋಡಿಕೊ" ಎಂದನು. ಇನ್ನೊಬ್ಬನು "ಅವನ ತಲೆ ಹೋದರೆ ಸಾಲದೇ" ಎಂದುಸುರಿದನು.

ಮರುದಿನ ಬೆಳಿಗ್ಗೆ ಸಾಧಾರಣ ಹತ್ತು ಗಂಟೆಯ ಸಮಯ- ಅರಮನೆಯ ಚೌಕಟ್ಟಿನಲ್ಲಿ ಅನೇಕ ಜನರು ನೆರೆದಿದ್ದಾರೆ. ರಾಜನು ಉಪ್ಪರಿಗೆಯಲ್ಲಿ ಜಗಜಗಿಸುವ ಸಿಂಹಾಸನದಲ್ಲಿ ಬಂದು ಕುಳಿತನು. ತನ್ನ ದಿವಾನರೂ, ಸೇನಾಧೀಶರೂ ಯೋಗ್ಯತೆಗನುಸಾರವಾದ ಪೀಠಗಳಲ್ಲಿ ಕುಳಿತರು. ಈರ್ವ ಬಾಲೆಯರು ರಾಜನಿಗೆ ಚಾಮರಗಳಿಂದ ಗಾಳಿ ಬೀಸುತ್ತಿದ್ದರು.

ರಾಜನು ಸಿಂಹಾಸನದಲ್ಲಿ ಕುಳಿತ ಸ್ವಲ್ಪ ಸಮಯದಲ್ಲಿಯೇ ಸ್ತ್ರೀ ಸಮೂಹವೊಂದು ರಾಜನೆಡೆ ಬಂದು ನಿಂತಿತು. ಅದರಲ್ಲಿ ಅರಸನ ಪ್ರೇಮ ಪುತ್ರಿ ದೇವಮ್ಮಾಜಿಯು ಒಡೆದು ಕಾಣುತ್ತಿದ್ದಳು. ಆಕೆಗೆ ಸಾಧಾರಣ ಹದಿನಾರು ವರ್ಷ ಪ್ರಾಯವಾಗಿರಬಹುದು. ನೀಲವರ್ಣದ ಸೀರೆಯನ್ನುಟ್ಟಿದ್ದ ಆಕೆಯ ವದನವು ನೀಲಾಕಾಶದಲ್ಲಿ ಆಗ ತಾನೆ ಮೂಡಿದ ಪೂರ್ಣಿಮಾ ಚಂದ್ರನೋ ಎಂಬಂತೆ ತೋರುತ್ತಿದ್ದಿತು. ಅರಳಿದ ಪದ್ಮದಲ್ಲಿ ಮಧುಪಾನಕ್ಕೆಂದೆರಗಿದ ಭೃಂಗಗಳೋ ಎಂಬಂತಿದ್ದ ವದನಕ್ಕೆ ತಕ್ಕ ನೇತ್ರದ್ವಯಗಳು. ನಿಬಿಡವಾಗಿ ಬೆಳೆದ ಕೇಶರಾಶಿಯು ತುರುಬು ಕಟ್ಟಲ್ಪಟ್ಟು ಮಲ್ಲಿಗೆಯಿಂದಲಂಕರಿಸಲ್ಪಟ್ಟಿದ್ದಿತು. ಗಿಳಿಯ ಕೊಕ್ಕಿನಂತೆ ಬಾಗಿ ಚಂಪಕದೆಸಳನ್ನು ಹೋಲುವ ನಾಸಿಕ! ಮಂದಸ್ಮಿತ! ನಸುಲಜ್ಜೆ ನಗುಮೊಗದೊಳಂಕುರಿಸಿತ್ತು. ಬಡವಾದ ನಡು, ಉಬ್ಬಿದ ಎದೆ, ತುಂಬಿದ ಬಾಹು ಇವುಗಳಿಂದ ಕೂಡಿದ ದೇವಮ್ಮಾಜಿಯು ಯೌವ್ವನದೇಳ್ಗೆಯಿಂದ ಮೆರೆಯುತ್ತಿದ್ದಳು.

ಇಷ್ಟರಲ್ಲಿ ಐಯಪ್ಪನು ಬಂದು ಕೆಳಗಿನ ಚೌಕಟ್ಟಿನಲ್ಲಿ ನಿಂತನು. ಅವನ ಪರಿಪುಷ್ಟವಾದ ದೇಹ, ಅಜಾನುಬಾಹುಗಳು, ವಿಶಾಲವಾದ ವಕ್ಷಸ್ಥಳ, ಹೂಂಕಾರದಿಂದೆಸೆಯುತ್ತಿದ್ದ ವದನವೂ—ಇವುಗಳು ವೀರರಸವನ್ನು ಹೊರಹೊಮ್ಮುತ್ತಿವೆಯೋ ಎಂಬಂತೆ ತೋರುತ್ತಿದ್ದವು. ಹುರಿಮಾಡಿದ ಮೀಸೆ, ಗುಂಗುರು ಗುಂಗುರಾದ ಕೂದಲುಗಳು ಅವನ ಗಾಂಭೀರ್ಯತೆಯನ್ನು ಹೆಚ್ಚಿಸುತ್ತಿದ್ದುವು. ಕೊಡಗು ಯೋಧನಿಗೆ ಒಪ್ಪುವಂತಹ 'ದಟ್ಟಿ ಕುಪ್ಪಸ'ವನ್ನು ಧರಿಸಿದ್ದ ಐಯಪ್ಪನು ಬಂದು ನಿಲ್ಲಲು ಸರ್ವರ ದೃಷ್ಟಿಯೂ ಆ ಕಡೆಯಾಯಿತು. ಐಯ್ಯಪ್ಪನು ಚೌಕಟ್ಟಿನಲ್ಲಿ ನಿಂತ ಸ್ವಲ್ಪ ಸಮಯದಲ್ಲಿಯೇ ಅರಸನು ತನ್ನ ಮುದ್ದು ಮಗಳಾದ ದೇವಮ್ಮಾಜಿಯನ್ನು ಹತ್ತಿರ ಕರೆದು, ಆ ಕೊಡಗು ವೀರನನ್ನು ಅವಳಿಗೆ ತೋರಿಸಿ "ಮಗೂ, ಆ ವೀರನನ್ನು ವರಿಸುವೆಯಾ?" ಎಂದು ಕೇಳಿದನು. ಒಮ್ಮೆ ಆಕೆಯ ವದನಮಂಡಲದಲ್ಲಿನ 'ಭೃಂಗ'ಗಳು ಆ ವೀರನ ಕಡೆಗೆ ಹಾರಿದುವು; ಹಾಗೂ ತಲೆಯನ್ನು ಕುಗ್ಗಿಸಿದಳು! ಮುಖವು ಲಜ್ಜೆಯಿಂದಲೂ ಆನಂದಯುಕ್ತವಾದ ಮುಗುಳ್ನಗೆಯಿಂದಲೂ ಪರಿಪೂರ್ಣವಾಯಿತು! ಇನ್ನೇಕೆ ಅವಳ ಉತ್ತರ?

ಶುಭಲಗ್ನದಲ್ಲಿ ಐಯ್ಯಪ್ಪನಿಗೆ ದೇವಮ್ಮಾಜಿಯನ್ನು ಕೊಟ್ಟು ವಿವಾಹವಾಯಿತು. ವರನ "ಐಯ್ಯಪ್ಪ"ನೆಂಬ ಹೆಸರನ್ನು "ಚೆನ್ನ ಬಸಪ್ಪ"ನೆಂಬ ಹೆಸರಿಗೆ ಬದಲಾಯಿಸಿದರು. ಐಯ್ಯಪ್ಪನು ಅಂದಿನಿಂದ ಲಿಂಗಾಯತನಾದನು. ದೇವಮ್ಮಾಜಿ ಚೆನ್ನಬಸವರಿಗೆ ಚಿಪ್ಪುನಾಡಿನ ಪನ್ನಯದಲ್ಲಿ ಒಂದು ಅರಮನೆಯನ್ನು ಕಟ್ಟಿ ಒಂದು ಜಾಗೀರು ಕೊಡಲ್ಪಟ್ಟಿತು. ಇದಾದ ಕೆಲವು ತಿಂಗಳುಗಳಲ್ಲೇ ಲಿಂಗರಾಜನು ಪರಂಧಾಮವನ್ನೈದಿದನು.

ಲಿಂಗರಾಜನ ಮರಣಾನಂತರ (ಚಿಕ್ಕ) ವೀರರಾಜನು ಪಟ್ಟಕ್ಕೆ ಬಂದನು. ಇವನೇ ಕೊಡಗಿನ ಕಡೇ ಅರಸನು. ಇವನು ಸ್ವಭಾವತಃ ಸದ್ಗುಣ ಸಂಪನ್ನನಾಗಿದ್ದರೂ, ಕುಂಟ ಬಸವನೆಂಬೊಬ್ಬ ದಿವಾನನ (ಇವನು ಮೊದಲು ಲಿಂಗರಾಜನ ನಾಯಿ ಸಾಕುವವನಾಗಿದ್ದು ಕಡೆಗೆ ಈ ಪದವಿಗೇರಿದನು) ಚೇಷ್ಟೆಗೆ ಸಿಲುಕಿ, ವಿಷಯಾಲೋಲನಾಗಿ ಹುಚ್ಚನಂತೆ ಆಡತೊಡಗಿದನು. ಕುಂಟ ಬಸವನು ತನ್ನ ಪದವಿಗೆಲ್ಲಿ ಕುಂದು ಬರುವುದೋ ಎಂಬ ಭೀತಿಯಿಂದ ಅನೇಕ ವೀರರನ್ನೂ ಬುದ್ಧಿವಂತರನ್ನೂ ರಾಜನಿಂದ ಕೊಲ್ಲಿಸಿದನು.

ವೀರರಾಜನ ಭಾವನಾದ ಚೆನ್ನಬಸವನು ರಾಜನಲ್ಲಿ ಪ್ರೀತಿಯಿಂದಿರುವುದನ್ನು ಕಂಡು ಇವನನ್ನು ಸಂಹರಿಸುವ ಪ್ರಯತ್ನವನ್ನು ಕುಂಟ ಬಸವನು ಮಾಡಲೆತ್ನಿಸಿದನು. ಚೆನ್ನಬಸವ ದೇವಮ್ಮಾಜಿಯವರು ರಾಜ್ಯವನ್ನು ಸೆಳೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದು ಕುಂಟ ಬಸವನು ರಾಜನಿಗೆ ಉಪದೇಶಿಸಿದನು.

ಕ್ರೈಸ್ತಾಬ್ದ ಸಾವಿರದ ಎಂಟುನೂರ ಮೂವತ್ತನಾಲ್ಕನೆಯ ಸಂವತ್ಸರ ಪ್ರಾರಂಭ. ಮಧ್ಯಾಹ್ನ. ಭೀಕರಾಕೃತಿಗಳುಳ್ಳ ನಾಲ್ವತ್ತು ಮಂದಿ ಸವಾರರು ದೇವಮ್ಮಾಜಿಯ ಅರಮನೆಯ ಮುಂದೆ ನಿಂತರು—"ನಿಮ್ಮ ಬಾಲಕನನ್ನು ಕಳುಹಿಸಿಕೊಡಬೇಕೆಂದು ರಾಜಾಜ್ಞೆಯಾಗಿದೆ" ಎಂದರು. (ಚೆನ್ನಬಸವನಿಗೆ ದೇವಮ್ಮಾಜಿಯಲ್ಲಿ ಎಂಟು ವರ್ಷದ ಬಾಲಕನೋರ್ವನು ಮಾತ್ರ ಇದ್ದನು.)

"ರಾಜನಿಗೆ ನಮ್ಮ ಕೂಸನ್ನೇಕೆ ಕೊಡಬೇಕು?" ಎಂದು ದೇವಮ್ಮಾಜಿಯು ಕೇಳಿದಳು. ಆದರೆ ಸವಾರರು ಪ್ರಶ್ನೆಗೆ ಕಿವಿಗೊಡದೆ, ಅರಮನೆಯ ಒಳಹೊಕ್ಕು ಕೂಸನ್ನೆತ್ತಿಕೊಂಡು ಹಿಂತೆರಳಿದರು.

ಅಂದು ಸಾಯಂಕಾಲ ಸಾಧಾರಣ ಆರು ಗಂಟೆಯ ಸಮಯಕ್ಕೆ ವೀರರಾಜನು ಸ್ವತಹಃ ಆ ಕೂಸನ್ನು ಮೇಲಕ್ಕೆಸೆದು ತನ್ನ ಖಡ್ಗವನ್ನು ಅಡ್ಡವಾಗಿ ಹಿಡಿದನು! ಬಾಲಕನು ಎರಡು ತುಂಡಾಗಿ ನೆಲಕ್ಕೆ ಬಿದ್ದನು.!

ಇತ್ತ ದೇವಮ್ಮಾಜಿ ಚೆನ್ನಬಸವರು, ತಮ್ಮ ಕುಮಾರನಿಗೆ ಒದಗಿದ ಸ್ಥಿತಿಯನ್ನರಿತರು. ತಮ್ಮ ಪ್ರಾಣಕ್ಕೂ ಹಾನಿಬರುವುದೆಂದು ಆ ದಿನವೇ ರಾತ್ರಿ ಬೆಂಗಳೂರಿಗೆ ಹೊರಟರು. ಅವರೊಂದಿಗೆ ಬೋಯಿಗಳಂತೆ ವೇಷ ಧರಿಸಿದ ಹದಿನಾರು ಯೋಧರಿದ್ದರು. ಇವರು ದೇವಮ್ಮಾಜಿ ಚೆನ್ನಬಸವರನ್ನು ಬೇರೆ ಬೇರೆ ಪಲ್ಲಕಿಗಳಲ್ಲಿ ಹೊತ್ತುಕೊಂಡು ಬೆಂಗಳೂರಿಗೆ ಹೊರಟರು. ಈ ಸಂಗತಿಯು ರಾಜನಿಗೆ ಗೂಢಚಾರರಿಂದ ತಿಳಿದು ಇವರನ್ನು ದಾರಿಯಲ್ಲಿ ತಡೆಯಲು "ಮೊಳ್ಳಿಯ ಬಕ್ಕ" ಎಂಬಲ್ಲಿ ಅಲ್ಲಿಯ 'ಉಕ್ಕಡ'ದವರಿಗೆ ಆಜ್ಞಾಪಿಸಿದನು.

ಪನ್ನೆಯದಿಂದ ಹೊರಟ ದೇವಮ್ಮಾಜಿ ಚೆನ್ನಬಸವರು ಅಮ್ಮತಿನಾಡಿನ ಕಾವಾಡಿ ಗ್ರಾಮವನ್ನು ದಾಟಿ ಹೊಸೂರು ಗ್ರಾಮವನ್ನು ತಲಪಿ 'ಮೊಳ್ಳಿಯ ಬಕ್ಕ'ಕ್ಕಾಗಿ ಹೋದರು. ಒಮ್ಮೆಗೆ ಗುಂಡಿನ ಮಳೆಯು

ಸುರಿಯಲಾರಂಭವಾಯಿತು!! ಒಡನೆಯೇ 'ಭೋಯಿ'ಗಳು ಪಲ್ಲಕಿಯನ್ನು ಕೆಳಗಿರಿಸಿ, ತಾವೂ ಗುಂಡೊಡೆಯಲು ಪ್ರಾರಂಭಿಸಿದರು. ಚೆನ್ನಬಸವನು ಒಂದು ಗುಂಡಿಗೆ ಮೂರು ನಾಲ್ಕು ಜನರನ್ನು ಉರುಳಿಸಲಾರಂಭಿಸಿದನು. ಕ್ಷಣಮಾತ್ರದಲ್ಲಿ ವೊಳ್ಳೆ ಮನೆಯ ಯೋದ್ಧರು ಪಲಾಯನ ಗೈದರು. ದೇವಮ್ಮಾಜಿಯು ಪತಿಗೇನಾದರೂ ಅಪಾಯ ಸಂಭವಿಸಿತೋ ಎಂದು ನೋಡಲು ಕುತೂಹಲಳಾದಳು. ಆಕೆಯು ಪಲ್ಲಕಿಯಿಂದ ಹೊರ ಬಂದು ಪತಿಯನ್ನು ನೋಡುವ ಸಮಯದಲ್ಲಿ ಓಡಿ ಹೋಗದೆ ಅಲ್ಲಿಯೇ ಅವಿತಿದ್ದ ರಾಜನ ಯೋಧನೊಬ್ಬನು ಗುಂಡು ಹಾರಿಸಿದನು. ಅದು ಚೆನ್ನಬಸವನ ಎಡ ತೋಳಿಗೆ ತಗಲಿ, ಅವನ ಜೀವಮಾನದಲ್ಲಿ ಉಪಯೋಗಕ್ಕೆ ಬಾರದಂತಾಯಿತು. ಹಾಗೆ ಗುಂಡು ಹಾರಿಸಿದ ಯೋಧನ ಶರೀರವೂ ಕ್ಷಣಮಾತ್ರದಲ್ಲಿ ನೆಲಕ್ಕುರುಳಿತು!

ಪೆರಿಯಾ ಪಟ್ಟಣದಲ್ಲಿ ಇವರಿಗೆ ಸ್ವಲ್ಪ ಅಭ್ಯಂತರವಾಯಿತು. ಆದರೆ ಪ್ರವ್ಯದಾಸೆಗೆ ಕಟ್ಟುಬಿದ್ದು ಅಲ್ಲಿಯ ನಗರ ರಕ್ಷಕನು ಇವರನ್ನು ಮುಂದಾಗಲು ಬಿಟ್ಟನು. ಹೇಗೂ ಬೆಂಗಳೂರಿಗೆ ಕೆಲವು ದಿನಗಳಲ್ಲಿಯೇ ತಲಪಿದರು.

ಇತ್ತ, ಚೆನ್ನಬಸವದೇವಮ್ಮಾಜಿಯುವರ ಪಲಾಯನಕ್ಕೆ ಮುದ್ದ್ಯೆಯನೆ ಕಾರಣವೆಂದು ರಾಜನು ಅವನ ತಲೆ ಕಡಿಸಿದನು. ಚೆನ್ನ ಬಸವದೇವಮ್ಮಾಜಿಯರನ್ನು ಹಿಂದೆ ಕಳುಹಿಸತಕ್ಕದ್ದು ಎಂದು ಇಂಗ್ಲೀಷ ಕಂಪೆನಿಯವರಿಗೆ ಬರೆದನು. ಆದರೆ ಆಂಗ್ಲೇಯರು ಅವರನ್ನು ಕಳುಹಿಸುವುದರ ಬದಲಾಗಿ ರಾಜನಿಗೆ, ತನ್ನ ಆಡಳಿತವನ್ನು ಒಳ್ಳೇ ಸ್ಥಿತಿಗೆ ತರಬೇಕೆಂದೂ, ಇಲ್ಲವಾದರೆ ಅವರ ಸೈನ್ಯವು ಕೊಡಗಿನ ಒಳನುಗ್ಗುವುದೆಂದೂ ಬರೆದು ಕಳುಹಿಸಿದರು. ಒಂದು ಲಕೋಟೆಯೊಳಗೆ ಸ್ವಲ್ಪ ರಾಗಿಯನ್ನು ಹಾಕಿ ಆ ರೀತಿ ಸೈನ್ಯವು ಒಳನುಗ್ಗುವುದೆಂದು ಬರೆದರು. ಇದಕ್ಕೆ ಉತ್ತರವಾಗಿ ರಾಜನು ರಾಗಿಯನ್ನು ಪುಡಿ ಮಾಡಿ "ನಿಮ್ಮ ಸೈನ್ಯವು ಬಂದರೆ ಈ ರೀತಿ ಪುಡಿಮಾಡಿ ಕಳುಹಿಸುವೆನೆ"ಂದು ಬರೆದನು. ರಾಗಿ ಪುಡಿಯನ್ನು ಹಿಂದಕ್ಕೆ ಕಳುಹಿಸಿದನು.

ಇಂಗ್ಲಿಷ ಸೈನ್ಯವು ನಾಲ್ಕು ಕಡೆಗಳಿಂದ ಕೊಡಗಿನ ಒಳನುಗ್ಗಿತು. ದಕ್ಷಿಣ ಕನ್ನಡದಿಂದ ಸಂಪಾಜೆಗಾಗಿ ಬಂದ ಸೈನ್ಯವನ್ನು ಕೊಡಗು ವೀರರು ಪುಡಿಮಾಡಿದರು. ಮಲೆಯಾಳದಿಂದ ಹೆಗ್ಗಳ ಕಣಿವೆಗಾಗಿ ಬಂದವರನ್ನೂ ಸೋಲಿಸಿದರು. ಉತ್ತರ ಕೊಡಗಿಗಾಗಿ ಬಂದ ಸೈನ್ಯದೊಂದಿಗೆ ಯುದ್ಧ ಮಾಡುತ್ತಲೇ ಇದ್ದರು. ಆದರೆ ಕರ್ನಲ್ ಫ್ರೇಸರನ ಕೈ ಕೆಳಗಿನ ಸೈನ್ಯವು ಕುಶಾಲ್ ನಗರವನ್ನು ತಲಪಲು, ಹಲವು ಕೊಡಗರು ಇಂಗ್ಲೀಷರಿಗೆ ಶರಣಾಗತರಾಗಿ ಅವರೇ ಆಳತಕ್ಕದ್ದೆಂದು ಅವರನ್ನು ಮೆರವಣಿಗೆಯಿಂದ ಕೊಡಗಿಗೆ ಕರತಂದರು. ಕ್ರೈಸ್ತಾಬ್ಧ ಸಾವಿರದ ಎಂಟುನೂರ ಮೂವತ್ತನಾಲ್ಕನೆಯ ಸಂವತ್ಸರದ ಮೇ ತಿಂಗಳು ಏಳರಲ್ಲಿ ಮಡಿಕೇರಿ ಅರಮನೆಯಲ್ಲಿ ಆಂಗ್ಲೇಯ ಪತಾಕೆಯು ಹಾರಲು ಮೊದಲಾಯಿತು.

ಇತ್ತ ರಾಜನು ನಾಲ್ಕುನಾಡಿ ಅರಮನೆಗೆ ಓಡಿಹೋದನು. ಕುಂಟಬಸವನು ತನಗೆ ಉಳಿಗಾಲವಿಲ್ಲವೆಂದು ನೇಣುಹಾಕಿಕೊಂಡು ಸತ್ತನು. ರಾಜನನ್ನು ನಾಲ್ಕುನಾಡು ಅರಮನೆಯಿಂದ ಹಿಡಿದು ತರಿಸಿ ಇಂಗ್ಲೀಷರಿಗೆ ಶರಣಾಗತನಾಗುವಂತೆ ಮಾಡಿದರು. ಸಂಪಾಜೆ ಕದನದ ವೀರನೊಬ್ಬನು ರಾಜನ ಸ್ಥಿತಿಯನ್ನರಿತು ಅರಮನೆಗೆ ಓಡಿ ಹೋಗಿ ರಾಜನಿಗೆ ನಮಸ್ಕರಿಸಿ "ಪ್ರಭೂ! ಅಪ್ಪಣೆ ಕೊಟ್ಟರೆ ಈ ಬಿಳೀ ಮುಖದವರನ್ನು ಸಂಹರಿಸುವೆನು" ಎಂದನು. ರಾಜನು ಏನೂ ಹೇಳದಿರಲು, ಫ್ರೇಸರ್ ಸಾಹೇಬರು 'ನಿನ್ನ ಪರಾಕ್ರಮವು ಎಷ್ಟಿದೆ ತೋರಿಸು" ಎಂದು ಹೇಳಲು, ಆ ವೀರನು ತನ್ನ ಕತ್ತಿಯಿಂದ ಅರಮನೆಯ ಕಲ್ಲಿನ ಕಂಬಕ್ಕೆ ಹೊಡೆಯಲು, ಕಂಬದ ಒಂದು ಚೂರು ಹಾರಿ ಹೋದದ್ದು ಈಗಲೂ ಕಂಡುಬರುತ್ತದೆ!

ಇಂಗ್ಲಿಷರು ರಾಜನಿಗೆ ಸ್ವಲ್ಪ ವೇತನ ಕೊಟ್ಟು ಕೆಲವು ಕಾಲ ವೆಲ್ಲೂರಿನಲ್ಲಿರಿಸಿದರು. ರಾಜನು ಅಲ್ಲಿಂದ ಕಾಶಿಗೆ ಹೋಗಿ ಅಲ್ಲಿ ಕೆಲವು ಕಾಲವಿದ್ದು ವಿಲಾಯತಿಗೆ ತೆರಳಿದನು. ಅಲ್ಲಿ, ತನ್ನ ಗೌರಮ್ಮನೆಂಬ ಮಗಳನ್ನು ಕ್ರೈಸ್ತ ಮತಕ್ಕೆ ಸೇರಿಸಿ, ವಿಕ್ಟೋರಿಯಾ ರಾಣಿಯನ್ನು ಸಾಕು ತಾಯಿ (Godmother)ಯಾಗಿ ಮಾಡಿದನು. ಗೌರಮ್ಮನನ್ನು ಕರ್ನೆಲ್ ಕೇಂಪ್ ಬೆಲ್ ಎಂಬವನಿಗೆ ಕೊಟ್ಟು ಮದುವೆಯಾಯಿತು. ಇವನು ಆಕೆಯೊಂದಿಗೆ ಮೂರು ವರ್ಷಗಳ ವರೆಗೆ ಇದ್ದು ಒಂದು ದಿನ ಅವಳ ಒಡವೆ ವಸ್ತುಗಳನ್ನು ಅಪಹರಿಸಿಕೊಂಡು ಎಲ್ಲಿಯೋ ಕಾಣದಾಗಿ ಬಿಟ್ಟನು. ಇವರಿಗೆ ಹುಟ್ಟಿದ ಒಬ್ಬಳು ಮಗಳು ಕರ್ನಲ್ ಯಾರ್ಡ್ಲೆ ಎಂಬವನೊಬ್ಬನಿಗೆ ಮದುವೆ ಮಾಡಲ್ಪಟ್ಟಳು. (ಗೌರಮ್ಮನ ದುಃಖಕರವಾದ ಚರಿತ್ರೆಯು ಬಹಳವಿದೆ; ಸ್ಥಳ ಸಂಕೋಚದಿಂದ ಬರೆಯಲಾಗುವುದಿಲ್ಲ.) ರಾಜನು ಕಂಪೆನಿಯವರ ಮೇಲೆ ಒಂದು ದಾವಾ ನಡೆಸಿದನು. ಇದರಿಂದ ಏನೂ ಪ್ರಯೋಜನವೂ ಆಗಲಿಲ್ಲ. ಅವನು ಲಂಡನಿನಲ್ಲಿಯೇ ತೀರಿ ಹೋದನು.

ಇತ್ತ ಚೆನ್ನಬಸವ ದೇವಮ್ಮಾಜಿಯರು ತಮ್ಮ ಪನ್ನೆಯದ ಜಾಗೀರಿನಲ್ಲಿ ಕೆಲವು ಕಾಲ ಸುಖದಲ್ಲಿದ್ದರು. ತಮ್ಮ ಹೆಣ್ಣು ಮಗಳನ್ನು ಮೈಸೂರಿನ ಒಬ್ಬ ಲಿಂಗಾಯತನಿಗೆ ಕೊಟ್ಟು ಮದುವೆ ಮಾಡಿದರು. ಚೆನ್ನಬಸವನು ಕೊಡಗು ಪ್ರಾಂತ್ಯವು ಇಂಗ್ಲೀಷರ ಕೈವಶವಾದ ಕೆಲವು ವರ್ಷಗಳಲ್ಲೇ ಕಾಲವಾದನು. ಆದರೆ ದೇವಮ್ಮಾಜಿಯು ತಾನು ಹಣ್ಣು ಹಣ್ಣು ಮುದುಕಿಯಾಗುವ ವರೆಗೆ ಇದ್ದು (೧೮೫೫?) ರಲ್ಲಿ ಶಿವಾಧೀನಳಾದಳು. ದೇವಮ್ಮಾಜಿಯ ಮಗನು (ಎಲ್ಲಾ ಮಾರಲ್ಪಟ್ಟು ಹೆಸರಿಗೆ ಮಾತ್ರ ಜಾಗೀರೆಂದೆನ್ನಿಸಿಕೊಳ್ಳುವ) ದೇವಮ್ಮಾಜಿಯ ಜಾಗೀರಿಗೆ ಒಡೆಯನಾಗಿ ಅಪ್ಪಂಗಳದಲ್ಲಿ ಈಗಲೂ ಇರುವವನಾಗಿದ್ದಾನೆ.

ಅಂಬಿಗರ ಹಾಡು.

ಓಡ ಬಂದಿದೆ ಓಡ, ಬೆಡಗಿನ ಬೀಡ
ಕಾಡು ಮನುಜರ ಕಡಲಿನ ಓಡ!
ಬೇಗ ಬನ್ನಿರಿ ಗೆಳೆಯರೆ– ಸಾಗಿ ಬನ್ನಿರಿ
ಕೂಗಿ ಕೊಳಲನು ದೋಣಿಯೊಳಗೆ–
ನೀರ ಮೇಲೆ ಬಯಲ ದೋಣಿಯಲ್ಲಿ –
ಕಾರತಿಂಗಳ ನೆರೆ ಹೊಮ್ಮುವಲ್ಲಿ—
ಓಡ ಬಿಡುವಾ–ಓಡ–ಗೆಳೆಯರೆ
ಕಾಡ ನೆರೆಯ ಮಂಜುಲ ತೊರೆಯಲ್ಲಿ.

ಕಾಡಿ ಬೇಡಿದರೆ ಕೊಡರು ಸ್ವರಾಜ್ಯ
ನಾಡ ಗುಡಿಯಲಿ ನಿಂತು ಸೇವಿಸಿದರೆ –
ಬಿಡರು ಹಿಂದುಮಾತೆಯ ದಾಸ್ಯದಿಂ
ನಾಡಜನರೆ, ಬೇಗ ಬನ್ನಿರಿ, ಕಡಲ–
ಓಡಕೆ ನೆಗೆಯಿರಿ; ತಗ್ಗ ದೇಶದಾ—
ಆಂಗ್ಲರಽ ಮೀರುವಽ, ತೆಪ್ಪದಲಿ;
ಗುಂಡು ಮದ್ದನು ಯೆರೆಯದಾ–
ಪ್ರೇಮ ಸಮರದ ತೆರೆಯ–
ಮರೆಯ ಓಡವಲಿ ಇನಿಯ.

ರಾಮಚಂದ್ರ ಭಟ್ಟ.

ದಿವಂಗತ ಪಟೇಲರು

ಕಮಲವು ಕೆಸರಲ್ಲಿ ಉದ್ಭವಿಸಿದಂತೆ ಪಟೇಲರು ಒಂದು ಬಡ ಸಂಸಾರದಲ್ಲಿ ಹುಟ್ಟಿದರು. ಬಡವರಾದ ಅವರ ಹಿರಿಯರು ವ್ಯವಸಾಯಿಗಳಾಗಿದ್ದರು. ಅವರ ಜನ್ಮ ಸ್ಥಳವಾದರೂ ಒಂದು ಹಳ್ಳಿ—ಗುಜರಾಥ ಪ್ರಾಂತ್ಯದ ನದಿಯಾಡ್ ಎಂಬ ಹಳ್ಳಿ. ಬಾಲ್ಯದಲ್ಲೇ ಅವರ ಒಡಲಲ್ಲಿ ಬಡವ ಬಲ್ಲಿದನೆಂಬ ಭೇದಕ್ಕೆ ಎಡೆಯಿದ್ದಿಲ್ಲ; ಮೇಲು ಕೀಳೆನ್ನದೆ, ಉಚ್ಚ ನೀಚನೆನ್ನದೆ, ಬಡವ ಬಲ್ಲಿದನೆನ್ನದೆ ಎಲ್ಲರನ್ನೂ ಒಂದೇ ತೆರನಾಗಿ ಪವಿತ್ರ ಹೃದಯದಿಂದ ಪ್ರೀತಿಸುತ್ತಿದ್ದರು. ತನ್ನ ಎಳೆಯ ನಗೆಯಿಂದ—ನಗುಮೊಗದಿಂದ—ಬಾಲಲೀಲೆಯಿಂದ ಎಲ್ಲರನ್ನೂ ಸೊಗಬಡಿಸಿ ದಿನದಿನಕ್ಕೆ ಶುಕ್ಲ ಪಕ್ಷದ ಚಂದ್ರನಂತೆ ಬೆಳೆಯುತ್ತಾ ಬಂದರು.

ಸ್ವನಾಡಿನಲ್ಲಿ ಕಲಿಯುವುದನ್ನೆಲ್ಲಾ ಕಲಿತು ವಿಲಾಯತಿಗೆ ಪಟೇಲರು ಪ್ರಯಾಣ ಮಾಡಿದರು. ಅಲ್ಲಿ ವಕೀಲಿಯ ಅಧ್ಯಯನವನ್ನು ಮುಗಿಸಿಕೊಂಡು ಬೊಂಬಾಯಿಗೆ ಬಂದು ಹೈಕೋರ್ಟಿನ ವಕೀಲರಾದರು. ವಕೀಲವೃತ್ತಿಯಿಂದಾಗಿ ಉತ್ಪತ್ತಿಯೇನೂ ಕಡಿಮೆಯಿರಲಿಲ್ಲ. ಈಗ ಪಟೇಲರೆಂದರೆ ಮೊದಲಿನ ಬಡವರಲ್ಲ – ಒಡೆಯರು. ಬೇಕಾದ್ದನ್ನು ಮಾಡಲು ಹಣದ ರಾಶಿಯೇ ಅವರ ಬಳಿಯಲ್ಲಿ ಇತ್ತೆಂದರೆ. ಅವರೂ ಒಬ್ಬ ಲಕ್ಷ್ಮೀಪುತ್ರರಲ್ಲದೆ ಮತ್ತಾರು?

ಪಟೇಲರ ಕೈಗೆ ಧನವು ಸೇರಿದಂತೆಯೇ ಅವರ ಹೃದಯವೂ ಅಲ್ಲೋಲಕಲ್ಲೋಲವಾಗ ತೊಡಗಿತು—"ಒಂದೆಡೆ ಕಣ್ಣೀರಿಳಿಸುವ ಬಡವರು. ಇನ್ನೊಂದೆಡೆ ಸುಖಲೋಲ ವಶರಾದ ಶ್ರೀಮಂತರು; ಅವರದೇ ಸಾಲಿನಲ್ಲಿ ನಾನಿರುವೆನು-ಬಡವರು ಕರಗಿ, ಕೊರಗಿ—ಸೊರಗುತ್ತಿದ್ದಾರೆ. ಅವನ ಬಡ ಹೊಟ್ಟೆಯು ಒಂದು ಹಿಡಿ ಕೂಳಿಗಾಗಿ ಹಲವೊಮ್ಮೆ ಈರಾರು ದಿನಗಳನ್ನು ಕಳೆದುದೂ ಇದೆ. ಹಾಯ್! ಅದೆಷ್ಟು ಜನ ಬಡವರು ಧನಿಕರ ಧನದರ್ಪದಿಂದಾದ ಜೀವನ್ಮೃತರಾಗಿಲ್ಲ? ಅದೆಷ್ಟು ಜನರು ತಮ್ಮದೊಂದರ ಹೊಟ್ಟೆಗಾಗಿ ಬದುಕನ್ನು ತೊರೆದಿಲ್ಲ? ಅದೆಷ್ಟು ಜನರು ಬಡ ಬದುಕನ್ನು ಉಳಿಸುದರ ಸಲುವಾಗಿ ಖೂನಿ—ದರೋಡೆ ಮೊದಲಾದ ಹೀನಕೃತ್ಯಗಳನ್ನು ಮಾಡುವುದಿಲ್ಲ? ಹಾಯ್! ಬಡತನವೇ ನಿನ್ನ ಮಹಿಮೆಯಾದರೂ ಎಂತಹದು! ನನ್ನ ದೇಶದಲ್ಲಿ ಬಹಳ ಜನರು ಬೆಂದು ಬಾಡಿ ಬಳಲುತ್ತಿರುವಾಗ ನಾನು—ನನ್ನದೊಂದು ಕ್ಷುಲ್ಲಕ ಜೀವನದ ಸಲುವಾಗಿ—ಇಷ್ಟೊಂದು ಹಣವನ್ನು ವೃಥಾ ಮೋಜಿಗಾಗಿ ವ್ಯಯಿಸುವೆನೇಕೆ? ನಾನೂ ಬಡವರಂತೆ ಜೀವನವನ್ನು ಸಾಗಿಸಬಾರದೇಕೆ?"—ಒಂದಲ್ಲ, ಹಲವು ತರದ ಬಡವರ, ತನ್ನ ದೇಶದ ದೀನರ ಚಿತ್ರವು ಪಟೇಲರ ಹೃದಯದಲ್ಲಿ ಉದಯಿಸಲು ಮೊದಲಾಗಿ ಮನಸ್ಸು ಕರಗಿ ನೀರಾಯಿತು. ಅಂದೇ ಅವರು ತನ ಮಿತಿಮೀರಿದ ವ್ಯಯವನ್ನು ಕಡಿಮೆ ಮಾಡಿದರು ಪರದೇಶದ ಅತಿ ಕ್ರಯದ ಬಟ್ಟೆಗಳ ಬದಲಾಗಿ ತನ್ನ ದೇಶದ ಕಡಿಮೆ ಕ್ರಯದ ದೊರಗು ಬಟ್ಟೆಗಳನ್ನು ತೊಡಲು ಮೊದಲು ಮಾಡಿದರು. ತನ್ನ ದೃಷ್ಟಿಯನ್ನು ಬಡವರ ಕಡೆಗೆ ತಿರುಗಿಸಿ—ಬಡವರೊಡನೆ ತಾನೂ ಬಡವನಾಗಿ ಬೆರೆತರು. ಬಡವರಿಗೆ ತನ್ನಿಂದಾದಷ್ಟು—ಕೈಲಾದಷ್ಟು ಸಹಾಯವನ್ನು ಮಾಡಲು ತೊಡಗಿದರು.

ಮೊದಮೊದಲು ಪಟೇಲರ ಕಾರ್ಯವು ಗುಜರಾಥ ಪ್ರಾಂತ್ಯದಲ್ಲೇ ಅಡಕವಾಗಿತ್ತು. ಬಡ ರೈತರ ಕಷ್ಟಗಳನ್ನು ಕಂಡ ಅವರು ರೆವಿನ್ಯೂ ಆಫೀಸರರೊಡನೆ ಬಡವರ ಸಲುವಾಗಿ ಧೈರ್ಯದಿಂದ ವಾದಿಸಿದರು. ನಂತರ ಅವರು ಮುಂಬಾಯಿ ಶಾಸನ ಸಭಾ ಸದಸ್ಯರಾಗಿ ಬಹಳ ಕೆಲಸಗಳನ್ನು ಮಾಡಿದರು. ೧೯೧೮—೧೯೧೯ರಲ್ಲಿ ಕಾಂಗ್ರೆಸ್ಸಿನ ಜನರಲ್ ಸೆಕ್ರಿಟರಿಗಳಾದರು. ಅಂದಿನಿಂದಲೇ ಕಾಂಗ್ರೆಸಿನಲ್ಲಿ ಒಂದು ನವೀನ ಶಕ್ತಿಯು ಮೊಳಗ ಹತ್ತಿತು. ಅವರು ಕಾಂಗ್ರೆಸ್ಸ್ ಅಂದರೇನು? ಅದರ ನಿಜದಾದ ತತ್ವಗಳಾವುವು? ಎಂಬುದನ್ನೆಲ್ಲ ತಿಳಿಯ ಪಡಿಸಲು ಎಡೆಬಿಡದೆ ಇಂಗ್ಲೆಂಡಿಗೆ ಹೋಗಿ ಬಂದರು. ದೇಶ ಸೇವೆಯನ್ನು ಮಾಡಲು ತೊಡಗಿದರು. ನಾಗಪುರದಲ್ಲೊಂದು ಕಾಂಗ್ರೆಸಿನ ಮಹಾಸಭೆಯ ಅಧಿವೇಶನವಾಯಿತು. ಅಷ್ಟರ ತನಕ ಅವರು ಕಾಂಗ್ರೇಸು ಕಾರ್ಯದರ್ಶಿಗಳಾಗಿದ್ದು ನಂತರ ಆ ಸ್ಥಾನವನ್ನು ಕೀರ್ತಿಶೇಷ ಮೋತಿಲಾಲ ನೆಹರೂರವರಿಗೆ ಬಿಟ್ಟು ಕೊಟ್ಟರು.



ದಿವಂಗತ ಪಟೇಲರು

ಕೇಂದ್ರ ಶಾಸನಸಭೆಯ ಅಧ್ಯಕ್ಷನಾಗುವುದೆಂದರೆ ಅದೊಂದು ಸಾಮಾನ್ಯವಲ್ಲ. ಬಡವರಾಗಿಯೇ ಬೆಳೆದ ಪಟೇಲರನ್ನು ಚುನಾವಣೆಯಲ್ಲಿ ಶಾಸನಸಭಾಪತಿಗಳ ಸ್ಥಾನಕ್ಕೆ ಚುನಾಯಿಸಿದರು. ಆಗವರು ಬಹಳ ಅಮೂಲ ಕೆಲಸಗಳನ್ನು ಮಾಡಿದರು. ಇದು ಸರಕಾರ—ಅದು ಕಾಂಗ್ರೆಸ್ಸು—ಎಂದೆಲ್ಲ ನೋಡದೆ ನ್ಯಾಯವಾದ ಹಾದಿಯಲ್ಲಿ ತಮಗೆ ಸೂಕ್ತ ಕಂಡಂತೆ ನಡೆದರು. ಅವರ ಹಂಗಿಲ್ಲದೆ ನ್ಯಾಯವಾದ ಮಾರ್ಗದಲ್ಲ ನಡೆಯಲು ಹಲವು ಆಂಗ್ಲ ಅಧಿಕಾರಿಗಳಿಗೂ ಆಗದೆ ಹೋಯಿತು ಆದರೆ ಪಟೇಲರು ಹೆದರಲಿಲ್ಲ. ಬೆದರಲಿಲ್ಲ. ದೇಶದ ಬಡವರು ಬಳಲುತ್ತಿದ್ದಾರೆ—ಅವರ ಸೇವೆಯೇ ದೇಶಸೇವೆ! —ತೇಶಸೇವೆ!! ಬಡವರ ದಾಹವನ್ನು ಅಡಗಿಸದ ಹೊರತು ಸರಕಾರದವರಿಗೆ ನಾವು ಖಂಡಿತವಾಗಿಯೂ ಸಹಾಯವನ್ನು ಮಾ

ದಿಲ್ಲ!!!—ಎಂದು ಪಟೇಲರು ಸಾರಿದರು ಪಟೇಲರೆಂದರೆ ನ್ಯಾಯದ ಮೂರ್ತಿ! ಉಗ್ರರೂಪ!! ಅದರಿಂದಾಗಿಯೇ ಎಂತಹನೂ ಪಟೇಲರಿಗೆ ಹೆದರದೆ ಇರಲಿಲ್ಲ.

ಅಧ್ಯಕ್ಷರಾದ ಪಟೇಲರಿಗೂ—ಹಟವಾದಿ ಪ್ರಭುತ್ವದವರಿಗೂ ಕಡೆ ಕಡೆಗೆ ವೈಷಮ್ಯವು ಬೆಳೆಯುತ್ತಾ ಬಂತು. ಸರಕಾರದವರು ತಮ್ಮ ಹಿಡಿದ ಹಟವನ್ನು ಬಿಡದಾದರು. ಬಡರೈತರ ಹೆಚ್ಚಾದ ಕಂದಾಯವನ್ನು ಕಡಿಮೆ ಮಾಡದಾದರು. ದಿನದಿನಕ್ಕೆ ದೇಶದ ಬಡವರ ಮೊರೆಯು ಹೆಚ್ಚಾಗ ಹತ್ತಿತು. ರಾಜಕೀಯ ಸ್ಥಿತಿಗತಿಗಳು ಉಗ್ರರೂಪವನ್ನು ತಾಳಿದುವು. ಮುಖ್ಯವಾಗಿ ಕಾಂಗ್ರೆಸ್ ನಾಯಕರ ದಸ್ತಗಿರಿಯಾಗಲು ಮೊದಲಾಗಿ ಬಡ ರೈತರ ಕಂದಾಯವೂ ಹೆಚ್ಚಾಗಹತ್ತಿತು. ಎಲ್ಲಿ ನೋಡಿದರೂ ಬೊಬ್ಬೆ.—ಬಡವರ ಕರಗಿಸುವ—ಮರುಗಿಸುವ ಕೂಗು. ಇದರಿಂದಾಗಿ ಅವರ ಮನಸ್ಸಿಗೆ ಹೆಚ್ಚಾದ ಪರಿಣಾಮವಾಯಿತು. ಅವರ ಮನಸ್ಸು ಬೆಂದು ನೊಂದು ಅವರು ೧೯೩೦ರಲ್ಲಿ ತಮ್ಮ ಅಧ್ಯಕ್ಷಪದವಿಗೆ ರಾಜಿನಾಮೆಯನ್ನಿತ್ತರು. ಆಗಲೇ ಅವರು ಗವರ್ನರ್ ಜನರಲ್‌ರವರಿಗೆ ಬರೆದದೊಂದು ಪತ್ರದಲ್ಲಿ ಹೀಗೆಂದಿದ್ದರು.—'ನಾನಿನ್ನು ಶಾಸನಸಭೆಯ ಅಧ್ಯಕ್ಷನಾಗಿದ್ದರೆ ಮಾತೃಭೂಮಿಯ ದ್ರೋಹ ಮಾಡಿದಂತಾಗುವುದು. ಈ ಬಡವರ ಸೇವೆಯೇ ದೇಶಸೇವೆ! ದೇಶಸೇವೆಯೇ ಈಶಸೇವೆ!! ಇಂದಿನಿಂದ ನಾನು ನನ್ನ ಬಡ ಸಹೋದರರೊಂದಿಗೆ ಸ್ವಾತಂತ್ರ್ಯ ಯುದ್ಧದಲ್ಲಿ ಭಾಗವಹಿಸುವೆನು."

ಅನಂತರ ದೇಶಸೇವೆಯನ್ನು—ದೇಶದ ಬಡವರ ಸೇವೆಯನ್ನು ಮಾಡಲು ಟೊಂಕಕಟ್ಟಿದರು. ಕೊಂಗ್ರೆಸ್ಸಿನಲ್ಲಿ ಮುಂದಾಳುತನವನ್ನು ವಹಿಸಿ ಕೆಲಸ ಮಾಡಲಾರಂಭಿಸಲು ಅವರ ದಸ್ತಗಿರಿಯಾಯಿತು. ದೇಶದ ಬಡವರ ಬಂಧುವನ್ನು ಸೆರೆಮನೆಗೊಯ್ದರು. ಸೆರೆಮನೆಯಲ್ಲಿದ್ದಾಗ ಅವರ ಆರೋಗ್ಯವು ತೀರಾ ಕೆಟ್ಟುಹೋಯಿತು. ಅದನ್ನು ಕಂಡ ಸರಕಾರದವರು ಶಿಕ್ಷೆಯ ಅವಧಿಯು ಪೂರೈಸುವುದಕ್ಕೆ ಮುಂಚೆಯೇ ಅವರನ್ನು ಬಿಟ್ಟುಬಿಟ್ಟರು. ಅಲ್ಲಿಂದ ಅವರು ವಿಯಾನ್ನಕ್ಕೆ ಶಸ್ತ್ರಕ್ರಿಯೆಗೆಂದು ಹೋದರು. ತನಗೆ ಸ್ವಲ್ಪ ಗುಣಮುಖವಾದದ್ದನ್ನು ಕಂಡು ಅವರು ಲಂಡನಿಗೆ ಹೋದರು. ಅಲ್ಲಿ ಅವರು ದೇಶದ ಬಡತನದ ವಿಷಯವಾಗಿ ಎಲ್ಲರಿಗೂ ಬೋಧಿಸಿದರು. ಪುನಃ ಅಸೌಖ್ಯರಾಗಲು ವಿಯಾನ್ನಕ್ಕೆ ಹೋಗಿ ಚಿಕಿತ್ಸೆ ಪಡೆದು ಅಲ್ಲಿಂದ ಅಮೇರಿಕಾಕ್ಕೆ ಪ್ರಯಾಣ ಬೆಳೆಯಿಸಿದರು ಅಮೇರಿಕದವರಿಗೆ 'ಭಾರತೀಯರ ಬಡತನವು ಅದೆಂತಹದಿದೆ? ಅವರು ಅದೆಷ್ಟು ಸ್ವಾತಂತ್ರ್ಯ ಹೀನರಾಗಿದ್ದಾರೆ ಎಂಬುದರ ವಿಷಯವಾಗಿ ಬೋಧಿಸಿದರು. ಭಾರತಕ್ಕೆ ಹಿಂತಿರುಗಿದ ವರೇ ಜಿನಿವಾದಲ್ಲಿ ಮೃತ್ಯುಶಯ್ಯೆಯಲ್ಲಿ ಮಲಗಿದರು. ಹಾಗೆ ಮಲಗುವುದರ ಮೊದಲು ಭಾರತದ ವಿಷಯ ಉದ್ಗರಿಸಿದ ಉದ್ಗಾರವಿದು—'ಭಾರತೀಯರ ಬಡವರ ಬಂಧನವು ತೊಲಗಲೆಂದು—ಬೇಗನೇ ಸಂಕಷ್ಟ ವಿಮೋಚನೆಯಾಗಲೆಂದು ಸಾಯುವ ಮುನ್ನ ಪ್ರಾರ್ಥನೆ ಮಾಡುತ್ತಿದ್ದೇನೆ' ಎಂತಹ ನಿಷ್ಕಳಂಕ ಪ್ರೇಮ! ಅತ್ಯುಜ್ವಲ ಭಕ್ತಿ!! ಅವರ್ಣನಿಯ ಹಟ!.!

+ + + +

ಸೈನಿಕನ ಸಾವು!

ಎಲ್ಲಿಗೊಯ್ವರೊ ಅವನ! ಹಲಕೆಲರು ರೋಧಿಸುತೆ।
ಮೆಲ್ಲನೆತ್ತುತೆ ರುಂಡಮುಂಡ ಹಿಡಿದು।
ಸೊಲ್ಲಿಲ್ಲ—ಕೂಗುತಿಹುದೊಂದೆ ಅಲ್ಲಿಯು ಸೊಲ್ಲು।
ಮೆಲ್ಲ ಹೆಗಲಲಿ ಇರಿಸಿ ಅವರೊಯ್ವರು!! ॥ ೧ ॥

ಹಲಕೆಲರು ಹಿಂದಿನಲಿ—ಕೆಲರು ಎಡಬಲಗಳಲಿ
ನಾಲ್ವರವನನು ಪೊತ್ತ ಅವನಾಪ್ತರು!
ಕೆಲವೂರು ಮುನ್ನಡೆದು ಆಯಾಸ ಪರಿಹರಿಸ
—ಲುಳಿದ ಕೆಲ ಸೈನಿಕರು ಶವ ಪೊತ್ತರು!! ॥ ೨ ॥

* * * * * *

ಒಂದು ಭೀಕರಭೂಮಿ—ರಣಭೂಮಿಯಂತಿಹುದು!
ತಂದರಲ್ಲಿಗೆ ಶವವ ಮೆಲ್ಲಡಿಯಲಿ—
ಒಂದು ಭಾಗದಿ ನರರ ಮುರಿದ ಮೂಳೆಗಳಿಹವು
ತಂದು ಹೆಗಲಿಂ ಶವವ ಕೆಳಗಿಟ್ಟರು! ॥ ೩ ॥

ಕಾಲ ಭೈರವನ ಗುಡಿ—ಬೆಂಕಿಯುರಿಯುತಲಿಹುದು
ಮೇಲು ಕೀಳಿಲ್ಲವೇ ಭೈರವನಿಗೆ?
ಹಾಳಾದ—ಕೊಳೆತು ನಾರಾದ ಶವವು ಬಲು ರುಚಿಯು
ಹಾಲನ್ನ ಉಂಡಂತೆ ಭೈರವನಿಗೈ ॥ ೪ ॥

ಒಂದೆಡೆಯೊಳಿದೆ ತಿಂದು ಉಳಿದ ಮಾಂಸದ ಕುಪ್ಪೆ—
ಒಂದು ಮೂಲೆಯೊಳಿಹವು ನರರ ಸಿಪ್ಪೆ!
ಇಂದು ಈ ರಣಭೂಮಿಯೊಳು ರಾಹುತರನೆಲ್ಲ
ಕೊಂದವರು ಭೈರವನ ದಾಸರೇನೊ! ॥ ೫ ॥

ಯಾರೆಂಬುದಿಲ್ಲಿಲ್ಲ—ರಣ ಹೇಡಿಗೂ ಮಾನ!
ವೀರರಿಗು—ಕಲಿಗಳಿಗು-ಸೇವಕರಿಗೂ।
ಪಾರತಂತ್ರದ ಪಥದಿ ನಡೆವ ಮುನಿವರರಿಗೂ॥
ಕಾರುಣ್ಯವಿಲ್ಲದಿಹ ಪಾಪಿಗಳಿಗೂ ॥ ೬ ॥

ಮಾನ ಕೊಡುತಿದೆ ಭೂಮಿ—ಸ್ಥಾನ ಕೊಡುತಿದೆ ಭೂಮಿ!
ಸೈನಿಕಗೆ ಈ ನೆಲದಿ ಸುಡುವುದೇನೊ—
ಮಾನ ಹೀನರ ದೇಹ ನುಂಗಿದೀ ಕುಂಡದೊಳು
ಸೈನಿಕನು—ಪುಣ್ಯಾತ್ಮನಿರುವುದೇನೊ— ॥ ೭ ॥

ಕಾಲ ಭೈರವನ ಗುಡಿಯಲಿ ಪಾಪಿಗಳ ನಡುವೆ
ಬೀಳುವುದೆ ನರವೀರ ರಣಧೀರನು?
ಅಲ್ಲಿ ಇಹುದೇ ಶಾಂತಿ? ಅಲ್ಲಿ ಇಹುದೇ ಮುಕ್ತಿ?
ಅಲ್ಲಿ ಇಹುದೇ ನಿತ್ಯ ಸುಖವು ಇವಗೆ? ॥ ೮ ॥

ಎಲ್ಲಿ ಶಾಂತಿಯು ಬೀಡೊ—ಎಲ್ಲಿ ಮುಕ್ತಿಯ ಗುಡಿಯೊ
ಎಲ್ಲಿ ಸುಖವಾನಂದ ಪುಳಕಾಟವೊ—
ಅಲ್ಲಿಯೇ ಸೈನಿಕನ ನೆಲದ ತೊಟ್ಟಿಲೊಳಿಡಲಿ!
ಭೂಮಾತೆ ಜೋಗುಳವ ಪಾಡುತಿರಲಿ!! ॥ ೯ ॥

—ನೀಲಾಂಗ, ಪುತ್ತೂರು.

+ + + +

ಮಲಬಂಧ.

(ಡಾಕ್ಟರ್ ಕೆ. ಎಲ್. ನಾರಾಯಣ ರಾವ್, ಎಂ. ಬಿ, ಬಿ. ಎಸ್., ಮದ್ರಾಸ್, ಇವರಿಂದ)

ಪ್ರತಿ ದಿನವೂ ಸರಿಯಾಗಿ ಮಲನಿವೃತ್ತಿಯಾಗದಿರುವುದನ್ನೇ ಮಲಬಂಧವೆಂದು ಹೇಳುವರು. ಸಾಧಾರಣವಾಗಿ ಒಬ್ಬ ಮನುಷ್ಯನು ಪ್ರತಿ ದಿನವೂ ಎರಡುಸಾರಿ ಅಥವಾ ಒಂದು ಸಾರಿಯಾದರೂ ಮಲವನ್ನು ದೇಹದಿಂದ ಹೊರಪಡಿಸಬೇಕು. ಮಲವು ಸ್ವಲ್ಪ ಸಡಿಲವಾಗಿರಬೇಕು. ಪರಿಮಾಣವೂ ಸ್ವಲ್ಪ ಅಧಿಕವಾಗಿಯೇ ಇರಬೇಕು. ಮಲವು ಕಠಿನವಾಗಿಯೂ, ಸ್ವಲ್ಪವಾಗಿಯೂ, ಕಾಲತಪ್ಪಿಯೂ ಕಳೆದರೆ, ಅದು ಮಲಬದ್ಧತೆಯ ಸೂಚನೆಯೆಂದೇ ತಿಳಿಯಬೇಕು. ಅನೇಕರು ಮಲವನ್ನು ಹೊರಪಡಿಸದೆಯೇ ಕಾಲವನ್ನು ಕಳೆಯುವುದುಂಟು. ಇದು ಅನೇಕ ವ್ಯಾಧಿಗಳಿಗೆ ಮೂಲಕಾರಣವೆನಿಸುವುದು. ಮೂಲವ್ಯಾಧಿ, ಅಸನವ್ರಣ ಮುಂತಾದ ವ್ಯಾಧಿಗಳಿಗೆ ಇದೇ ಮುಖ್ಯಕಾರಣವು. ಇದು ಹೊರತು ಹೊಟ್ಟೆನೋವು, ಅಜೀರ್ಣ, ಜ್ವರ ಇವುಗಳಿಗೆಲ್ಲ ಇದು ಕಾರಣವೆಂಬುದು ನಮಗೆ ತಿಳಿದ ವಿಷಯವೇ. ಇದಲ್ಲದೆ ಹೊಟ್ಟೆಯಲ್ಲಿ ನಿಂತು ಹೋಗಿರುವ ಮಲವು ಅನೇಕ ವಿಧವಾದ ಕ್ರಿಮಿಗಳ ಉತ್ಪತ್ತಿಗೆ ಆಸ್ಪದ ಕೊಡುವುದು. ಅದರಲ್ಲಿರುವ ವಿಷ ಪದಾರ್ಥವು ರಕ್ತಗತವಾಗಿ ದೇಹದ ಸರ್ವಭಾಗಕ್ಕೂ ವ್ಯಾಪಿಸುವುದು. ಇದರಿಂದ ದೇಹವು ದುರ್ಬಲವಾಗಿ ಅನೇಕ ವ್ಯಾಧಿಗಳೂ ಸಂಭವಿಸುವುವು. ಇದನ್ನು ಹೇಗೆ ನಿವಾರಿಸಬಹುದೆಂಬುದು ಈಗ ಒಂದು ದೊಡ್ಡ ಸಮಸ್ಯೆ. ತಮ್ಮ ದೇಹಾರೋಗ್ಯಕ್ಕಾಗಿ ಮಾತ್ರವಲ್ಲದೆ, ತಮ್ಮ ಮುಂದಿನ ಸಂತಾನದ ಆರೋಗ್ಯಕ್ಕಾಗಿಯೂ ಪ್ರತಿ ಸ್ತ್ರೀಪುರುಷರೂ ಮಲಬಂಧವನ್ನು ನಿವಾರಿಸಬೇಕಾದುದು ಅತ್ಯವಶ್ಯವು.

ಅಭ್ಯಾಸಕ್ಕೆ ತರುವ ರೀತಿ:—ದೇಹದ ಎಲ್ಲಾ ಅವಯವಗಳೂ ಒಂದು ಗಡಿಯಾರದಂತೆ ಕ್ರಮವಾಗಿ ಕೆಲಸ ಮಾಡುತ್ತ ಬರುವುವು. ಹೃದಯವು ನಿಮಿಷಕ್ಕೆ ೭೨ ಸಲ ಬಡಿದುಕೊಳ್ಳುವುದು. ಶ್ವಾಸೋಚ್ಛ್ವಾಸಗಳು ನಿಮಿಷಕ್ಕೆ ೧೮ ಸಾರಿ ನಡೆಯುವುವು. ನಾವು ತೆಗೆದುಕೊಳ್ಳುವ ಆಹಾರವು ಅನ್ನಕೋಶಕ್ಕೆ ಹೋಗಿ, ಅಲ್ಲಿಂದ ಸಣ್ಣ ಕರುಳಿಗೆ ಹೋಗಿ ಕೋಲನ್ನಿಗೆ ಬಂದು, ದೊಡ್ಡ ಕರುಳುಗಳನ್ನು ದಾಟಿ, ಕ್ರಮೇಣ ಮಲಾಶಯಕ್ಕೆ ಬರುವುದು. ಕೆಳಗಿನ ಕರುಳುಗಳು ತುಂಬಿದ ಮೇಲೆ ಅದು ಸುರುಗಿಹೋಗುವುದು. ಒಡನೆಯೇ ಮಲಬಾಧೆಗೆ ಹೋಗಬೇಕೆಂಬ ಸೂಚನೆಯುಂಟಾಗುವುದು. ಅದರ ಕಾಲ ನಿರ್ಣಯಕ್ಕೆ ತಕ್ಕಂತೆ ಪ್ರತಿದಿನವೂ ಕ್ಲಪ್ತ ಕಾಲಕ್ಕೆ ಸರಿಯಾಗಿ ಅದು ಸರಿಯಾಗಿ ತಳ್ಳಲ್ಪಡುವುದು. ಒಬ್ಬನ ಕರುಳುಗಳು ಸಕಾಲದಲ್ಲಿ ಕ್ರಮವಾಗಿ ಕೆಲಸ ಮಾಡದಿದ್ದರೆ ತಪ್ಪು ಅವನದೇ ಹೊರತು ಬೇರೆ ಯಾವುದರದೂ ಅಲ್ಲ. ಅವನು ಪ್ರಕೃತಿಗೆ ವಿರೋಧವಾಗಿ ನಡೆದು, ಯಾವ ಕಾಲದಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕೋ ಅವುಗಳನ್ನು ಮಾಡದೆ ತಪ್ಪಿದುದರಿಂದಲೇ ಇದು ಸಂಭವಿಸುವುದು. ಪ್ರತಿದಿನವೂ ಕ್ರಮವಾಗಿ ನಿರ್ಣಯಿಸಿದ ಕಾಲಕ್ಕೆ ಮಲಬಾಧೆಗೆ ಹೋಗದೆ ತಪ್ಪುವವನು ತನ್ನ ದೇಹ ವ್ಯಾಪಾರಗಳಿಗೂ ತಾನು ಸಹಕರಿಸದೆ ಸೋಮಾರಿಯೆನಿಸುವನು.

ಈ ಅಭ್ಯಾಸವನ್ನು ಮಕ್ಕಳಿಗೆ ಬಾಲ್ಯದಿಂದಲೇ ಮಾಡಿಸುತ್ತ ಬರಬೇಕು. ಮಗುವನ್ನು ಆಹಾರವಾದೊಡನೆ ಮಲವಿಸರ್ಜನೆಗಾಗಿ ಹೊರಗೆ ತಂದು ಕುಳ್ಳಿರಿಸಬೇಕು. ಮಗುವು ಶಾಲೆಗೆ ಹೋಗುವಾಗ ತಾಯಿಯು, ಅದು ಮಲಬಾಧೆಗೆ ಹೋಯಿತೇ ಇಲ್ಲವೇ ಎಂಬ ವಿಚಾರವನ್ನು ಕೇಳಿ ಅದರ ಮೇಲೆ ಸ್ವಲ್ಪ ಗಮನವಿಡಬೇಕು. ಇದೇ ಅಭ್ಯಾಸವನ್ನು ವಯಸ್ಸು ಬಂದ ಮೇಲೆಯೂ ಕೈ ಬಿಡದೆ ಅನುಸರಿಸಬೇಕು. ಮಲಬಂಧವನ್ನು ನಿವಾರಿಸುವುದಕ್ಕೆ ಇದೇ ಮೊಟ್ಟಮೊದಲು ಗಮನಿಸ ಬೇಕಾದ ಮಾರ್ಗವು. ಬೆಳಗ್ಗೆ ಕಾಫಿಯನ್ನು ಕುಡಿಯುವುದಕ್ಕೆ ಮೊದಲೋ, ಅಥವಾ ಅದಾದ ಮೇಲೆಯೋ ಮಲಬಾಧೆಗೆ ಹೋಗಬೇಕು. ಇದೇ ಅದಕ್ಕೆ ಸರಿಯಾದ ಕಾಲವು. ದೇಹದ ಕೆಲಸಗಳೆಲ್ಲವೂ ಕ್ರಮವಾಗಿ ನಡೆಯುವುದರಿಂದ ಆ ದಿವಸ ಬೆಳಗ್ಗೆ ಒಂದು ನಿರ್ಣಯಿಸಿದ ಕಾಲದಲ್ಲಿ ಮಲವಿಸರ್ಜನೆ ಮಾಡಿದರೆ, ಅದೇ ಕಾಲದಲ್ಲಿ ನಾಳೆಯೂ ವಿಸರ್ಜನೆಯಾಗುವುದು. ಸಂದರ್ಭವು ಹೇಗಿದ್ದರೂ ಈ ಅಭ್ಯಾಸವನ್ನು ಬಿಡಬಾರದು. ಬಿಟ್ಟರೆ, ದೇಹದ ಕೆಲಸಗಳು ಮಾರಿ ಹೋಗುವುವು. ಸಕಾಲದಲ್ಲಿ ಕೀಲು ಕೊಡದಿದ್ದರೆ ಗಡಿಯಾರವು ಕೆಟ್ಟುಹೋಗುವುದಲ್ಲವೇ? ನಿರ್ಣಯಿಸಿದ ಕಾಲದಲ್ಲಿ ಮಲವಿಸರ್ಜನೆ ಮಾಡದಿದ್ದರೆ ಕರುಳಿನಲ್ಲಿ ಮಲಬದ್ಧತೆಯುಂಟಾಗುವುದು. ಒಂದು ಸಾರಿ ಮಲಬಂಧವುಂಟಾದರೆ, ತಿರುಗಿ ಈ ಅಭ್ಯಾಸವನ್ನು ತಂದುಕೊಳ್ಳುವುದು ಬಹಳ ಕಷ್ಟ. ಮಲಬದ್ಧತೆಯುಳ್ಳವನು ಪ್ರಕೃತಿಗೆ ವಿರೋಧವಾಗಿ ನಡೆದುಕೊಳ್ಳಬಾರದು. ಪ್ರತಿ ದಿನವೂ ಪಾಯಿಖಾನೆಯಲ್ಲಿ ೧೦ ನಿಮಿಷಕಾಲ ಕುಳಿತು ಶ್ರಮ ಪಟ್ಟಾದರೂ ಕ್ರಮವಾಗಿ ಮಲವನ್ನು ಹೊರಪಡಿಸಬೇಕು. ಮಲವಿಸರ್ಜನೆ ಮಾಡುವುದಕ್ಕೆ ಮೊದಲು ಒಂದು ಲೋಟಾ ನೀರನ್ನು ಕುಡಿದರೆ, ಇದು ಆ ಕಾರ್ಯಕ್ಕೆ ಸ್ವಲ್ಪಮಟ್ಟಿಗೆ ಅನುಕೂಲವಾಗುವುದು. ಇದರಿಂದ ಪ್ರಯೋಜನವೊಂದೂ ಇಲ್ಲದಿದ್ದರೆ ಗ್ಲಿಸರಿನ್, ಸಪ್ಪೋಸಿಟರಿ ಅಥವಾ ಎನಿಮಾವನ್ನು ಉಪಯೋಗಿಸಬೇಕು. ಸ್ವಲ್ಪ ಬಿಡದೆ ಶ್ರಮಪಟ್ಟರೆ, ಮಲಬಂಧವು ನೀಗಿ ಪ್ರತಿದಿನವೂ ನಿರ್ಣಯಿಸಿದ ಕಾಲದಲ್ಲಿ ಮಲವಿಸರ್ಜನೆಯು ತಾನಾಗಿಯೇ ಆಗುವುದು.

ಆಹಾರ ವಿಷಯಃ—ಕರುಳು ಹೆಚ್ಚು ಆಹಾರವನ್ನು ಹಿಡಿಯುವಂತೆಯೇ ನಿರ್ಮಿತವಾಗಿದೆ. ಅದು ತುಂಬಿ ಹೋದರೆ ತಾನಾಗಿ ಮಲವನ್ನು ಒಡೆದು ತಳ್ಳುವುದಕ್ಕೆ ಕಾರಣವಾಗುವುದು. ಆದರೆ, ನಾಜೂಕಿಗಾಗಿ ನಾವು ಹೊಟ್ಟೆಯಲ್ಲಿ ಏನೂ ಉಳಿಯದಂತಹ ಆಹಾರವನ್ನು ತೆಗೆದುಕೊಳ್ಳುವೆವು. ರೊಟ್ಟಿ, ಬಿಸ್ಕೀಟುಗಳು, ಚೆನ್ನಾಗಿ ತೊಳೆದು ಶುದ್ಧಿಮಾಡಿದ ಅಕ್ಕಿ, ಮುಂತಾದುವುಗಳಲ್ಲಿ ದೇಹದಲ್ಲಿ ತಂಗಿ ನಿಲ್ಲತಕ್ಕ ಕಳಿವೇ ಪದಾರ್ಥವು ಕಡಿಮೆಯಾದುದರಿಂದ ತಿಂದುವೆಲ್ಲ ಹಾಗೆಯೇ ದೇಹದಲ್ಲಿ ಹೀರಲ್ಪಡುವುವು. ಅವುಗಳಲ್ಲಿ ಶೇಷವೇನೂ ನಿಲ್ಲುವುದಿಲ್ಲ. ಆದರೆ, ಕಾಯಿಪಲ್ಯ, ಹಣ್ಣು ಇವುಗಳಲ್ಲಿ ದೇಹಗತವಾಗದೆ ನಿಲ್ಲತಕ್ಕ ವಸ್ತುಗಳು ಹೆಚ್ಚಾಗಿ ಇರುವುದರಿಂದ, ಅವು ಕರುಳಿನಲ್ಲಿ ಉಳಿದುಹೋಗುವುವು. ಕೆಳಗಿನ ಕರುಳಿನಲ್ಲಿ ಇಂತಹ ಕೆಲವೇ ವಸ್ತುಗಳು ಕಡಿಮೆಯಾಗುವುದೇ ಪ್ರಾಯಕವಾಗಿ ಮಲಬಂಧಕ್ಕೆ ಕಾರಣವು. ಏಕೆಂದರೆ, ಇವು ಆ ಕರುಳನ್ನು ಸುರುಗಿಸಿ ಮಲವನ್ನು ಹೊರಕ್ಕೆ ತಳ್ಳಲು ಕಾರಣವಾಗುವಂತಹವು. ಆದುದರಿಂದ ಕಾಯಿಪಲ್ಯಗಳನ್ನು ಅಧಿಕವಾಗಿ ಆಹಾರದೊಡನೆ ಸೇರಿಸಿ ತಿನ್ನಬೇಕು. ಬಾಳೆ, ಕಿತ್ತಳೆ, ಮಾವಿನಹಣ್ಣು, ಮುಂತಾಗಿ ಆಗಾಗ ಹೊಸದಾಗಿ ಸಿಕ್ಕುವ ಹಣ್ಣುಗಳನ್ನೋ ಅಥವಾ ಪಿಂಡಖರ್ಜೂರ, ಮುಂತಾದ ಒಣಗಿದ ಹಣ್ಣುಗಳನ್ನೋ ಊಟಮಾಡಿದೊಡನೆ ತೆಗೆದುಕೊಳ್ಳಬೇಕು. ಈರುಳ್ಳಿಯನ್ನು ತೆಗೆದುಕೊಂಡರೆ, ಅದು ಮಲವನ್ನು ಒದೆದು ತಳ್ಳುವುದು. ಆಹಾರವು ದೊಡ್ಡ ಕರುಳಿನಲ್ಲಿ ಹೋಗುವಾಗ ಅದರೊಳಗಿನ ನೀರೆಲ್ಲ ಹೀರಲ್ಪಡುವುದು. ಆದರೆ, ನೀರನ್ನು ಸ್ವಲ್ಪವಾಗಿ ಕುಡಿದರೆ ಮಲವು ಗಟ್ಟಿಯಾಗಿ ಹೋಗುವುದು. ಇದರಿಂದ ಉಳಿಯುವ ವಸ್ತುವು ಕರುಳಿನಲ್ಲಿ ಕಡಿಮೆಯಾಗಿ, ಬಹಳ ಪ್ರಯತ್ನದಿಂದ ಮಲವನ್ನು ಹೊರಪಡಿಸಬೇಕಾಗಿ ಬರುವುದರಿಂದ ಊಟ ಮಾಡುವಾಗಲೂ. ಊಟಗಳಿಗೆ ಮಧ್ಯದಲ್ಲಿಯೂ ಬೇಕಾದಷ್ಟು ನೀರನ್ನು ಕುಡಿಯಬೇಕು.

ವ್ಯಾಯಾಮಃ——ದೇಹದ ನರಗಳು ದೃಢವಾಗಿಲ್ಲದಿದ್ದರೆ ಅದಕ್ಕೆ ತಕ್ಕಂತೆ ಕೆಲಸ ಮಾಡುವ ಶಕ್ತಿಯೂ ಕಡಿಮೆಯಾಗಿ ಹೋಗುವುದು. ಅದರಂತೆಯೇ ಕರುಳಿನ ಸ್ನಾಯುಗಳು, ಕಿಬ್ಬೊಟ್ಟೆಯ ಸ್ನಾಯುಗಳು, ಪೃಷ್ಠ ಸ್ನಾಯುಗಳು, ಮುಂತಾದುವುಗಳಿಗೆ ಕರುಳನ್ನು ಅಗಲಿಸುವುದಕ್ಕೆ ಬೇಕಾದ ಶಕ್ತಿಯಿಲ್ಲದಿದ್ದರೆ ಹೊರಪಡುವ ಮಲವು ಕಡಿಮೆಯಾಗಿ ಹೋಗುವುದು. ವ್ಯಾಯಾಮ ಮಾಡಿದರೆ ಈ ಸ್ನಾಯುಗಳನ್ನು ಬಲಪಡಿಸಬಹದು. ಮಲಬಂಧವನ್ನು ಹೋಗಲಾಡಿಸುವುದಕ್ಕೆ ವ್ಯಾಯಾಮವೂ ಒಂದು ಮುಖ್ಯ ಸಾಧನವೇ. ನಡೆಯುವುದು, ಸ್ವೀಡಿಷ್ ಮುಂತಾದ ವ್ಯಾಯಾಮಗಳನ್ನು ಮಾಡುವುದು, ಇವು ಸ್ನಾಯುಗಳಿಗೆ ಬಲವನ್ನು ಕೊಡುವುವು. ಕಿಬ್ಬೊಟ್ಟೆಯನ್ನು ತಿಕ್ಕಿಕೊಳ್ಳುವುದು, ಇವೆಲ್ಲ ಉಪಯುಕ್ತವಾಗಿರುವುವು. ಕಿಬ್ಬೊಟ್ಟೆಯ ಸ್ನಾಯುಗಳನ್ನು ಬಲಪಡಿಸುವುವು. ಕುಳಿತು ಕೆಲಸ ಮಾಡುವವರಿಗೆ ಮಲಬಂಧವು ಹೆಚ್ಚು. ಇವರಿಗೆ ವ್ಯಾಯಾಮವು ಬಹಳ ಮುಖ್ಯವು.

ಭೇದಿಯ ಔಷಧಿಗಳುಃ——ಇವುಗಳ ಕೆಲಸವೇನೆಂದರೆ—ಮೇಲಿನ ಹೊಟ್ಟೆಯಲ್ಲಿರುವ ಮಲವನ್ನು ಕೆಳಕ್ಕೆ ತಳ್ಳಿ, ಅದರೊಳಗಿನ ಜಲಾಂಶವನ್ನು ಹೀರುವುದಕ್ಕೆ ಬಿಡದೆ ತಡೆಯುವುದೇ ಅದರ ಕಾರ್ಯವು. ಆದರೆ, ಇವು ಮಲಬಂಧವನ್ನು ನಿವಾರಿಸತಕ್ಕ ಚಿಕಿತ್ಸೆಯಲ್ಲ. ಇಂತಹ ಔಷಧಿಗಳನ್ನು ಆಗಾಗ ತೆಗೆದುಕೊಳ್ಳುವುದರಲ್ಲಿ ಪ್ರತಿಕೂಲಗಳು ಹಲವುಂಟು. (೧) ಬರಬರುತ್ತ ಅದನ್ನು ಅಧಿಕವಾಗಿ ತೆಗೆದುಕೊಳ್ಳಬೇಕಾಗುವುದು. (೨) ಮಲಕೋಶವನ್ನು ಅಧಿಕವಾಗಿ ಉದ್ರೇಪನಗೊಳಿಸುವುದರಿಂದ ಅವು ಬಲಹೀನಪಟ್ಟು ಹೋಗುವುದು. (೩) ನೀರು, ಪೋಷಣಾರ್ಥ, ಇವುಗಳನ್ನು ರಕ್ತದಿಂದ ಹೀರಲ್ಪಡದಂತೆ ತಡೆಯುವುದರಿಂದ ಕರುಳಿನಲ್ಲಿ ವಿಷಕ್ರಿಮಿಗಳು ಅಧಿಕವಾಗಿ ಉತ್ಪತ್ತಿಯಾಗುವುವು. ಅಡಿಗಡಿಗೆ ಭೇದಿಯ ಔಷಧಿಗಳನ್ನು ತೆಗೆದುಕೊಳ್ಳುವುದರಿಂದ, ಮಲಬದ್ಧತೆಯು ಅಧಿಕವಾಗುವುದೇ ಹೊರತು ಕಡಿಮೆಯಾಗುವುದಿಲ್ಲ. ಆದರೆ, ಲಿಕ್ವಿಡ್ ಪ್ಯಾರಫಿನ್ ಎಂಬ ಔಷಧವು ರಕ್ತದಿಂದ ಹೀರಲ್ಪಡತಕ್ಕುದಲ್ಲವಾದುದರಿಂದ, ಅದು ಕರುಳಿನಲ್ಲಿ ಶೇಷವಾಗುವಂತೆ ಮಾಡುವುದು. ಮಲವನ್ನು ನಯಪಡಿಸುವುದಕ್ಕೂ ಉಪಯುಕ್ತವಾದುದು. ಆಹಾರ, ನೀರು ಇವು ಕರಳುಗಳಿಂದ ಹೀರಲ್ಪಡುವುದನ್ನು ಇದು ತಡೆಯುವುದಿಲ್ಲ. ಮಲಾಶಯದಲ್ಲಿ ಗಟ್ಟಿಯಾಗಿರುವ ಮಲವನ್ನು ಮೃದುಮಾಡುವುದು. ಇದು ಭೇದಿಯ ಔಷಧವಲ್ಲ. ಆದುದರಿಂದ ಕರುಳನ್ನು ಶುದ್ಧಿಪಡಿಸಬೇಕಾದರೆ ಲಿಕ್ವಿಡ್ ಪ್ಯಾರಫೀನನನ್ನಾಗಲಿ ಅದರಿಂದ ತಯಾರಿಸಲ್ಪಡುವ ಬೇರೆ ಔಷಧ ವಸ್ತುಗಳನ್ನಾಗಲಿ ತೆಗೆದುಕೊಳ್ಳಬಹುದು. ರಾತ್ರಿ ನಿದ್ರೆಮಾಡುವುದಕ್ಕೆ ಮೊದಲು ತೆಗೆದುಕೊಂಡರೆ ಬಹು ಉತ್ತಮ.

ಬಾಲ್ಯದಲ್ಲಿ ಮಲಬಂಧಃ——ಮಕ್ಕಳಿಗೆ ಉಂಟಾಗುವ ಮಲಬದ್ಧತೆಗೆ ಸ್ವಲ್ಪ ಆಹಾರವನ್ನು ಕೊಡುವುದೇ ಕಾರಣವು. ತಾಯಿಯ ಹಾಲನ್ನು ಕುಡಿಯುವ ಶಿಶುಗಳಿಗೆ ಮಲಬಂಧವುಂಟಾದರೆ ಅವಕ್ಕೆ ತಾಯಿಯ ಹಾಲು ಸಾಲದೆಂದೇ ಹೇಳಬಹುದು. ಇಂತಹ ಸಂದರ್ಭಗಳಲ್ಲಿ ಬುಡ್ಡಿಯ ಹಾಲನ್ನೂ ಹಾಕಬೇಕು. ಆಗಲೂ ಮಲಬಂಧವುಂಟಾದರೆ, ಆ ಅಳತೆಯನ್ನಾದರೂ ಹೆಚ್ಚಿಸಬೇಕು. ಕಿತ್ತಳೆ ಹಣ್ಣಿನ ರಸವನ್ನೂ, ಹಾಲಿನ ಕೆನೆ, ಮೀನೆಣ್ಣೆ ಮುಂತಾದ ಕೊಬ್ಬಿನ ವಸ್ತುಗಳನ್ನು ಕೊಟ್ಟರೂ ಮಲವು ಕಳೆಯುವುದು. ಶಿಶುಗಳಿಗೆ ಉಷ್ಣದೇಶದಲ್ಲಿ ಅಧಿಕವಾಗಿ ನೀರನ್ನು ಕುಡಿಯುವುದಕ್ಕೆ ಕೊಡಬೇಕು. ಇದನ್ನು ಆಹಾರದೊಡನೆಯಾಗಲಿ ಆಹಾರಗಳಿಗೆ ಮಧ್ಯಕಾಲದಲ್ಲಿಯಾಗಲಿ ಕೊಡಬೇಕು.

ಜೀವನವೂ ಹಸ್ತರೇಖೆಗಳೂ.

ಲೇಖಕರು—ಮು. ಜಾ.

— ಸಪ್ಟಂಬರ ತಿಂಗಳ ಸಂಚಿಕೆಯಿಂದ ಮುಂದುವರಿಸಿದುದು —

ಇಂತಹ ಶಿರೋರೇಖೆಯುಳ್ಳವರು ಹೆಚ್ಚಾಗಿ ಜಗಳಬಂಟರಾಗುವರು. ತಮ್ಮ ಅನಿಶ್ಚಿತ ಮನೋಭಾವದಿಂದಲೂ, ಮನೋಮಾಲಿನ್ಯದಿಂದಲೂ ಇವರು ಅಕಳಂಕಿತ ಹೆಸರನ್ನು ಹೊಂದಲಾರರು. ಆದುದರಿಂದ ಶಿರೋರೇಖೆಯು ಆಯುಷ್ಯರೇಖೆಯೊಳಗಿಂದ ಹುಟ್ಟಿದ ಚಿಹ್ನೆಯುಳ್ಳವರು ಮೊದಲು ತಮ್ಮ ಮೆದುಳನ್ನು ಆದಷ್ಟು ತಂಪಗಿರಿಸಲು ಯತ್ನಿಸಬೇಕು. ಚಿತ್ತೈಕಾಗ್ರತೆಯನ್ನು ಬಲವಂತದಿಂದ ಅಭ್ಯಾಸ ಮಾಡಬೇಕು.



ಚಿತ್ರ ನಂಬ್ರ 3.

ಈ ರೇಖೆಯು ನಂಬ್ರ 2ನೇ ಚಿತ್ರದಲ್ಲಿ ╳ ಈ ಗುರುತು ಮಾಡಿರುವಲ್ಲಿಗೆ ಬಗ್ಗದೆ ನೀಟವಾಗಿ ಹರಿದರೆ, ಅಂತಹ ಚಿಹ್ನೆಯುಳ್ಳ ವ್ಯಕ್ತಿಯು ತನ್ನ ಮನೋಶಕ್ತಿಯಿಂದ ತನ್ನ ಆಂತರಿಕ ಅವಗುಣಗಳನ್ನು ನಿರ್ಬಂಧಿಸಿಡಲು ಶಕ್ತನಾಗುವನು. ಆದರೆ ಆ ಗೆರೆಯ ಅಂತ್ಯವು ಅಂಗೈ ಕಟ್ಟಿನ ಮುಖವಾಗಿ ಕೆಳಗೆ ಹರಿದಿರುವುದಾದರೆ, ಅಂತಹ ವ್ಯಕಿಯು ಪ್ರಾಯ ಕಳೆದಷ್ಟು ನಿರ್ಬಲ ಚಿತ್ತವುಳ್ಳವನಾಗುವನು. ಅವನ ಜ್ಞಾಪಕಶಕ್ತಿಯು ಬಹು ಬೇಗನೇ ಕುಗ್ಗುವುದು. ಇಂತಹವನ ಶಿರೋರೇಖೆಯ ಮೇಲೆ ರೋಮುಗಳಂತಹ ಸಣ್ಣ ಸಣ್ಣ ರೇಖೆಗಳಿದ್ದರೆ ಈ ಮನುಷ್ಯನು ಎಲ್ಲರಿಂದಲೂ ಅವಹೇಳನವನ್ನು ಕೇಳುವವನಾಗುವನು. ಅಂತ್ಯದಲ್ಲಿ ಅವನೊಬ್ಬ ಹುಚ್ಚನೆಂದೇ ಹೆಸರುಗೊಳ್ಳುವನು. ಅದರಲ್ಲೂ ಅದೃಷ್ಟ ರೇಖೆಯು ಅಂಗೈಯ ಮಧ್ಯವನ್ನು ದಾಟಿ ಆದ ಮೇಲೆ ಅಳಸಿ ಹೋದಂತಿದ್ದರೆ, ಅಂತಹವನು ಹುಚ್ಚನೇ ಆಗುವನು. ಹೆಚ್ಚಾಗಿ ಬೀದಿ ಬೀದಿಗಳಲ್ಲಿ ಹುಚ್ಚರಂತೆ ತಿರುಗುವ ಹುಚ್ಚರ ಅಂಗೈಯಲ್ಲಿ ಮೇಲಿನಂತಹ ಚಿಹ್ನೆಗಳಿರುತ್ತವೆ. ಆದುದರಿಂದ ಸಾಮುದ್ರಿಕವನ್ನು ತಿಳಿದುಕೊಂಡು, ಹೆತ್ತವರು ತಮ್ಮ ಮಕ್ಕಳ ಶಿರೋರೇಖೆಗಳ ಪರಿಶೀಲನೆ ಮಾಡಿ, ಅವರನ್ನು ಯೋಗ್ಯ ದಾರಿಗೆ ತರುವುದು ಲೇಸು.

ನಂಬ್ರ 3ನೇ ಚಿತ್ರದಲ್ಲಿನ ನಂಬ್ರ 2ನೇ ರೇಖೆಯು ಆಯುಷ್ಯ ರೇಖೆಗ ತಾಗಿ ಹೊರಗೆ ಹೊರಟಿರುತ್ತದೆ. ಈ ರೀತಿಯು ಶಿರೋರೇಖೆಯುಳ್ಳವನು ಹೆಚ್ಚಾಗಿ ಆತ್ಮವಿಶ್ವಾಸ ರಹಿತನಾಗುವನು. ಇವನು ಹೆಚ್ಚಾಗಿ ತನ್ನ ಶಕ್ತಿಯನ್ನು ತಾನರಿಯಲಾರದೆ ಅಲ್ಪ ವಿಷಯವನ್ನೂ ಮಹಾಮೇರುವೆಂದು ಭಾವಿಸುವಂತಹವನಾಗುವನು. ಎಷ್ಟೇ ತಿಳಿದವನಾಗಿದ್ದರೂ ಈ ರೀತಿಯ ಶಿರೋರೇಖೆಯುಳ್ಳವನು ಫಕ್ಕನೆ ಮುಂದರಿಯಲಾರನು. ಹೆಚ್ಚಾಗಿ ಈ ಚಿಹ್ನೆಯು ಕಾಲ್ಪನಿಕ ಶಕ್ತಿಯುಳ್ಳ ಕವಿಗಳಲ್ಲಿಯೂ ಕಲಾಕುಶಲರಲ್ಲಿಯೂ ಕಂಡುಬರುತ್ತದೆ. ಈ ರೇಖೆಯು ಮೇಲ್ಮುಖವಾಗಿ ತೆರಳುವುದಾದರೆ ಅಂತಹವನು ಒಂದಲ್ಲ ಒಂದು ದಿನ ಪ್ರಾಣತ್ಯಾಗ ಮಾಡಿಕೊಳ್ಳುವನು. ಇದೇ ರೇಖೆಯು ಕೊನೆಗಾಣುತ್ತಾ ನಂಬ್ರ 2ನೇ ಚಿತ್ರದ ಈ ╳ ಗುರ್ತು ಇದ್ದಲ್ಲಿಗೆ ಬಗ್ಗಿ ಹರಿದರೆ ವ್ಯಕ್ತಿಯು ಮಾನಸಿಕನಾಗಿ ಬಡವನೆಂದೇ ತಿಳಿಯಬೇಕು. ಬದಲಿಗೆ, ಈ ರೇಖೆಯು ನೀಟವಾಗಿ ಹರಿದು ಹೋಗಿ 3ನೇ ಚಿತ್ರದ ನಂಬ್ರ 3ನೇ ರೇಖೆಯಂತೆ ನಿಂತರೆ ಅಂತಹ ವ್ಯಕ್ತಿಯು ಧೀರನೂ, ಧೈರ್ಯವಂತನೂ ಸಾಹಸವಂತನೂ ಹಟವಾದಿಯೂ ಆಗುವನು. ಧುರೀಣನಾಗಲರ್ಹನಾಗುವವನ ಅಂಗೈ ರೇಖೆಯು ನಂಬ್ರ 3ನೇ ರೇಖೆಯಂತೆ ಇರಬೇಕು. ಈ ರೀತಿಯ ರೇಖೆಯುಳ್ಳ ಧುರೀಣರು ಹೆಚ್ಚಾಗಿ ತಮ್ಮ ಉದ್ಯಮ

ಭಾಗಿ

ಲೇಖಕರು—ಶ್ರೀ ಎ. ಜಿ. ಶೆಟ್ಟಿಗಾರ, ಮುಂಬಾಯಿ.

ಅವಳು ಬಡವೆ 'ಭಾಗಿ' ಎಂಬುದು ಅವಳ ಹೆಸರು. ಆದರೆ ಅವಳು ನಿರ್ಭಾಗ್ಯೆಯಾಗಿದ್ದಳು. ಸಣ್ಣ ಪ್ರಾಯದಲ್ಲೇ ತಂದೆಯನ್ನು ಕಳಕೊಂಡು ತನ್ನ ಬಡ ತಾಯಿಯೊಡನೆ ಅವಳಿದ್ದಳು. ಈಗ ಅವಳಿಗೆ ಮದುವೆಯ ಪ್ರಾಯವಾಗಿತ್ತು. ಆದರೆ ಮದುವೆಯಾಗಿರಲಿಲ್ಲ. ವರದಕ್ಷಿಣೆ ಕೊಟ್ಟು ಮದುವೆ ಮಾಡಿಸುವ ಕೆಲಸವು ಅವಳ ತಾಯಿಗೆ ಅಸಾಧ್ಯವಾಗಿತ್ತು. ಹೊಟ್ಟೆಯ ಕೂಳಿಗೇ ಕಡಿಮೆಯಾಗಿರುವಾಗ ಹೆರವರಿಗೆ ದಕ್ಷಿಣೆ ಕೊಡುವುದಾದರೂ ಹೇಗೆ? ಎಲ್ಲರೂ ಬಂದು ಭಾಗಿಯನ್ನು ನೋಡಿ ಹೋಗುತ್ತಿದ್ದರು. ಅವಳೇನೋ ಅವರ್ಣನೀಯ ಸುಂದರಿಯಾಗಿದ್ದಳು—ಚೆಲುವಿನ ಮೂರ್ತಿಯಾಗಿದ್ದಳು. ಆದರೆ ದ್ರವ್ಯಾನ್ವೇಷಕರಿಗೆ ಅವಳು ಒಗ್ಗುತ್ತಿರಲಿಲ್ಲ.

ತಾಯಿಯ ಮತದಂತೆ ಭಾಗಿಯು, ಅವಳೊಡನೆ ಕಾಫಿಯ ಕಾರ್ಖಾನೆಗೆ ಹೋಗುತ್ತಿದ್ದಳು. ಕಾಫಿಯ ಕಾರ್ಖಾನೆಯೆಂದರೆ ಮಂಗಳೂರಲ್ಲಿ ಕಡಿಮೆಯಿಲ್ಲ. ಬಹಳ ಬಡವರು ಹೆಚ್ಚಾಗಿ ಕಾಫಿಯ ಕೆಲಸ ಮಾಡಲು ಕಾಫಿಯ ಕಾರ್ಖಾನೆಗೆನೇ ಹೋಗುವರು. ಅಲ್ಲಿ ದುಡಿದರೆ ಅವರಿಗೆ ಹಣವು ಸಿಗುವುದು. ಆ ಹಣದಿಂದಾಗಿ ಬಡವರು ಬಡಬದುಕನ್ನುಳಿಸುವರು. ಭಾಗಿಯೂ ಕಾಫಿಯ ಕೆಲಸ ಮಾಡಲು ಸಂತೋಷದಿಂದ ಹೋಗುತ್ತಿದ್ದಳು. ತಿಂದು ತೇಗಲು ಮನೆಯಲ್ಲಿ ಇರುತ್ತಿದ್ದರೆ ಭಾಗಿಯು ಕಾಫಿಗೆ ಹೋಗುತ್ತಿದ್ದಳೋ ಇಲ್ಲವೋ ಅದನ್ನು ನಾವನ್ನೆವು. ಬಡತನದ ಬೇಗೆಯನ್ನು ಸೈರಿಸಲಾರದೆ ಅವಳು ಕಾಫಿ ಕಾರ್ಖಾನೆಗೆ ದುಡಿಯಲು ಹೋಗುತ್ತಿದ್ದಳು. ಕಾಫಿಯ ಕೆಲಸವು ಮೊದಮೊದಲು ಅವಳಿಗೆ ಒಂದು ಕಾಟವಲ್ಲ—ಆಟದಂತಿತ್ತು. ಸಮವಯಸ್ಕರಾದ ಗೆಳತಿಯರು—ಅವರ ವಿನೋಧವಾದ ಕಥೆ ಹಾಡುಗಳು. ಇವನ್ನೆಲ್ಲ ನೆನಸಿಯೇ ಅವಳು ದುಡಿಯಲು ಸಂತೋಷದಿಂದ ಹೋಗುತ್ತಿದ್ದಳು.

ಒಂದು ದಿನ ರೈಟರ್ ಬರೆಯುತ್ತಾ 'ಭಾಗೀ-ೀ-ೀ' ಎಂದು ಕರೆದರು. ಕಪ್ಪು ಕಾಫಿಗಳನ್ನು ಹೆಕ್ಕುತ್ತಿದ್ದ ಭಾಗಿಯು 'ಓ ೀ ೀ 'ಎಂದೆದ್ದು ರೈಟರರಲ್ಲಿಗೆ ಬಂದು "ಏಕೆ ಕರೆದಿರಿ?" ಎಂದಳು.

ರೈಟರರು ಹುಸಿ ನಗೆ ನಕ್ಕು "ಮತ್ತೇನಿಲ್ಲ, ಅವಳು.. ಅವಳು ರಾಮು-ಗುಡಿಸುವವಳು ಇಂದು ಬರಲಿಲ್ಲ. ಆದುದರಿಂದ ನೀನಿಂದು ಕಸಬರಿಕೆ ತೆಗೆದುಕೊಂಡು ಆ ಕೋಣೆಯನ್ನು ಗುಡಿಸಿ ಬಿಡು" ಎಂದರು. ಭಾಗಿಗೆ ಒಮ್ಮೆ 'ಝುಂ' ಎಂದಿತು. ಆ ಕೋಣೆಯ ಪ್ರತಾಪವನ್ನು ಅವಳು ಸಂಗಾತಿಳಿಂದ ಕೇಳಿ ತಿಳಿದುಕೊಂಡಿದ್ದಳು. ಅದೇಕೋ ಅವಳ ಮುಖವು ಒಂದು ತೆರನಾಯಿತು. ಅವಳು ಹೇಳಿದಳು "ಅದು—ಅದು-ನನ್ನಿಂದಾಗದು" "ಹಾಂ" ಎಂದರು. ರೈಟರು. ಆ 'ಹಾಂ' ಸ್ವರದಲ್ಲಿ ಒಂದು ಬಗೆಯ ಕ್ರೋಧವೂ ನಗೆಯೂ ಕೂಡಿತ್ತು. ಭಾಗಿಯು ಮಾತನಾಡಲಿಲ್ಲ. ಆಗಲೇ ಅಲ್ಲಿಗೆ ಕಾಫಿಯ ಉರುಟು ಬೀಜವನ್ನು ತೋರಿಸಲು ಬಂದ ತಿಮ್ಮುವು ಮಗಳನ್ನು ನೋಡಿ "ಏನು ನಿಂತಿರುವೆ?" ಎಂದು ಕೇಳಿದಳು. ಆಗ ರೈಟರನು ಹುಸಿ ನಗೆ ನಕ್ಕು ಹೇಳಿದನು, "ನಾನವಳನ್ನು ಕರೆದೆ, ಆ ಕೋಣೆಯನ್ನು ಒಮ್ಮೆ ಗುಡಿಸೆಂದು ಹೇಳಿದೆ, ರಾಮುವು ಇಂದು ಬರಲಿಲ್ಲ. ತಿಮ್ಮಕ್ಕಾ, ಅವಳಿಗೆ ಇಂದು ಕೂಡದಂತೆ! ಭಾಗಿಗೆ ಬುದ್ಧಿ ಹೇಳು" ಎಂದರು. ತಿಮ್ಮುವಿನ ಮನಸ್ಸು ಒಮ್ಮೆ ವಿದೀರ್ಣಗೊಂಡಿತು. ಆದರವಳು ಮುದುಕಿ; ರೈಟರನೆಂದರೆ ತನ್ನ 'ಅನ್ನದಾತ' ಎಂದವಳು ತಿಳಿದಿದ್ದಳು. ಅವರ ಮಾತೆಂದರೆ ಅವಳಿಗೆ ವೇದ ವಾಕ್ಯ. ಅದರಿಂದಾಗಿಯೇ ಅವರ ವಿಷಯವಾಗಿ ತಾನು ಕೇಳಿದ್ದ ಮಾತುಗಳೆಲ್ಲವೂ ಒಮ್ಮೆಲೇ ಮರೆತು ಹೋಗಿ ಅವಳು ಮಗಳಿಗೆ ಹೇಳಿದಳು "ಗುಡಿಸು—ಗುಡಿಸು, ಗುಡಿಸುವುದರಿಂದ ನಮಗೇನು? ನಾವು ಹೇಗೂ ಕೆಲಸದವರು. ಅವರು ಹೇಳಿದ್ದನ್ನು ನಾವು ಕೇಳಿ—ಅದರಂತೆ ನಡೆದುಕೊಳ್ಳಲೇ ಬೇಕು-ಇಲ್ಲದಿದ್ದರೆ ನಾಳೆ ಕೆಲಸವೇ ಕೊಡಲಾರರು ಹಿಡಿಗಲು ತೆಗೆದುಕೋ ಗುಡಿಸು!" ಎಂದು ಹೇಳಿದಳು. ತಾಯಿಯ ಅಪ್ಪಣೆ! ತಾನು ಕಾಫಿಯ ಕಾರ್ಖಾನೆಯಲ್ಲಿದ್ದೇನೆ ಏನು ಮಾಡಬೇಕು ಎಂದು ಭಾಗಿಗೆ ತಿಳಿಯದಾಯಿತು. ಮರುಮಾತನಾಡದೆ ಔಡು ಕಟ್ಟಿ ಧೈರ್ಯ ಮಾಡಿ ಕಸಬರಿಕೆಯನ್ನು ಕೊಂಡುಕೊಂಡು ಕಾಫಿಯ ಸ್ಟೋರನ್ನು ಗುಡಿಸಲು ಸರಸರನೆ ಹೋದಳು.

ಕೋಣೆಯು ಹೆಚ್ಚಿನ ಮಟ್ಟಿಗೆ ಕತ್ತಲಿನಿಂದ ತುಂಬಿತ್ತು. ಸಣ್ಣ ಕಿಟಿಕಿಯಿಂದಾಗಿ ಸ್ವಲ್ಪ ಬೆಳಕು ಒಳಗೆ ಬೀಳುತ್ತಿತ್ತು. ಕೋಣೆಯ ಎರಡು ಬದಿಗಳಲ್ಲಿಯೂ ಕಾಫಿಯ ಗೋಣಿಗಳನ್ನು ಸಾಲು ಸಾಲು ಇಟ್ಟಿದ್ದರು. ಆ ಕೋಣೆಯಲ್ಲಿನ ದೂಳನ್ನು ಗುಡಿಸಲು ಭಾಗಿಯು ಹಿಡಿಗಲನ್ನು ಹಿಡಿದಳು. ಆಗಲೇ ಒಳಗಿನಿಂದ ಬಾಗಿಲ ಚಿಲಕವನ್ನು ಹಾಕಿದಂತಾಯಿತು. ಭಾಗಿಯ ಎದೆಯು ಧಡ ಧಡ್ ಎನ್ನಲು ಮೊದಲಾಯಿತು. ಕಾಲ ಸಪ್ಪಳವೂ ಕೇಳಿ ಬಂತು. ಭಾಗಿಯು ಗುಡಿಸುವುದನ್ನು ನಿಲ್ಲಿಸಿ ನಿಂತಳು. ಬೊಬ್ಬೆ ಹಾಕಲೆಂದು ಬಾಯನ್ನು ತೆರೆದಳು. ಆದರೆ ಅದೇಕೋ ಬೊಬ್ಬೆ ಹಾಕಲು ಬರಲಿಲ್ಲ. ಅವನು ನಾಚಿಕೆಗೆಟ್ಟು—ಮತಿಗೆಟ್ಟು ಕಿಸೆಯಲ್ಲಿದ್ದ ಕೆಲವು ರೂಪಾಯಿಗಳನ್ನು ಅವಳ ಮುಂದು ನೀಡಿದನು...

ಅವಳು ಹೇಳಿದಳು . . ಅಷ್ಟರಲ್ಲಿ ಹೊರಗಿನಿಂದ ಯಾರೋ ಬಾಗಿಲು ತಟ್ಟಿದರು! ರೈಟರ ಮಹಾರಾಯರ ಎದೆಗೆ ಬರ್ಚಿಯುನ್ನಿಟ್ಟಂತಾಯಿತು. ಭಾಗಿಗೆ ಸಿಡಿಲು ಬಡಿದಂತಾಯಿತು. ಬಾಗಿಲು ಮತ್ತೂ ಬಡೆಯಲ್ಪಟ್ಟಿತು. "ಬಾಗಿಲು ತೆರೆ ರಂಗನಾಥ್" ಎಂಬ ಆಜ್ಞೆಯು ಒಳಗೆ ಸಿಡಿಲಿನಂತೆ ಬಡೆಯಿತು. ರಂಗನಾಥನು ಆಲೋಚನೆಗೆ ಸಿಕ್ಕಿದನು. ನಿಮಿಷಾರ್ಧದಲ್ಲಿ ರಂಗನಾಥನು ಕಂಗೆಟ್ಟು, ಪುನಃ ಧೈರ್ಯಗೊಂಡು ಬಾಗಿಲು ತೆರೆದನು. ಮೆನೆಜರರಾದ ಗುಣರಾಯರು ಕೋಪಾಟೋಪದಿಂದ ಕಂಪಿಸುತ್ತಿದ್ದರು. ಅವರು ಉಸಿರೆತ್ತಲು ಯತ್ನಿಸುತ್ತಿದ್ದರು. ಆದರೆ ಸಾಧ್ಯವಾಗುತ್ತಿದ್ದಿಲ್ಲ. ಕೊನೆಗೆ ಹೇಳಿದರು. "ರಂಗ ಇದೇನು?" ರಂಗನಾಥನ ಹೃದಯ ತಂತಿಯು ಕಡಿಯಿತು. ಜನರ ಗುಂಪು ಬಾಗಿಲ ಬಳಿ ಸೇರುತ್ತಿದ್ದುದನ್ನು ನೋಡಿ ಅವನಿಗೆ ಘೋರ ನಾಚಿಕೆಯಾಯಿತು. ಬದುಕಿ ಫಲವಿಲ್ಲವೆಂದು ತಟ್ಟನೆ ಜೇಬಿನಿಂದ ಚೂರಿಯನ್ನು ತೆಗೆದು ಬಿಡಿಸಿ ಕ್ಷಣದಲ್ಲಿ ತನ್ನಹೃದಯದ ಮೇಲೆ ನೆಟ್ಟನು.

\+ * * *

ನಿರಪರಾಧಿನಿಯಾದ ಭಾಗಿಯು ಮನೆಯಿಂದ ಹೊರಡಲಾರದಾದಳು. ಕಾರ್ಖಾನೆಯಲ್ಲಾದ ಈ ಕಥೆಯು ದಿನ ಒಂದರಲ್ಲಿ ಪೇಟೆಯಲ್ಲೆಲ್ಲಾ ಹರಡಿತು. ತಿಮ್ಮುವಿಗೆ ಮಗಳ ದುರವಸ್ಥೆಯನ್ನು ಕಂಡು ಅಸಹನೀಯ ದುಃಖವಾಯಿತು. ಆ ದಿನ ಮೊದಲುಗೊಂಡು ತಿಮ್ಮುವೂ ಭಾಗಿಯೂ ಕಾರ್ಖಾನೆಗೆ ಬರಲಿಲ್ಲ.

ಭಾಗಿಯು ಗುಣಸಂಪನ್ನೆ, ಸ್ತ್ರೀಯೋಗ್ಯ ಗುಣಗಳೆಲ್ಲವೂ ಅವಳಲ್ಲಿ ಮೂರ್ತಿಗೊಂಡಿದ್ದುವು. ಅವಳು ಯೋಚಿಸಿದಳು, ಯೋಚಿಸಿದಳು, ಯೋಚಿಸಿದಳು. ಅವಳಿಗೆ ಈ ಪ್ರಾಣವೇ ನಷ್ಟವಾಯಿತೆಂದು ಭಾಸವಾಯಿತು. ಮುಂದಾದ ಮನಸ್ಸು ಹಿಂದೆ ನಿಲ್ಲುವುದೇ? ಅದು ಅವಳನ್ನು ಬಾವಿಗೆ ಹಾರುವಂತೆಯೇ ಮಾಡಿತು!

ಬಡವನ ಭಕ್ತಿ.

ಶ್ರೀ ರಮಾರಮಣೈಕ ಭಕ್ತನೆ!
ಚಾರುಚರಿತ ಕುಚೇಲ! ನಿನ್ನಯ
ಸಾರ ಗುಣ ಗಣಯುಕ್ತ ಭಕ್ತಿಯನೆಂತು ಬಣ್ಣಿಪೆನೂ?
ವಾರಿಜೋದರ ದೇಹದಾ ನಿಜ
ಸಾರದಾಲಿಂಗನೆಯ ನಾಂತಿಹ
ಚಾರು ಸುಮನೋಹರ ಶರೀರವನೆಂತು ಚಿತ್ರಿಪೆನೂ?

ಸಾದರದಿ ನೀನೆಲೆ ಸುಧಾಮನೆ!
ಮಾಧವನಭವನಾಂತರಾಲದಿ
ಹೋದ ಹೊತ್ತಿನ ಗಣನೆಯಿಲ್ಲದೆ ಹರಿಯ ಸರಿಸದಲೀ
ಮೋದದಲಿ ಮಾತಾಡುತಾಡುತ
ಸೋದರರ ತೆರದಲ್ಲಿ ವಿಹರಿಸಿ
ಸಾಧಿಸಿದ ಚಿತ್ರವದು ಮಾಸದು ಹೃದಯಸದನದಲೀ

ಬಡತನದ ಕಡು ದುಗುಡದಿಂದಲಿ
ಸೆಡೆದು ಬಡವಾಗಿರುವ ಒಡಲದು
ಸಡಗರದಿ ಮಾಧವನು ಕೋಮಲ ಮಸೃಣ ಕರತಳದೀ
ಕೊಡುವ ಅಂಗ ಸ್ಪರ್ಶ ಸುಖದಲಿ
ಪಡೆಯದೇ ರೋಮಾಂಚವನು? ತಾ
ನಡಿಗಡಿಗೆ, ಪೇಳೀಗ ಭಕ್ತಸುಧಾಮನನ್ನೊಡನೇ.

ಕೆಲವು ಮನೆಯನು ತಿರಿದು ತಂದಿಹ,
ಅಳಿಲ ಸೇವೆಯ ಮಳಲಿನಂತಿಹ,
ಬಲುಮೆಯೊಲವಿನ ಕಾಣಿಕೆಯನವಲಕ್ಕಿಯನು ಮುದದೀ
ಲಲನೆಯಾ ಕ್ಸ್ನತ್–ಕ್ಸ್ನಾಮೆಯಿತ್ತಳು
ಸಲಿಗೆಯಲಿ ನಿನಗೆಂದು! ಕೃಷ್ಣನ
ಲಲಿತ ಸಂದರ್ಶನದಿ ಕಾಣಿಕೆ ಕೊಡಲು ಭಕ್ತಿಯಲೀ.

ಅದನು ಹೆದರುತ ತಂದು, ಕೃಷ್ಣನ
ಪದತಲದಿ ಒಪ್ಪಿಸದೆ, ಸುಮ್ಮನೆ
ಒದವಿದಾ ಸಂಕೋಚಭಾವದಿ ಬಾಗಿ ನಿಂತಿರಲೂ
ಸದಯ ಹೃದಯನು ಮಾಧವನು ತಾ
ಸದಮಲಾಂತಃಕರಣದಿಂದಲಿ
ಸೊದೆಯ ಸುರಿಸುವ ಸರಸವಚನವನಿಂತು ಪೇಳಿದನೂ

"ಸಾಕು! ಮನದನುತಾಪ, ಮಿತ್ರನೆ!
ಈ ಕಡೆಗೆ ನೀಡೆನಗೆ, ಮನದಲಿ
ಕಾಕು ಬುದ್ಧಿಯ ಬಿಟ್ಟು, ಭಕ್ತಿಯ ಕಾಣ್ಕೆಯನ್ನೀಗ.
ಏಕೆ ಸಂಶಯ? ಭಕ್ತಜನರು ವಿ-
ವೇಕದಿಂದಲಿ ಕೊಟ್ಟ ಪತ್ರವು,
ಆ ಕುಸುಮ, ಫಲ. ತೋಯ, ತೃಪ್ತಿಯನೆಸಗುವುದು! ನನಗೇ

"ಧನಿಕರರ್ಪಿಪ ವಿವಿಧ ವಸ್ತುಗ
ಳನಿತರೊಳು ನನಗಿರದು ತೃಪ್ತಿಯು
ಜನಕೆ ತೋರಿಪ ಹೊರಗಿನಾಡಂಬರದಿ ಫಲವೇನೂ?
ಮನವೊಲಿದು ಸಂಸ್ತುತಿಸಿ, ಸುರಿಯಿಪ
ನಃನವ ಕರಗಿಪ, ನಯನವಾರಿಯು
ನನಗೆ ಮನೆಯದು! ಭಕ್ತರಿಗೆ ನಾನೊಲಿವೆ! ಸತ್ಯವಿದೂ!!"

ಎಂದ ನಾತನು ಕೇಳುತತ್ಯಾ-
ನಂದದಲಿ ನೀನಂದು ಶ್ರೀಗೋ-
ವಿಂದನಡಿದಾವರೆಗೆ ಪೊಡಮಡುತಧಿಕ ಭಕ್ತಿಯಲೀ,
"ಇಂದಿರಾಮಂದಿರನೆ! **ಬಡವರ**
ಬಂಧು! ನೀಡುವೆ ನಿನಗೆ ನಾನಿಂ-
ದಂದದಲಿಯವಲಕ್ಕಿ! '**ಬಡವನ ಭಕ್ತಿ**' ಕಾಣಿಕೆಯಾ!
ಹೊಂದಿ ನೀನಿದರನ್ನು, ಎನ್ನನು
ಮುಂದೆ ಕೃಪೆಯಲಿ ಸಲಹು! ಬೇಡುವೆ-"
ನೆಂದು ಕಂಠದೊಳುಣ್ಕೆ ಗದ್ಗದ ದನಿಯು, ನಯನದಲೀ
ಸಂದಿರಲು ಸಂತಸದ ಕಂಬನಿ,
ಹೊಂದಿರಲು ರೋಮಾಂಚ ದೇಹದಿ,
ಮುಂದೆಯವಲಕ್ಕಿಯನು ಬಿಚ್ಚಿದೆ! ಧನ್ಯ! ನೀನಿಂದೂ.

"ಶಂಕರನಾರಾಯಣ"
'ಮಕ್ಕಳ ಬಳಗ,' ಪೆರಡಾಲ.

S. G. SASTRY ESQ.,

B. A. M. SC. (LOND.) F. C. S. F. M. U.

INDUSTRIAL CHEMIST
AND
CHEMICAL ENGINEER.

GOVT. SOAP FACTORY,
Bangalore, 27—9—1933.

To,

THE EDITOR,
"Badavara Bandhu,"
Hampankatta,
Mangalore, S. K.

Dear Sir,

In connection with certain advertisements that are appearing in the public press regarding certain allegations about Government Soap Factory and its officers, I reproduce here below copy of a letter addressed by the Director of Industries and Commerce, Mysore State, Bangalore, to Messrs. Mulla and Mulla, Solicitors and Notaries Public, Jehangir Wadia Buildings, 51, Esplanade Road, Fort, Bombay. This letter is sent to you in order to keep you informed of the correct position.

By Order,

S. G. Sastry.

"With reference to your letters No. P. 9659 and 9660 dated 23rd August 1933 addressed to the Manager, Government Soap Factory, and to Mr. S. G. Sastry, Chemical Analyser, Mysore Government Soap Factory, respectively, drawing attention to a passage occuring in the 'Bombay Chronicle' and the 'Free Press Journal' of the 30th July 1933, wherein certain statements are alleged to have been made by the Chemical Analyser of our Factory, to a representative of the Swadeshi Market Committee, we wish to inform you that we have no officer styled as 'Chemical Analyser' in our Factory nor did any officer of our Factory made the statements attributed to the Chemical Analyser, and published in the news-papers as aforesaid."

A. V. Ramanathan,

Director of Industries and Commerce

ACHARYA ROY
AT
SADHANA AUSADHALAYA

Sir P. C. Roy who was on a short visit to Dacca, came with Dr. Ghose, D. SC. of Dacca University to the Factory of the famous Sadhana Ausadhalaya (Dacca) managed by one of his pupils, Profesor J. C. Ghose Ayurvedsastri, M. A., F. C. S. (London). He was taken round the big Factory, and he enquired about the various preparations that were then going on. He expressed his sincere satisfaction at the strict Ayurvedic processes in which the various medicines were being prepared, and prophesied about the bright future of this big manufactory of indigenous drugs. He was particulary glad to note that orders for its medicines are being received not only from all parts of Asia, but even from Europe and America.



80 ವರ್ಷದ ಪತ್ನಿಗಾಗಿ 40 ವರ್ಷದ ಪತಿಯು ಆತ್ಮಹತ್ಯೆ!

ಪೋಲೆಂಡ್ ದೇಶದ ಮುಖ್ಯ ಪಟ್ಟಣವಾದ ವಾರ್ಸೋ ದಲ್ಲಿ 40 ವರ್ಷದ ಪತಿಯೊಬ್ಬನು, ಅವನ 80 ವರ್ಷದ ಪತ್ನಿಯು, 30 ವರ್ಷದ ತರುಣನೊಬ್ಬನನ್ನು ವರಿಸಲೆಂದು ವಿವಾಹದಿಂದ ಬಿಡುಗಡೆ ಹೊಂದಲೆಳಸಿದುದನ್ನು ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಂಡಿರುವನು.

17 ಅಡಿ ಉದ್ದದ ಮೀಶೆ

ದೇಸೂರ್ ಅರ್ಜುನ್ ದಂಗಾರ್ ಎಂಬ ಹಿಂದೀಯನಿಗೆ 78 ಇಂಚುದ್ದ ಮೀಶೆಯಿದ್ದು ಅವನೀಗ ಅಮೇರಿಕಕ್ಕೆ ಹೋಗಿ ಅದನ್ನು ಪ್ರದರ್ಶಿಸಿರುವನಷ್ಟೆ. ಸೆಕ್ರಮೆಂಟೋ ಎಂಬಲ್ಲಿಯ ಒಬ್ಬ ಮುದುಕನಿಗೆ 11 ಅಡಿ 3 ಇಂಚು ಮತ್ತು ಇನ್ನೊಬ್ಬನಿಗೆ 17 ಅಡಿ ಉದ್ದ ಗಡ್ಡವಿರುವುದೆಂದು ತಿಳಿದು ಬರುತ್ತದೆ. ಈ ಮೂವರ ಚಿತ್ರಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ನೋಟುಗಳನ್ನು ಬದಲಾಯಿಸಿದ ಜಾದು.

ಬುಡಪೆಸ್ಟ್ ಪಟ್ಟಣದಲ್ಲಿ ಕೆಲಮಂದಿ ಮಂತ್ರಗಾರರು ಅಂಗಡಿಗಳಿಗೆ ಹೋಗಿ ಕೆಲವು ಸಾಮಾನುಗಳನ್ನು ತೆಗೆದುಕೊಂಡು ರೂ. 5ರ ನೋಟು ಕೊಡುವರು. ಅನಂತರ ಅದೇನೋ ವಿಚಿತ್ರ ಜಾದುವಿದ್ಯೆಯಿಂದ ಆ ನೋಟು ರೂ-100ರದೆಂಬ ಭ್ರಾಂತಿಯನ್ನು ವ್ಯಾಪಾರಿಯಲ್ಲುಂಟುಮಾಡಿ ಅದರ ಚಿಲ್ಲರೆಯನ್ನೇ ಕೊಂಡು ಹೋಗಿ ಬಿಡುವರು. ಹೀಗೆ ಹಲವು ವ್ಯಾಪಾರಿಗಳು ವಂಚಿಸಲ್ಪಟ್ಟು ಪೋಲೀಸರಿಗೆ ಫಿರ್ಯಾದಿ ಮಾಡಿರುವರು. ಪೋಲೀಸರು ಈ ಕುರಿತು ಪತ್ತೆ ಮಾಡುತ್ತಿರುವರು.

ಬೂಟ್ಸು ತಿಕ್ಕಿ 30,000 ಪವನು ಸಂಪಾದನೆ.

ಅಮೆರಿಕದ ಪೈಟ್ರೋ ಐರಾರ್ಡಿ ಎಂಬವನು ನ್ಯೂಯೋರ್ಕ್ ಪಟ್ಟಣದ ಗ್ರೆಂಡ್ ಸೆಂಟ್ರಲ್ ಸ್ಟೇಶನಿನ ಒಳಗೂ ಹೊರಗೂ ಬೂಟ್ಸುಗಳನ್ನು ಕ್ಲೀನ್ ಮಾಡುವ ಕೆಲಸಗಳನ್ನು 35 ವರ್ಷಗಳ ವರೆಗೆ ಮಾಡುತ್ತಿದ್ದನು. ಅವನು ಇತ್ತಲಾಗೆ ಮೃತನಾದನು. ಅವನ ಮರಣ ಶಾಸನ ಪ್ರಕಾರ ಅವನಲ್ಲಿ 30,000 ಪವನು ಇದ್ದಿತೆಂದು ತಿಳಿದು ಬಂದಿದೆ.

ಇಬ್ಬರು ಅಕ್ಕ ತಂಗಿಯಂದಿರ ಒಬ್ಬ ಗಂಡ.

20 ವರ್ಷಗಳಿಗಿಂತಲೂ ಮಿಕ್ಕಿ ಇಬ್ಬರು ಸಹೋದರಿಯರು ಯಾರಿಗೂ ತಿಳಿಯದಂತೆ ಒಬ್ಬನೇ ಗಂಡನನ್ನು ವರಿಸಿಕೊಂಡಿದ್ದ ವಿಚಿತ್ರ ಸಂಗತಿಯೊಂದು ಪೆರಿಸಿನಲ್ಲಿ ನಡೆದಿರುತ್ತದೆ. ಈ ಗಂಡನ ಹೆಸರು ಹೆನ್ರಿ ಗ್ರೆಂಡಿನ್ ಎಂದು. ಇವನು 20 ವರ್ಷಗಳ ಮೊದಲು ರೆನೆ ಎಂಬವಳನ್ನು ವಿವಾಹವಾದನು. ಇದಾದ ಸ್ವಲ್ಪ ತಿಂಗಳಲ್ಲಿ ರೆನೆಯ ತಂಗಿ ಮೈವೊನ್ನೆಯು ಸೆಕ್ರೆಟರಿಯಾಗಿ ಕೆಲಸ ಮಾಡಲು ಪೆರಿಸಿಗೆ ಹೋದಳು. ಮೈವೊನ್ನೆಗೂ ಅವಳ ಭಾವನಿಗೂ ಸ್ನೇಹಾಚಾರವಿದ್ದು ಗ್ರೆಂಡಿನನು ಅವಳನ್ನು ಪೆರಿಸಿನಲ್ಲಿ ಸುಳ್ಳು ಹೆಸರಿನಿಂದ ಮದುವೆಯಾದನು. ಇಬ್ಬರೂ ಸಹೋದರಿಯರೂ ಕಾಗದಗಳಲ್ಲಿ ತಮ್ಮ ತಮ್ಮ ಗಂಡನನ್ನು ಹೊಗಳುತ್ತಾ ದಾಂಪತ್ಯ ಸುಖವನ್ನು ವಿವರಿಸುತ್ತಿದ್ದರು. ಹೀಗೆ 20 ವರ್ಷ ಕಳೆಯಿತು. ರೆನೆಯು ಹಲವು ಸಲ ಪೆರಿಸಿಗೆ ಬಂದು ತನ್ನ ತಂಗಿಯನ್ನು ಕಂಡಳು. ಆದರೆ ಮೈವೊನ್ನೆಯ ಗಂಡನು ಅವಳು ಬರುವಾಗಲೇ ಎಲ್ಲಿಗಾದರೂ ಹೋಗಿ ಬಿಡುತ್ತಿದ್ದನು. ಅವನ ಭಾವಚಿತ್ರವೂ ರೇನೆಗೆ ಕಾಣಸಿಗಲಿಲ್ಲ. ಭಾವಚಿತ್ರ ತೆಗೆಯುವುದೆಂದರೆ ತನ್ನ ಗಂಡನಿಗೆ ಬದ್ಧ ದ್ವೇಷವೆಂದೇ ಮೈವೊನ್ನೆಯ ಹೇಳಿಕೆ. ಇದರಿಂದೆಲ್ಲಾ ಸಂಶಯಗೊಂಡ ರೇನೆಯು ಅನಿರೀಕ್ಷಿತವಾಗಿ ಮೈವೊನ್ನೆಯ ಮನೆಗೆ ಬಂದಳು. ಬಂದು ನೋಡುವಾಗ ತನ್ನ ಗಂಡನೇ ಮೈವೊನ್ನೆಯ ಗಂಡನಾಗಿದ್ದುದು ತಿಳಿದು ಬಂತು.

ತಲೆ ಕೂದಲಿಗಾಗಿ ಉಪವಾಸ.

ಡಿಲ್ಲಿಯಲ್ಲಿ ಬ್ರಾಹ್ಮಣನೊಬ್ಬನು ತಲೆ ಕ್ಷೌರ ಮಾಡಿಸುವಾಗ ಕ್ಷೌರಿಕನು ಅತ್ಯಲ್ಪವಿದ್ದ ತಲೆ ಕೂದಲುಗಳ ಧಾರ್ಮಿಕ ಮಹತ್ವವನ್ನು ತಿಳಿಯದೆ ಪೂರ್ಣ ಬೋಳಿಸಿಬಿಟ್ಟ. ಬ್ರಾಹ್ಮಣನು ಈ ಧರ್ಮ ದ್ರೋಹಕ್ಕಾಗಿ ಉರಿದು ಬಿದ್ದು ಕ್ಷೌರಿಕನನ್ನು ಶಪಿಸಿದ. ಆ ಮೇಲೆ ಅದರ ಪ್ರಾಯಶ್ಚಿತ್ತಕ್ಕಾಗಿ 6 ದಿನ ಉಪವಾಸ ಮಾಡಿ, ಶುದ್ಧಿ ಸಂಸ್ಕಾರ ಮಾಡಿಕೊಳ್ಳುವ ಮೊದಲು ಇನ್ನೂ ಕೆಲ ದಿನ ಉಪವಾಸ ಮಾಡಲಿರುವನಂತೆ.

ಬಡತನದ ಕಿಡಿ.

ಲೇಖಕರು:—ಶ್ರೀ. ಬಿ. ನರ್ಸಪ್ಪ, ಮಂಗಳೂರು.

ಹೌದು ನಾನು ಪಾಪಿ. ನಿಜವಾಗಿಯೂ ಪಾಪಿ. ಆದರೆ—ಆದರೆ—ನಾನು ಪಾಪಿಯಾಗಲು ಕಾರಣರಾರು? ನಾನೇ? ಛೆ! ಎಂದಿಗೂ ಅಲ್ಲ. ಕೊಲೆಪಾತಕಿ, ಹೌದು! ವಿಶ್ವಾಸಘಾತಕಿಯೂ ಹೌದು! ಅಯ್ಯೋ ನನ್ನ ದೇಹವೆಲ್ಲಾ ಸುಡಹತ್ತಿರುವುದು. ನನ್ನ ಅಂಗಾಂಗದಲ್ಲೆಲ್ಲಾ ಉರಿ! ಉರಿ! ಸಹಿಸಲಾರದ ಉರಿ! ತಡೆಯಲಾರದ ಜ್ವಾಲೆ! ಸುಡುತ್ತಿರುವ ಬೆಂಕಿ! ನಾನು ಪಾಪಿ! ಅಲ್ಲ! ಅಲ್ಲ! ನಾನು ಪಾಪಿಯಲ್ಲ! ನಾನು ಕೊಲೆಗಡುಕನಲ್ಲ! ನನ್ನಿಂದೇನೂ ಆಗಿಲ್ಲ!

ನನ್ನ ಇನ್ನೊಂದೆರಡು ಮಾತನ್ನಾದರೂ ಕೇಳಲಿಷ್ಟವುಳ್ಳ ಜನರಾರಾದರಿದ್ದರೆ ದಯಮಾಡಿ ಇತ್ತ ಕೇಳಿರಿ. ನನ್ನಿಂದಾದ ಅಪರಾಧದ ಗುಟ್ಟೇನೆಂಬುದನ್ನು ತಿಳಿಸುವೆನು. ಬಳಿಕಾದರೂ ನಾನು ತಪ್ಪಿತಸ್ಥನಲ್ಲವೆಂದೊಪ್ಪುವಿರಿ; ಹಾಗೂ ಒಪ್ಪದಿದ್ದರೂ ಒಪ್ಪದೇ ಹೋಗಲಾರಿರೇಕೆ? ಈಗಲೋ ಇನ್ನರೆಕ್ಷಣದಲ್ಲೋ ಸಾಯಲಿರುವ ನನಗೆ ಯಾರ ಹಂಗಾದರೂ ಏತಕ್ಕಿರುವುದು? ನಾನು ಬಡವನು! ತೀರಾ ಬಡವನು! ಅಂತೂ ಆ ಸಾಹುಕಾರ ಮಾಧವರಾಯರಲ್ಲಿ ಕೆಲಸಕ್ಕೆ ನಿಂತುದು; ಅವರ ಸೇವಾ ವೃತ್ತಿ ಮಾಡಲಿಕ್ಕಾರಂಭವಾಗಿ ಇಂದಿಗೆ ೪ ವರ್ಷಗಳಾದುವು. ಮಾಧವರಾಯರೆಂದರೆ ನಿಮಗೆಲ್ಲರಿಗೂ ಪರಿಚಯವುಳ್ಳ ಘನ ಹೊಂದಿದ ಮನುಷ್ಯರೇ! ಮಾಧವರಾಯರಿಲ್ಲದ ಯಾವ ಮಹಿಳಾ ಸಭೆಯೂ ಇಲ್ಲ. ಇನ್ಯಾವ ಆರ್ಯಸಮಾಜವೂ ಇಲ್ಲ. ಮತ್ಯಾವ ಕೊಂಗ್ರೆಸೂ ಇಲ್ಲ! ಅಲ್ಲೆಲ್ಲೂ ರಾಯರು ಅಧ್ಯಕ್ಷಸ್ಥಾನವನ್ನು ಪಡೆವವರೇ! ಅಲ್ಲೆಲ್ಲೂ ರಾಯರ. ಬಡಜನರ ಉದ್ಧಾರದ ವಿಷಯಕವಾದ ಭಾಷಣಗಳೇ! ಅಂದ ಬಳಿಕ ಅವರನ್ನು ಕಂಡರಿಯದವರಾರಿರಬೇಕು? ಅಂತಹ ಬಡವರ ಬಂಧು(?)ಗಳಿಡೆಯಲ್ಲೇ ನಾನಿದ್ದುದೆಂದರೆ ನನಗೇತರ ಚಿಂತೆ? ರಾಯರಿಗೆ ಅವರ ಮಕ್ಕಳ ಮೇಲೆ ಬಹಳ ಮಮತೆ. ಮಕ್ಕಳೆಂದರೆ, ಮಕ್ಕಳು ಕುಳಿತ ಅಡಿಯ ಮಣ್ಣು ತಿನ್ನುವರು. ಮಕ್ಕಳಿಗಾಗಿ ಅನಾವಶ್ಯಕ ವೆಚ್ಚವನ್ನೇ ತಿಂಗಳಿಗೆ ಕಡಿಮೆಯಲ್ಲೇ ಸುಮಾರು ೧೦೦—೨೦೦ ರೂಪಾಯಿಗಳನ್ನು ನೀರಿನಂತೆ ವೆಚ್ಚಮಾಡಬಲ್ಲರು. ಏಳು ದಿನಗಳಿಂದಲೂ ಕೂಳು ತಿನ್ನದೆ ಕಾಲಿಗೆ ಬಿದ್ದು ಬೇಡುವ ನಾಲಿಗೆ ಒಣಗಿದ ಬಡ ಭಿಕ್ಷುಕರಿಗೆ ಪೈಯೊಂದನ್ನೂ ಭಿಕ್ಷೆ ಕೊಡುವುದೆಂದರೆ ರಾಯರ ಪಂಚಪ್ರಾಣವೇ ಹಾರಿಹೋಗುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ, ಅವರ ಜೀವನದಲ್ಲೊಮ್ಮೆಯಾದರೂ ಅವರೊಂದು ಪೈಯನ್ನೂ ದಾನ ಮಾಡಿದವರಲ್ಲ! ಗೋಮುಖ ವ್ಯಾಘ್ರವೆಂಬ ಪ್ರಾಣಿ ಲೋಕದಲ್ಲಿರುವುದೆಂದಾದರೆ, ಅದೀಗ ಇವರೆಂದೇ ಹೇಳಬಹುದು. ಜನರ ಕಣ್ಣಿಗಿವರು ಒಳ್ಳೇ ಸಾಧು ಸ್ವಭಾವದವರೆಂದೇ ತೋರಿಸಿಕೊಳ್ಳುವರು. ಅಂದರೆ ಒಬ್ಬನು ಎರಡೇಟು ಬಿಟ್ಟರೂ, ಇವರು ಮರುಮಾತಾಡಲಾರರು. ಅದೊಂದು ಇವರಲ್ಲಿದ್ದ ಸುಗುಣ; ಇದರಿಂದಲೇ ಇವರು ವಿಖ್ಯಾತರು.

ಮೊನ್ನೆ ಅಮವಾಸ್ಯೆ ರಾತ್ರಿ ನನ್ನ ಹೆಂಡತಿ ಹೆರಿಗೆಯ ನೋವಿನಿಂದ ಸಂಕಟಪಡುತಿದ್ದಾಳೆ. ಸೂಲಗಿತ್ತಿಯಳನ್ನು ಮನೆಗೆ ಕರಕೊಂಡು ಬರೋಣವೆಂದರೆ ಅವಳಿಗೆ ಕೈ ಬಿಸಿ ಮಾಡಲು ನನ್ನೊಡನೆ ಹಣವಿಲ್ಲ. ಆಸ್ಪತ್ರೆಗಾದರೂ ಒಯ್ಯೋಣವೆಂದರೆ ಅವಕ್ಕೂ ಬೇಕು, ಹಣ! ಹಣ! ಹಣ! ಹಣ! ಲೋಕಕ್ಕೆ ಬಂದ ಮೇಲೆ ಕುಳ್ಳಲೂ ನಿಲ್ಲಲೂ ಹೋಗಲೂ—ಬರಲೂ ಕಡೆಗೆ, ಸರಿಯಾಗಿ ಸ್ವತಂತ್ರಪೂರ್ಣವಾಗಿ ಶ್ವಾಸನವನ್ನೊಮ್ಮೆ ಬಿಡಬೇಕೆಂದಾದರೂ ಬೇಕು ಹಣ! ಏ ಕಟುಕ ಹಣವೇ! ನೀನೇಕಪ್ಪಾ ಈ ಲೋಕದಲ್ಲಿ ಹುಟ್ಟಿದಿ? ನಿನ್ನಿಂದಾಗಿ ಎಷ್ಟು ಜನ—ಮನ—ಮಠ—ಊರು—ರಾಜ್ಯ ನಾಶವಾಗಿಲ್ಲ? ನಿನ್ನ ಪ್ರತಾಪವೇ! ನಿನ್ನ ಮಹಿಮೆಯೇ! ಎಲೆಲಾ, ನನಗೇಕೆ ಈಗ ಹಣದ ವಿಚಾರ? ನನ್ನ ದೇಹವೇ ನನಗೀಗ ಬೇಡವೆಂದ ಮೇಲೆ ನನಗೆ ಹಣವೇಕೆ ಬೇಕು? ಹೌದು ನನ್ನ ಹೆಂಡತಿ ಹೆರಿಗೆಯ ನೋವಿನಿಂದ ನರಳುತ್ತಿದ್ದ ಕಷ್ಟ? ನಾನು ನನ್ನ ರಾಯರಲ್ಲಿ ಓಡಿ ಹೋದೆ—ಕಾಲಿಗೆ ಬಿದ್ದೆ; ಹೇಳಿದೆ—"ರಾಯರೇ ನನ್ನ ಹೆಂಡತಿ ಸಾಯುವ ಸ್ಥಿತಿಯಲ್ಲಿದ್ದಾಳೆ. ನನ್ನ ಆರು ತಿಂಗಳುಗಳ ಸಂಬಳ ಬಾಕಿ ಉಂಟು. ಆ ಪೈಕಿ ಈಗ ೨ ರೂಪಾಯಿಗಳನ್ನಾದರೂ ಕೊಡುತಿದ್ದರೆ, ಒಮ್ಮೆಗೊಂದು ಜೀವ ಬದುಕಿಸಿದ ಪುಣ್ಯ ಬರುತ್ತಿತ್ತು." ಕಲ್ಲಾದರೂ ಕರಗಬೇಕಿತ್ತು! ಮರವಾದರೂ ಮರುಗಬೇಕಿತ್ತು! ರಾಯರ ಮನಸ್ಸು ಮಾತ್ರ ಕರಗಿದ್ದೂ ಇಲ್ಲ! ಮರುಗಿದ್ದೂ ಇಲ್ಲ!! ಅವರಿಗೆ ಬೇರೊಂದು ಸಿಡಿಲೂ ಬಡಿಯಲಿಲ್ಲ! ಒಂದಕ್ಕೆ ಎರಡು ಲಾಭವಿಟ್ಟು ರಾಯರು ಸುಲಿದು—ಸೆಳೆದು ಕೂಡಿಟ್ಟ ಧನವೇ ರಾಯರ ಮುಂದಿನ ನಾಲ್ಕು ತಲೆಗಳ ವರೆಗೂ ಬರುವಷ್ಟಿತ್ತು. ಓಡಿ ಬಂದೆ ಮನೆಗೆ; ನನ್ನ ಮುದ್ದು ಹೆಂಡತಿಯ ಸ್ಥಿತಿ ಮುಂಚಿಗಿಂತಲೂ ವಿಶೇಷವಿತ್ತು. ಗರ್ಭದ ಮಗುವಿನ ಅರ್ಧ ದೇಹವು ಲೋಕಕ್ಕೆ ಬಂದಿತ್ತು. ಅರ್ಧ ದೇಹವು ಅಯ್ಯೋ—ಅಯ್ಯೋ—ಹೇಳಲು ನಾಲಿಗೆ ಬಾರದಲ್ಲಾ............ ಅವಳು ಕಣ್ಣೀರಿಟ್ಟು ಹೇಳಿದಳು. ಅಯ್ಯೋ ನನಗಾಗಿ ನೀವೆಷ್ಟು ಪಾಡುಪಟ್ಟಿರಿ! ನನ್ನಂತ್ಯವೀಗಲೇ ಆಗುವುದು. ಇನ್ನೊಂದು ಜನ್ಮದಲ್ಲೂ ದೇವರು ನನ್ನನ್ನು ತಮ್ಮ ಪಾದವಡಿಯಲ್ಲೇ ಹಾಕಲಿ. ಬಡತನ ಮಾತ್ರ ನಮ್ಮ ವೈರಿಗಳಿಗೂ ಬಾರದಿರಲಿ ಎಂದಳು. ನನಗವಳ ದೇಹದ ವಿಷಯದಲ್ಲಿ ಏನು ಮಾಡಲೂ ತೋಚಲಿಲ್ಲ. ಪುನಃ ರಾಯರಲ್ಲಿಗೆ ಹೋಗುವದೆಂಬ ಒಂದು ಕಿರು ಆಶೆ ಮೂಡಿತು. ಓಡಿದೆ—ಬೇಡಿದೆ—ಕಾಡಿದೆ—ನಿಷ್ಫಲ. ಆರು ತಿಂಗಳುಗಳ ಸಂಬಳ! ಬಾಕಿ ಕೇಳುವುದು ಎರಡೇ ರೂಪಾಯಿ! ಎಲ್ಲವನ್ನೂ ಯೋಚಿಸಿದೆ! ದೇಹವೊಮ್ಮೆ ಬಿಸಿಯಾಯಿತು. ಅಲ್ಲಿ ನಿಲ್ಲದೆ ನನ್ನ ಗುಡಿಸಲಿಗೆ—ಮುದ್ದಿನ ಹೆಂಡತಿ ಬಳಿಗೆ ಓಡಿ ಬಂದೆ! ನೋಡಬೇಕೆನನ್ನು? ಹಾ ವಿಧಿಯೇ! ನನ್ನ ಹೆಂಡತೀ—ನನ್ನ ಹೆಂಡತೀ ಬಡವನ ಹೆಂಡತೀ—ಬಡವನ ಪ್ರಾಣಾ ಬಡವನ ತ್ರಾಣಾ! ಬಡವನ ಮಾನಾ! ಅಯ್ಯೋ ಬಡವಳ ಹೆಣಾ! ಹೆಣಾ! ಹೆಣಾ! ಬಡವರ ಬಂಧುಗಳು ನನ್ನ ರಾಯರು—ಊರಲ್ಲೆಲ್ಲಾ ಧರ್ಮಾರ್ಥ ಕೀರ್ತಿ ಪಡೆದವರು ಹೌದು ಅವರೆಡೆಗೆ ಓಡಿದೆ—ಮಲಗಿದ್ದರು—ನನ್ನ ಕೈಯಲ್ಲಿತ್ತು ಚೂರಿ! ಅದೇ ಕ್ಷಣ ಅದೇ ಚೂರಿ ಅವರ ಎದೆಯಲ್ಲಾಯಿತು! ಕೂಡಲೇ ನನ್ನ ಎದೆಯ ಬಳಿಗೂ ಬಂತು ಅದೇ ಚೂರಿ! ಆದರೂ ಏಕೋ ಒಳಹೊಕ್ಕಲಿಲ್ಲ. ಪುನಃ ಪುನಃ ಅವರ ಎದೆಗೇ ಮೂರುನಾಲ್ಕು ಸಲ ಹೊಕ್ಕಿ ಹೊರಬಂದು ತಾಂಡವ ನೃತ್ಯವನ್ನಾಡಿತು. ಎಲೋ ಪಾಶೀ ಕಂಭವೇ! ಇಳಿಸು ಇಳಿಸು, ನಿನ್ನ ಹಗ್ಗವನ್ನು ಬೇಗ, ನೀನೇ ಇಳಿಸು! ನೀನಾದರೂ ಬಡವನಿಗೆ ಸುಖವನ್ನಿತ್ತ ಪುಣ್ಯವನ್ನು ಕಟ್ಟಿಕೊಂಡಿರು. ಇಗೋ ಬಂದೆ, ಮುದ್ದು ಹೆಂಡತೀ......ಇಗೋ, ಬಂದೆ ಓ ನನ್ನ ರಾಯರೇ—ನಿಮ್ಮ ಜನ್ಮ ಜನ್ಮದ ಬೆನ್ನ ಹಿಂದೆಯೂ ನಾನು ಹುಟ್ಟಿಯೇ ತೀರುವೆನು. ನಿಮ್ಮ ಪ್ರತಿಯೊಂದು ಜನ್ಮದ ನಾಶವನ್ನು ಮಾಡಿಯೇ ಸಾಯುವೆನು. ಇದೋ ಬಂ— — —

(ಕಥಾ ನಾಯಕನು! ಮಾಧವರಾಯರನ್ನು ಕೊಂದುದಾಗಲಿಲ್ಲ. ಲೋಭಿಯು ಅಂತ್ಯ ಯಾತನೆಯನ್ನನುಭವಿಸುವಂತೆ ಅವನು ಮಾಡುತ್ತಿದ್ದರೆ ಭಾವವು ಹೆಚ್ಚಾಗುತ್ತಿತ್ತು.) ಸಂ.

ಬಡವರ ಬಂಧು ಹಾಸ್ಯೌಷಧಾಲಯ.

ಡಾಕ್ಟರ್:—"ನಿಮ್ಮ ದೃಷ್ಟಿಮಾಂದ್ಯಕ್ಕೆ ಕಾರಣ ಅತಿಯಾಗಿ ಕುಡಿಯುವುದೇ!"

ಕುಡಿಕ:—"ಅಸಾಧ್ಯ, ಡಾಕ್ತರರೇ, ನಾನು ಕುಡಿದಾಗ ನನಗೆ ಒಂದಕ್ಕೆ ಬದಲಾಗಿ ಎರಡು ಕಾಣಿಸುತ್ತದೆ.!"

ಕಮಲಮ್ಮನ ಮನೆಗೆ ಚಿಕ್ಕ ಹುಡುಗನು ವೃತ್ತ ಪತ್ರಿಕೆ ಹಿಡಿದುಕೊಂಡು ಪ್ರವೇಶಿಸುತ್ತ, ಅಂಗಳದಲ್ಲಿ ನಿಂತ ದೊಡ್ಡ ನಾಯಿಯನ್ನು ನೋಡಿ ಬೆಪ್ಪಾದನು.

ಕಮಲಮ್ಮ:—"ಬಾ, ಆ ನಾಯಿ ಕಚ್ಚುವುದಿಲ್ಲ."

ಹುಡುಗ:–(ಸಂದೇಹದಿಂದ)—"ನುಂಗುತ್ತದೆಯೆ?"

ಗಂಡ (ಹೆಂಡತಿಗೆ): "ಮಗು ಅಳುತ್ತಿದೆ; ಹಲ್ಲುನೋವಿನಿಂದ; ಏನಾದರೂ ಮಾಡಬಾರದೆ?"

ಹೆಂಡತಿ:–"ಮಾಡಿದ್ದೇನೆ–ನನ್ನ ಕಿವಿಯಲ್ಲಿ ಹತ್ತಿ ತುರುಕಿಸಿಕೊಂಡಿದ್ದೇನೆ."

ತಂದೆ (ಓದುತ್ತ):–"ಆಫ್ರಿಕದ ಒಂದು ಪ್ರದೇಶದಲ್ಲಿ ಜನರು ವರ್ಷಕ್ಕೆ ಒಂದು ಬಾರಿ ಮಾತ್ರ ಸ್ನಾನಮಾಡುವರಂತೆ."

ಮಗು:–ಅಪ್ಪಾ, ನಾವೂ ಅಲ್ಲಿಗೆ ಹೋಗುವ."

ಧನಿಕ (ಭಿಕ್ಷೆ ಕೊಡುವಾಗ):—"ತಿರುಪೆ! ವ್ಯಾಪಾರದ ಮುಗ್ಗಟ್ಟು ನಿಮಗೆ ಇನ್ನಾದರೂ ತಿಳಿಯುವುದೆಂದು ನಾನು ಭಾವಿಸುವೆನು."

ಭಿಕ್ಷುಕ:–'ಅಹುದು ಸ್ವಾಮಿ. ಇದೇ ಬಗೆಯ ಆರ್ಥಿಕ ದುಃಸ್ಥಿತಿ ಮುಂದರಿದರೆ ನಾನು ಖಂಡಿತವಾಗಿಯೂ ಕೆಲಸ ಹುಡುಕಬೇಕಾಗುವುದು.'

ಮಿಸ್ ನಂಜಮ್ಮ (ಒಬ್ಬ ಗೃಹಸ್ಥನ ಮೇಲೆ ತನ್ನ ಮೋಟಾರನ್ನು ನಡೆಸಿದ ಮೇಲೆ):–"ನಿನ್ನದೇ ತಪ್ಪು. ನಾನು ಹತ್ತು ವರ್ಷಗಳಿಂದಲೂ ಡ್ರೈವ್ ಮಾಡುತಿದ್ದೇನೆ"

ಮೋಟಾರಿನಡಿ ಬಿದ್ದವ:–"ಅಹುದಮ್ಮಾ. ನಾನೂ ೫೦ ವರ್ಷಗಳಿಂದ ನಡೆಯುತಿದ್ದೇನೆ ಎಂದು ತಿಳಿದಿರಲಿ."

ವಕೀಲ:—ಛೆ!

ಸಾಕ್ಷಿ:—ಛೆ!

ವ:—ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಬೇಕು. ಈಗ ಅದನ್ನೇ ಉಚ್ಚರಿಸುವದಲ್ಲ.

ಸಾ:–ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಬೇಕು. ಈಗ ಅದನ್ನೇ ಉಚ್ಚರಿಸುವದಲ್ಲ.

ವ:–ನಾನು ಹೇಳಿದ್ದು ನಿಮಗೆ ತಿಳಿಯಲಿಲ್ಲವೊ?

ಸಾ:–ನಾನು ಹೇಳಿದ್ದು ನಿಮಗೆ ತಿಳಿಯಲಿಲ್ಲವೊ?

ಕೋರ್ಟು:—ಈ ಸಾಕ್ಷಿಗಾರರನ್ನು ಹೊರಗೆ ಮಾಡಿರಿ. ಕೋರ್ಟಿನ ಸಮಯವನ್ನು ವೃಥಾ ಹಾಳು ಮಾಡುತ್ತಾನೆ.

ಸಾ:—ಈ ಸಾಕ್ಷಿಗಾರರನ್ನು ಹೊರಿಗೆ ಮಾಡಿರಿ. ಕೋರ್ಟಿನ ಸಮಯವನ್ನು ವೃಥಾ ಹಾಳು ಮಾಡುತ್ತಾನೆ.

ಕೂಡಲೇ ಪೇದೆ ಬಂದು ಸಾಕ್ಷಿಗಾರನ ಕೈಗೆ ಹಿಡಿದನು. ಈತನೂ ಪೇದೆಯ ಕೈಗೆ ಹಿಡಿದನು. ಇಬ್ಬರೂ ಹೊರಗೆ ಬಂದರು.

ಊಟದ ಹೊಟೆಲಿನ ಗಿರಾಕಿ:–ಈ ದಿನ ಬಳಸಿದ ಅನ್ನ ಏನೂ ಒಳ್ಳೇದಿಲ್ಲ. ನಿನ್ನೆ ರಾತ್ರಿಗೆ ಮಾಡಿದ ಅನ್ನವಾದರೂ ಬಹಳ ಒಳ್ಳೇದಾಗಿತ್ತು.

ಹೊಟೇಲಿನವ:—(ವಿಚಾರಮಗ್ನ) ಹಾಗೆ ಆಗಲಿಕ್ಕೆ ಕಾರಣವೇ ತಿಳಿಯುವುದಿಲ್ಲವಲ್ಲ. ನಿನ್ನೆ ರಾತ್ರೆ ಮಾಡಿದ ಅನ್ನವನ್ನೇ ಈಗ ನಿಮಗೆ ಬಳಸಿದ್ದು.

ಪ್ರಯಾಣಿಕ:—ಈ ಸ್ಟೇಷನಿನಲ್ಲಿ ಗಾಡಿ ಎರಡೇ ನಿಮಿಷ ನಿಲ್ಲುವದಷ್ಟೆ? ನನಗೆ ಛಳಿ ಆಗುತ್ತದೆ. ರೈಲ್ವೆ ಹೊಟೇಲಿಗೆ ಹೋಗಿ ಒಂದು ಕಪ್ ಛಾ ಕುಡಿದು ಬರುವ ತನಕ... ... ...

ಗಾರ್ಡ:—ಅಷ್ಟು ಸಮಯವಿಲ್ಲ. ಆದರೆ ನನಗೆ ಒಂದೇ ಉಪಾಯ ಕಾಣುತ್ತದೆ.

ಪ್ರ:—ಅದ್ಯಾವ ಉಪಾಯ? ಹೇಳಿರಿ ಸ್ವಾಮಿ.

'ನಾನೇ ನಿಮ್ಮ ಸಂಗಡ ಚಾ ತೆಕ್ಕೊಳ್ಳಲಿಕ್ಕೆ ಬಂದೆನೆಂದರೆ ತೀರಿತು' ಎಂದು ಗಾಡಿಯಿಂದ ಕೆಳಗಿಳಿಯುತ್ತಾ ಉಪಾಯ ಸೂಚಿಸಿದನು.

ಒಬ್ಬನು ವ್ಯಾಖ್ಯಾನ ಕೊಡುವಾಗ 'ಔಷಧದಿಂದ ಯಾರಿಗೂ ಪ್ರಯೋಜನವಿಲ್ಲ' ಎಂದು ಹೇಳಿದನು.

'ನಿಜವಾಗಿ ಸುಳ್ಳು' ಪ್ರೇಕ್ಷಕರಲ್ಲಿ ಯಾರೋ ಹೇಳಿದರು.

'ನಿಜವಾಗಿ ಸುಳ್ಳು? (ಬಲವಾದ ಸ್ವರದಿಂದ ವ್ಯಾಖ್ಯಾನಗಾರನು ಕೇಳಿದನು.) ಸುಳ್ಳೆಂದು ಯಾರು ಹೇಳುವರು?

ಒಬ್ಬ ತರುಣನು ಎದ್ದು ನಿಂತು 'ಔಷಧದಿಂದಲೇ ನನ್ನ ಮನೆಯವರೆಲ್ಲರೂ ಪ್ರಯೋಜನ ಹೊಂದಿರುವರು.'

ಆದರೆ ಇದಕ್ಕೇನಾದರೂ ಆಧಾರವಿದೆಯೇ?

'ಪ್ರತ್ಯಕ್ಷವಾದ ಆಧಾರವಿದೆ! ನನ್ನ ತಂದೆಗೆ ಔಷಧದ ವ್ಯಾಪಾರವೇ ಆಗಿದೆ.'

ನವಂಬರ ತಿಂಗಳ ನಂಬ್ರ ೨ನೇ ಒಗಟನ್ನು ಸಮರ್ಪಕವಾಗಿ ಬಿಚ್ಚಿದವರು.

1. ಕೆ. ವಾಸುದೇವ ಕಾರಾಂತ, ಕಾಸರಗೋಡು. 2. ಯು ಗೋಪಾಲಕೃಷ್ಣ ನಾಯ್ಕ, ಕಾಸರಗೋಡು. 3. **ಎಂ. ಗೋವಿಂದ ಶೆಣೈ, ಶಿಕಂದರಾಬಾದ್.** 4. ಜಿ. ಯನ್. ಪುತ್ರನ್, ಪೆಟಿಟ್ ಬಿಲ್ಡಿಂಗ್, ಮುಂಬಾಯಿ. 5. **ಎ. ಯಸ್. ಕರ್ಮರನ್, ಮುಂಬಾಯಿ.** 6. ಜಿ. ಡಿ. ಸುವರ್ಣ, ಚರ್ಚ್ ಗೇಟ್ ಸ್ಟ್ರೀಟ್, ಮುಂಬಾಯಿ. 7. **ವಿ. ಯಸ್. ಶಿಬ್ರೂರ್ ಕಾರ್, ಮುಂಬಾಯಿ. A. ಎ. ಶ್ರೀನಿವಾಸ ಕುಡವ್ಮ ತಾಯ, ಕಾರ್ಕಳ.** 8. ಬಿ. ಭಾಸ್ಕರ್ ರಾವ್, ಕಾಸರಗೋಡು. 9. ಯಂ. ಬಿ. ಶೆಟ್ಟಿ, Co/ ಚಾರ್ಲ್ಸ್ ಲಷ್ಟರ್ ಎಂಡ್ ಕೊ, ಮುಂಬಯಿ. 10. ಶ್ರೀಮತಿ ಸುರತ್ಕಲ್ ರುಕ್ಕುಬಾಯಿ, ಮುಂಬಾಯಿ. 11. ಶ್ರೀಮತಿ ರಾಧಾಬಾಯಿ, ಕಾರ್ಕಳ. 12. **ಜಾರಪ್ಪ ಜೆ. ಸುವರ್ಣ, ಮು.** 13. ದಾಸು, ಮುಂಬಾಯಿ. 14. ಸಂಪಾಜೆ ಮುಂಡಪ್ಪ ರೈ. ಪುತ್ತೂರು. 15. ಟಿ. ಪಿ. ಸನೀಲ್ ಮುಂಬಾಯಿ. 16. ಯಸ್. ಆರ್. ಅಂಚನ್, ಮುಂಬಾಯಿ. **B. ರಮಾನಾಥ ಶ್ಯಾನುಭಾಗ Co/ ಪೋಸ್ಟುಮಾಸ್ಟರ್ ಸಂಪಾಜೆ.** 17. ಶೇಷಪ್ಪ ಜಿ. ಶಿರಿಯಾನ್, ಮುಂಬಾಯಿ. 18. ಎನ್. ಎಸ್. ಸನಿಲ್, ಮುಂಬಾಯಿ. 19. ಯಂ. ಸಂಜೀವ, ಕುಂದಾಪುರ. 20. ಕೆ. ಸಂಜೀವ ಕಾಮತ್, ಮುಂಬಾಯಿ. 21. ಯು. ಶಾಂತಾರಾಮ, ವಾದಾಬಾಯಿ ಬಿಲ್ಡಿಂಗ್, ಮುಂಬಾಯಿ. 22. ಬಿ. ಶಂಬು ಕೋಟ್ಯಾನ್ ಮುಂಬಾಯಿ. 23. ಯಲ್. ಬಿ. ಸಾಲಿಯಾನ್, ಮುಂಬಯಿ 24. ಐ. ಬಾಬು ಟೀಚರ್, ಸುರತ್ಕಲ್. 25. ಎಂ. ಎಂ. ಸುವರ್ಣ, ಮುಂಬಾಯಿ. **C. ಎಸ್. ಐ. ಐಮನ್ಸ್, ಪರೇಲ್, ಮುಂಬಾಯಿ.** 26. ಯಚ್. ಯನ್. ಕಾಂಚನ್, ಮುಂಬಾಯಿ. 27. **ಬಿ. ದೇವಪ್ಪ ಕುಂದಲಾಯ ಹೆಡ್ ಮಾಸ್ಟರ್, ಕಾಪು.** 28. ಯು. ಚಂದಪ್ಪ, ಹೆಡ್‌ಮಾಸ್ಟರ್, ಕಾಪು. 29. ಕೆ. ಯು. ಅಮೀನ್, ಮುಂಬಾಯಿ. 30. ಯಸ್. ಊವಯ್ಯ ಬಿ. ಸಾಲಿಯನ್, ಮುಂಬಾಯಿ. 31. ಎಸ್. ರಾಜು. ಟಿ. ಕೋಟ್ಯಾನ್, ಮುಂಬಾಯಿ. 32. ಎಸ್. ಚಂದು ಟಿ. ಕೋಟ್ಯಾನ್, ಮುಂಬಾಯಿ. **D. ಮೆಸಸ್ಸ್ ಪಿ. ವೈಕುಂಠ ಕಿಣಿ ಎಂಡ್ ಸನ್ಸ್, ಕಲಾಸ.** 33. ವೈ. ಪದ್ದು ಪಿ. ಮೆಂಡನ್; ಮುಂಬಾಯಿ. 34. ನರ್ಸಪ್ಪ ಬಿ. ಸುವರ್ಣ, ಮುಂಬಾಯಿ. 35. ಎಂ. ಬೀಚ್ಚ, ಮುಂಬಾಯಿ. 36. ಎ. ಕೂಕ್ರ ಪೂಜಾರಿ, ಮುಂಬಾಯಿ. 37. ಎ. ವಾಸು ಶೆಟ್ಟಿ, ಮುಂಬಾಯಿ. 38. ಅನಾಮಕ, ಮುಂಬಾಯಿ. 39. ಹೆಸರಿಲ್ಲದವ, ಮುಂಬಾಯಿ. 40. ಟಿ. ಚಂದ್ರರಾಜ ಶೆಟ್ಟಿ, ಸಿದ್ಧಕಟ್ಟೆ. 41. ಎ. ಬಿ. ಶೆಟ್ಟಿಗಾರ, ಟೀಚರ್ ಮುಂಬಾಯಿ. 42. ಕಾಪು ಚರ್ದಪ್ಪ ನರಸಿಂಹ ಶೆಣೈ. ರೋಯಲ್ ಹಿಂದೂ ರೆಷ್ಟೋರೆಂಟ್, ಮುಂಬಾಯಿ. **E. ಎಂ. ಎಸ್. ರಾವ್, ಮಿಕೆನಿಕ್, ನವಗೋವಾ.** 43. ಬಿ. ಕೆ. ಸಂಜೀವ ಪೈ, ಮುಂಬಾಯಿ. 44. **ನಗರ ವಿಶ್ವನಾಥ ನಾಯ್ಕ, ಹೆಡ್ ಕ್ಲಾರ್ಕ್, ಮುಂಬಾಯಿ.** 45. ಶಿವರಾಮ ಶೆಣೈ, ಮುಂಬಾಯಿ. **F. ಎಲ್. ಎಂ. ಕುಂದರ್, ಟಿ. ಪೆ. ೨೩೮, ಮುಂಬಾಯಿ.** 46. ಐ. ಕೆ. ಬಂಗೇರ, ಕಲ್ಕತ್ತ. 47. ಜನಾರ್ಧನ ಸಿ. ಅಮೀನ್, ಮುಂಬಾಯಿ. 48. ಬಪ್ಪನಾಡು ಜಾರಪ್ಪ ಎ. ಸುವರ್ಣ, ಮುಂಬಾಯಿ. **G. ಶ್ರೀಮತಿ ಅಮ್ಮಣ್ಣಿ, W/o ಎಂ. ಟಿ. ತನಿಯಪ್ಪ, ಬೈಲೂರು.** 49. ಕುತ್ತೆತ್ತೂರು ಶೀನಚೂವಪ್ಪ ಶೆಟ್ಟಿ, ಮುಂಬಾಯಿ. 50. ಸುರತ್ಕಲ್ ಪರಮೇಶ್ವರ ದೇಜು ಶೆಟ್ಟಿ, ಮುಂಬಾಯಿ. 51. ಕಡಂದಲೆ ನಾರಾಯಣ ಶೆಟ್ಟಿ, ಮುಂಬಾಯಿ. 52. ಕೂಳೂರು ಶೀನ ಶೆಟ್ಟಿ, ಮುಂಬಾಯಿ. **H. ಬಿ. ಡಿ. ಪುತ್ರನ್, ಮುಂಬಾಯಿ.** 53. ಕೊಡೆತ್ತೂರು ದಾಸು ಸೋಮ, ಮುಂಬಾಯಿ. 54. ಪದ್ಮನಾಭ ಪೈ, ಮರ್ಚಂಟ್, ಮುಂಬಾಯಿ. 55. ಹೊಸಬೆಟ್ಟು ಯಚ್. ಕೆ. ಬಂಗೇರ, ಮುಂಬಾಯಿ. 56. ಕಾಡಿಪಟ್ಣ ಸಿದ್ದು ಟಿ. ಪುತ್ರನ್, ಮುಂಬಾಯಿ. 57. ಬಿ. ವೆಂಕಟರಾವ್, ಕಾಸರಗೋಡು. 58. ಎಸ್. ಕೆ. ಉಚ್ಚಿಲ್, ಮುಂಬಾಯಿ. **I. ದಾಮೋಧರ ಪಿ. ಮೆಂಡನ್, Co/ ಮೆಸಸ್ಸ್ ಮುಲ್ಲ, ಮುಂಬಾಯಿ.** 59. ಕೆ. ಜಿ. ರಾವ್, ಮುಂಬಾಯಿ. 60. ಮೂಲ್ಕಿ. ಟಿ. ಎಂ. ಸುವರ್ಣ, ಮುಂಬಾಯಿ 61. ವೈ. ವಾಮನ, ಮುಂಬಾಯಿ. 62. ಎಂ. ಡಿ. ಶೆಟ್ಟಿ, ಮುಂಬಾಯಿ, 63. ಎಂ. ಡಿ. ಅಲ್ವಾರ್ ಅಯ್ಯಂಗಾರ್, ಮಲ್ಲೇಶ್ವರಮ್. 64. ಪಿ. ವಿ. ನಾಗರಾಜ ಚೆಟ್ಟಿ, ಹೊಳೆ ನರಸೀಪುರ. 65. ಪಿ. ಸಿ. ಶೆಟ್ಟಿ, ಜೈನ್, ಪಾಣೆಮಂಗಳೂರು. 66. ಪಿ. ವಾಮನ ವಾಸುದೇವ ನಾಯ್ಕ, ಪಾಣೆಮಂಗಳೂರು. 67. ಎನ್. ವಾಸುದೇವ ರಾವ್, ಹೆಡ್‌ಮಾಸ್ಟರ್, ಪಾಣೆಮಂಗಳೂರು. 68. ಎನ್. ಎಸ್ ರಾವ್, ಟೀಚರ್, ಪಾಣೆಮಂಗಳೂರು. 69. ಬಿ. ಸುಬ್ರಾಯ ಪೈ, ಪಾಣೆಮಂಗಳೂರು. 70. ಎನ್. ತಿಮ್ಮಪ್ಪಯ್ಯ, ಟೀಚರ್ ಪಾಣೆಮಂಗಳೂರು.

ಮಂಗಳೂರಿನ ಬಿಚ್ಚುಗರು.

1. ಕುಡ್ಪಿ ವಿಶ್ವನಾಥ ಶೆಣೈ, C/o ಬ್ರಾಂಚು ತಾಜಮಹಾಲ್ ಹೊಟೇಲು. 2. ಕೆ. ಸಂಕಪ್ಪ ಶೆಟ್ಟಿ, ಹಂಪನಕಟ್ಟೆ. 3. ಸಿ. ಶ್ರೀನಿವಾಸಮಲ್ಯ ಮರ್ಚಂಟ್, ಗೋಳಿಕಟ್ಟಾ ಬಜಾರು. **J. ಪಿ. ಸೂರ್ಯನಾರಾಯಣ, ಕಂದಕ.** 4. ಪಿ. ಸಿ. ಹಯಗ್ರೀವ ರಾವ್, V ಫೋರ್ಮ್ ಕೆನರಾ ಹೈಸ್ಕೂಲ್. 5. ಕೆ. ವಾಸುದೇವ ರಾವ್, ಕಂಪೌಂಡರ್, ಕೊಡಿಯಾಲ್‌ಬೈಲು. 6. ಎಸ್. ಕೋದಂಡಧರ, ಕೆಂಟೋನ್‌ಮೆಂಟ್ ರಸ್ತೆ. 7. ಕೆ ವಿಠಲ, II ಫೋರ್ಮ್ ಕೆನರಾ ಹೈಸ್ಕೂಲ್. 8. ಉಮನಾಥ ಸುವರ್ಣ, ಪಾಂಡೇಶ್ವರ. 9. ಸಿ. ಕೆ. ರಾಮಕೃಷ್ಣಯ್ಯ, ಕೋಮನ್‌ವೆಲ್ತ್ ಫೆಕ್ಟರಿ. 10. ಕೆ. ಶಂಕ. ಕೊಡಿಯಾಲಬೈಲು. 11. ಬಿ. ಮುಂಡಪ್ಪ 8ನೇ ತರಗತಿ, ಬೊಕ್ಕಪಟ್ಣಶಾಲೆ. 12. ಚಂದು ಮರ್ಪಾಡಿ, ಗಣಪತಿ ಹೈಸ್ಕೂಲ್. 13. ಬಿ. ಕೇಶವ ಭಟ್, ಮಣ್ಣಗುಡ್ಡೆ. 14. ಬಿ. ಲೋಕಯ ಸಾಲಿಯಾನ್, ಬೊಕ್ಕಪಟ್ಣ. 15. ಎ. ರಾಮಪ್ಪ, ಪಿಯರ್ಸ್‌ಲೆಸ್ಲಿ ಎಂಡ್ ಕಂಪೆನಿ ಲಿಮಿಟೆಡ್. 16. ಬಿ. ಪಿ. ಭಂಡಾರ್‌ಕಾರ್, ಬಂದರ. **K. ರಮಾನಾಥ ಬಿ. ಮರ್ಚೆಂಟ್, ಗೋಳಿಕಟ್ಟೆ ಬಜಾರು.** 17. ಎಂ. ಶೇಷಪ್ಪ ಡೊಂಗರಕೇರಿ. 18. ಬಿ. ಯು. ನ್ಯಾಕ್, ಗೋಳಿಕಟ್ಟಾ ಬಜಾರು. 19. ಬಿ. ಪಿ. ವಾಸುದೇವ 2ನೇ ಕ್ಲಾಸು, ಬೊಕ್ಕಪಟ್ಣ ಶಾಲೆ. 20. ಕೆ. ಜಿ. ಶಿರಿಯಾನ್, ಎಸ್. ಎಸ್. ಎಲ್. ಸಿ. ಕ್ಲಾಸ್ ಕೆನರಾ ಹೈಸ್ಕೂಲ್. 21. ಕೆ. ಬಾಬು ಟೈಲರ್, ರಥಬೀದಿ.

೧೭ನೇ ಪುಟವನ್ನು ನೋಡುವುದು.

M. R. Ry. B. G. Mangalorekar, Avl., Partner, Messrs. Paragon Products Co., Ballard Estate, Bomby. Rs. 100—0—0.

M. R. Ry. K. Venkappayya Avl., Welcome Hotel, Fort Bombay. Rs. 50—0—0

M. R. Ry. K. M. Gaithonde Avl., Cheif Agent Popular Insurance Co., Ltd. Kararwal Bld. Lohar Chal, Bombay. Rs. 10—0—0.

M. R. Ry. N. S. Bangera Avl., 116 Proctor House, Proctor Road, Bombay Rs. 10—0—0.

M. R. Ry. M. B. Amin Avl., Empire Automobiles Newqueens' Road, Bombay 4. Rs. 10—0—0.

M. R. Ry. U. K. Kadbet Avl., Bohra Bazar, Fort Bombay. Rs. 10—0—0.

M. R. Ry. H. S. Mandon Avl., Parel, Bombay. Rs. 10—0—0.

M. R. Ry. N. P. Bolar Avl., 22 Apollo street, Fort Bombay. Rs. 10—0—0.

M. R. Ry. K. Sundar Amin Avl, 22 Police Court Lane, Top floor, Fort Bombay. Rs. 10—0—0.

M. R. Ry. N. B. Amin Avl, 22 Police Court Lane, Top floor, Fort Bombay Rs. 10—0—0.

M. R. Ry. M. Sampath Rao, Avl., 48 Mint Road, Fort Bombay. Rs. 5—0—0.

M. R. Ry. B. K. Salian Avl, Fudowar Hair Dressing Saloon, Grunbow Street, Fort Bombay.

M. R. Ry. Bhasker Kotenkar, Avl., C/o Havero Trading Co., Ltd. P. O. Box, No. 37 Bombay.

M. R. Ry. Ranga Rao, Avl., 40 Medows Street, Fort Bombay.

M. R. Ry. Birmana S. Kirodian, Avl., Co/ M/S Strasess & Co., Ltd. P. O. Box, 444 Fort Bombay.

M. R. Ry. Jarappa P. Avl., Saliyan C/o Bank of Toiwan Ltd, Churchgate Street, Bombay.

M. R. Ry. Permude Dasappa Bangera Avl., C/o Central Bank of India, Ltd., Fort Bombay.

M. R. Ry. B. S. Amin Avl., C/o Messers, Volkart Bros's Import Dept, Bombay.

M. R. Ry. Venkappa Kotian Avl., 9 a Police Court Lane, Fort Bombay.

M. R. Ry. K. A. Kotian Avl., Co/ O. S. K. Taj Building P. O. Box, No. 355 Hornby Road, Fort Bombay.

M. R. Ry. A. Sankappa Avl., Tailor & Out fitter, A. R. Dias & Bros, Esplanade Road, Bombay.

M. R. Ry. M. Ishwar Avl. Photographer Savoy Chambers, 2nd floor, Dalal Street, Fort Bombay.

M. R. Ry. M. Anantha Paradeshi Avl., C/o The Indian Cement Co, Ltd., 24 Bruce Street, Fort Bombay.

Messers. M. P. Sanil & Brothers (of moolky) 1st floor, House No. 209 Bohra Bazar Street, Fort Bombay.

M. R. Ry. Menka Fakira Shetty Avl, (Ulyaragoli) The Sharada Vilas Hindu Dinner Home, 69. Ghoga Street, Fort Bombay.

M. R. Ry. B. Manjunath Avl., Proprietor, City Cycle Co., Mangalore.

M. R. Ry. Munjunath B. Amin Avl., 22 Police Court Lane, Top Floor, Fort Bombay.


(16ನೇ ಪುಟದಿಂದ ಮುಂದುವರಿಸಿದ್ದು)

22. ಡಿ. ದಾಮೋದರ Co/ ಇಂಪೀರಿಯಲ್ ಬೇಂಕ್ ಓಫ್ ಇಂಡಿಯಾ. 23. ಎಚ್. ಹೊನ್ನಯ ಪುತ್ರನ್, ಶ್ರೀಜ್ಞಾನೋದಯ ಮಂದಿರ. 24. ಎನ್. ತಿಮ್ಮಪ್ಪ ಮಲ್ಯ, ಸೀರೇಶ್ವಾಲ್ಯ 25. **ಬಿ. ನರಸಿಂಹ ವಿದ್ಯಾರ್ಥಿ, ಬೊಕ್ಕಪಟ್ಣ.** 26. ಪಿ. ಭೋಜ ಎಂ ಮೆಂಡನ್, ವಿದ್ಯಾರ್ಥಿ ಗಣಪತಿ ಹೈಸ್ಕೂಲ್. 27. ಎ. ಶ್ಯಾಮ ರಾವ್ ಸರಸ್ವತೀ ಭವನ, ಮಂಗಳೂರು.

(ಈ ಕೆಳಗಿನವರು ತಮ್ಮ ಉತ್ತರಗಳನ್ನು ಅತ್ಯಂತ ಚಿತ್ತಾಕರ್ಷವಾಗಿ ಚಿತ್ರಿಸಿರುತ್ತಾರೆ. ಇವರ ಕಲಾಕೌಶಲವನ್ನು ನೋಡಿ ಎಂತಹರೂ ಸಂತೋಷಗೊಳ್ಳಲೇಬೇಕು. ನಮ್ಮ ಕಮಿಟಿಯು ಇವರೆಲ್ಲರಿಗೆ ಬಡವರ ಬಂಧುವಿನ ಹೆಸರಿನಿಂದ 'ಕಲಾಕೌಶಲ'ರು ಎಂಬ ಬಿರುದನ್ನು ಕೊಟ್ಟಿದೆ. ಎರಡು ರೂಪಾಯಿ ಇನಾಮುಗಳು ನಂಬ್ರ (8) ರಘುನಂದನರಿಗೂ, ನಂಬ್ರ (19) ಬಿ. ಲೋಕಯ ಸಾಲಿಯಾನ್ ಇವರಿಗೂ ದೊರೆತಿವೆ.)

1. ಪಿ. ಭೋಜ ಮೆಂಡನ್, ಎಚ್. ಶಾಲೆ, ಮಂಗಳೂರು. 2. ಬಿ. ನರಸಿಂಹ ವಿದ್ಯಾರ್ಥಿ, ಮಂಗಳೂರು. 3. ಎಂ ಡಿ. ಆಲ್ವಾರ್ ಅಯ್ಯಂಗಾರ್, ಮಲ್ಲೇಶ್ವರಂ 4. ಪಿ. ಸಿ. ಸೆಟ್ಟಿ ಜೈನ್, ಪಾಣೆ ಮಂಗಳೂರು. 5. **ಪಿ. ವಾಮನ ವಾಸುದೇವ ನಾಯ್ಕ ಪಾಣೆಮಂಗಳೂರು.** 6. ಎಸ್. ಎಸ್. ರಾವ್, ಪಾಣೆಮಂಗಳೂರು. 7. ಎನ್. ತಿಮ್ಮಪ್ಪಯ್ಯ, ಪಾಣೆಮಂಗಳೂರು. 8. ರಘುನಂದನ. ಮಂಗಳೂರು. 9, ಎ. ರಾಮಪ್ಪ P. L &. Co., Ltd. ಮಂಗಳೂರು 10. ಎಂ. ಬಿ. ಶೆಟ್ಟಿ, ಮುಂಬಾಯಿ. 11. ಶೇಷಪ್ಪ ಜೆ. ಸಿರಿಯಾನ್. 12. ಎಲ್. ಬಿ. ಸಾಲಿಯಾನ್, ಮುಂಬಾಯಿ 13. ಎಚ್. ಎನ್. ಕಾಂಚ್, ಮುಂಬಾಯಿ. ಟಿ. ಚಂದ್ರರಾಜ ಶೆಟ್ಟಿ, ಸಿದ್ಧಕಟ್ಟೆ. 15. ಬಿ. ವೆಂಕಟ ರಾವ್ ಬೋರ್ಡು ಹೈಸ್ಕೂಲ್, ಕಾಸರಗೋಡು, 16. ಎಂ. ಗೋವಿಂದ ಶೆಣೈ, ಸಿಕಂದರಾಬಾದ್. 17. ಸಿ ಕೆ ರಾಮಕೃಷ್ಣಯ್ಯ. ಮಂಗಳೂರು. 18 ಎ. ಅಮ್ಮಣ್ಣ, ಮುಂಬಾಯಿ 19 ಬಿ. ಲೋಕಯ ಸಾಲಿಯಾನ್, ಮುಂಬಾಯಿ.

ಸೋಡ್ತಿ ಎತ್ತಲಾಗಿ ನಂಬ್ರ 3, 5, 7, 12, 27, 44. H. K. ಇವರಿಗೆ ಒಂದೊಂದು ಪುಸ್ತಕವೂ, A, B, C, D, E, F, I, J. ಇವರಿಗೆ ಒಂದೊಂದು ರೂಪಾಯಿಯೂ, Gಗೆ ಒಂದು ಬೆಳ್ಳಿಯ ಪದಕವೂ ಬಂದಿರುತ್ತದೆ. (ಬರುವ ಸಂಚಿಕೆಯ ಒಗಟನ್ನು ಕಾಯಿರಿ)



ಸ್ವಯಂವಾಣಿ

ಒಕ್ಟೋಬರ ತಾ. ೧೭ರಲ್ಲಿ ಮುಂಬಾಯಿ ಕನ್ನಡ ಸಂಗೀತ ಸಭಾ (ಎಮೆಚೂರ್ಸ್) ಇವರು ಬಡವರ ಬಂಧುವಿನ ಪರವಾಗಿ "ಸುಭದ್ರಾ ಹರಣ" ವೆಂಬ ನಾಟಕವನ್ನು ಆಡಿದರೆಂಬ ವಿಷಯವನ್ನು ಈ ಮೊದಲೇ ನಮ್ಮ ವಾಚಕರಿಗೆ ತಿಳಿಸಿರುವೆವಷ್ಟೆ! ಈ ನಾಟಕವು ಬಹು ಯಶಸ್ವಿಯಾಗ ಬೇಕೆಂದು ಮಂಡಳಿ (ಒಳಗಿನ ಭಾವ ಚಿತ್ರವನ್ನು ನೋಡುವುದು.) ಯವರು ಅತ್ಯಂತ ಶ್ರದ್ಧೆಯಿಂದಲೂ, ಬಹು ಮಮತಾ ಭಾವದಿಂದಲೂ ಕಾರ್ಯ ವನ್ನು ಹೆಗಲ ಮೇಲೆ ವಹಿಸಿಕೊಂಡರು. ನಾಟಕದ ಟಿಕೇಟು ಮಾರಾಟದಲ್ಲಿ ಹೆಚ್ಚಿನ ಶ್ರದ್ಧೆ ತೋರಿಸಿ ಕೆಲಸ ಮಾಡಿದವರೆಂದರೆ ಶ್ರೀ. ಮಂಜುನಾಥ ಬಿ, ಅಮೀನರೇ ಮೊದಲಾದ ಇನ್ನಿತರ ಬಾಂಧವರು. ಇವರೆಲ್ಲರಿಗೆ ಬಡ ವರ ಬಂಧುವು ಅತ್ಯಂತ ಋಣಿಯಾಗಿರುತ್ತದೆ. ನಾಟಕದ ವಿಷಯದಲ್ಲಿ ಹೆಚ್ಚಿನ ಉತ್ಸಾಹದಿಂದಲೂ, ಆನಂದದಿಂದಲೂ ಕೆಲಸ ಮಾಡಿದ ಸಂಘದ ಕಾರ್ಯದರ್ಶಿಗಳಾದ ಶ್ರೀ. ಗೋಪಾಲ ನ್ಯಾರ್ಕರೂ, ಬಡವರ ಬಂಧುವಿನ ಹಿತಚಿಂತಕರಾಗಿ ಮೌನದಿಂದ ಅನೇಕ ಸಹಾಯಗಳನಿತ್ತ ಫೋಟೋಗ್ರಾಫರ್ ಶ್ರೀ. ಎಮ್. ಈಶ್ವರನವರೂ, ಬಂಧುವಿನ ಜನ್ಮದಾರಭ್ಯದಿಂದಲೂ ಅದರ ಉನ್ನತಿಗಾಗಿ ಹೆಚ್ಚಿನ ತ್ಯಾಗಬುದ್ಧಿಯಿಂದಲೂ, ಸೌಹಾರ್ದ್ರತೆಯಿಂದಲೂ ಸಹಕರಿಸಿದ ಶ್ರೀ. ಕೆ. ಟಿ. ಕರ್ಕೇರರೂ (ಭಾವ ಚಿತ್ರ ನೋಡುವುದು) ಬಂಧುವಿನ ಕಮಿಟಿಯ ಹೃತ್ಪೂರ್ವಕ ಅಭಿವಂದನೆಗಳಿಗೆ ಪಾತ್ರರಾಗಿರು ತ್ತಾರೆ. ಇನ್ನು, ನಾಟಕದ ದಿನ ಬಂಧುವಿನ ಮೇಲಿನ ಅಗಾಧ ಪ್ರೀತಿ ಯಿಂದ ಸ್ವಪ್ರತಿಷ್ಠೆಯನ್ನು ಮರೆತು, ಸ್ವಯಂಸೇವಕರಾಗಿ ದುಡಿದು, ನಾಟ ಕವನ್ನು ಯಥಾಯೋಗ್ಯವಾಗಿ ನಡೆಸಿದ ಶ್ರೀ. ಎನ್. ಬಿ. ಅಮೀನ್, ಶ್ರೀ. ಎಸ್. ಕೆ. ಮೈಂದನ್, ಶ್ರೀ. ಸದಾರಾಮದಾಸ್, ಶ್ರೀ. ಮಾಧವನ್, ಶ್ರೀ. ಬಿ. ಎಮ್. ಕೋಟ್ಯನ್, ಶ್ರೀ. ಕೆ. ಎಫ್. ಸಾಲಿಯಾನ್, ಶ್ರೀ. ಎಮ್. ಈಶ್ವರ, ಶ್ರೀ. ಎಮ್. ಕುಂದರ್, ಶ್ರೀ. ಈಶ್ವರ, ಶ್ರೀ. ಗೋಪಾಲ್, ಶ್ರೀ. ವೈ. ಬಿ. ಕುಂದರ್, ಶ್ರೀ. ಜಿ. ಕೆ. ಅಮೀನ್, ಶ್ರೀ. ಎಚ್. ಜೆ. ಸಿರಿಯಾನ್, ಶ್ರೀ. ದಾಸು ಶೆಟ್ಟಿ, ಶ್ರೀ. ಸಂಕಪ್ಪ ಇವರೂ ಇನ್ನಿತರರೂ ನಮ್ಮ ಅನಂತಾನಂತ ನಮಸ್ಕಾರಗಳಿಗರ್ಹರಾಗಿ ತ್ತಾರೆ.

ಬಡವರ ಬಂಧುವಿನ ಮೇಲೆ ಮಮತೆಯನ್ನು ತೋರಿಸಿದ ಮಹ ನೀಯರೂ ಸಂಸ್ಥೆಗಳೂ ಬಹಳ. ಮುಂಬಾಯಿಯಲ್ಲಿ ಬಂಧುಭಾವವೂ ಭ್ರಾತೃವಾತ್ಸಲ್ಯವೂ ಇಷ್ಟಿರುವುದನ್ನು ಕಂಡು ಎಂತಹನಿಗೂ ಸಂತೋಷ ವೆನಿಸಲೇಬೇಕು. ಬಂಧುವಿನ ಉಪಸಂಪಾದಕರನ್ನು ಆಮಂತ್ರಿಸಿ ಸತ್ಕರಿಸಿ ದವರೂ ಬಹು ಮಂದಿ. ಅವರಲ್ಲಿ ಕೆಲವರ ಕುರಿತು ಇಲ್ಲಿ ಉಲ್ಲೇಖಿ ಸದಿದ್ದರೆ ಸ್ವಯಂವಾಣಿಯು ಸಂಪೂರ್ತಿಗೊಂಡೀತೆಂದು ಭಾವಿಸಲಾಗು ವುದಿಲ್ಲ. ಕಳೆದ ತಿಂಗಳ ತಾ. ೫ರಲ್ಲಿ ಮುಂಬಾಯಿಯ ಕೆನರಾ ಯಂಗ್ ಫೂಟ್‌ಬೋಲರ್ಸ್ ಕ್ಲಬ್ಬಿನವರು ಶ್ರೀ. ಎಮ್. ಎನ್. ಶೆಟ್ಟಿಯವರ ಅಧ್ಯ ಕ್ಷತೆಯಲ್ಲಿ ಸತ್ಕಾರ ಕೂಟವನ್ನೇರ್ಪಡಿಸಿ ಬಂಧುವಿಗೆ ಕೈಲಾದಷ್ಟು ಪ್ರವ್ಯ ಸಹಾಯವನ್ನೂ ಸಹಾನುಭೂತಿ ದಾನವನ್ನೂ ಮಾಡಿರುವರು. ಕ್ಲಬ್ಬಿನ ಎಲ್ಲಾ ಸದಸ್ಯರನ್ನೂ 'ಬಂಧು'ವಿಗೆ ಪೋಷಕ-ಹಾಗೂ ಚಂದಾದಾರರನ್ನಾಗಿ ಸೇರಿಸುತ್ತೇವೆಂದು ಅವರು ಕೊಟ್ಟ ಅಶ್ವಾಸನೆಯು ಆನಂದದಾಯಕ ವಾಗಿದೆ. ಇನ್ನು ವಿದ್ಯಾದಾಯಿನಿ ಸಭಾ ಇವರು ಶ್ರೀ. ಡಿ. ಎಮ್. ಅಮೀನರ ಅಧ್ಯಕ್ಷತೆಯಲ್ಲೂ, ಬಿಲ್ಲವರ ಎಸೋಸಿಯೇಶನ್ ಇವರು ಶ್ರೀ. ಎ. ಪಿ, ಕಿರೋಡಿಯಾನ್ ಇವರ ಅಧ್ಯಕ್ಷತೆಯಲ್ಲೂ ಸತ್ಕಾರ ಕೂಟ ಗಳನ್ನೇರ್ಪಡಿಸಿ, ನಮ್ಮ ಉಪಸಂಪಾದಕರನ್ನು ಆದರಿಸಿದರು. ಇವರೆಲ್ಲರ ಬಂಧುಪ್ರೇಮವು ಪ್ರಶಂಸನೀಯವೇ ಇದೆ. ಈ ಸಂಘಗಳು ಇನ್ನಿತರ ಅನೇಕಾನೇಕ ಸಂಘಗಳವರಿಗೆ ಆದರ್ಶಪ್ರಾಯರಾಗಿರಲೆಂದು ಹಾರೈಸು ತ್ತೇವೆ.

ಇನ್ನು ಶ್ರೀ. ಎಂ. ಬಿ. ಅಮೀನರ ಔದಾರ್ಯವು ಚಿರಸ್ಮರಣೀಯವಿದೆ. ಶ್ರೀ. ನರ್ಸಪ್ಪನವರು ಮುಂಬಾಯಿಯಲ್ಲಿದ್ದ ಎರಡು ತಿಂಗಳುಗಳಲ್ಲೂ ಅವರನ್ನು ಯಾವ ಅನಾನುಕೂಲತೆಗಳಿಗೂ ಒಳಗಾಗ ಬಿಡದೆ, ಅತ್ಯಂತ ಸಂತೋಷದಿಂದ ಅವರನ್ನು ಸದಾ ನಡೆಸಿಕೊಂಡುದಕ್ಕಾಗಿ ಕಮಿಟಿಯು ಅವರನ್ನು ವಂದಿಸಿದಷ್ಟು ಕಡಿಮೆಯೆಂದೆ ಭಾಸವಾಗುವುದು. ಶ್ರೀ. ನರ್ಸಪ್ಪನವರೊಡನೆ ಸಹಭಾಗಿಗಳಾಗಿ ನರ್ತಿಸಿದ ಶ್ರೀ. ಬಿ. ಎಂ, ಕೋಟ್ಯನ್, ತೊದಲ್ನುಡಿ ಸಂಪಾದಕರಾದ ಶ್ರೀ. ಎಮ್. ನಾರಾಯಣ ರಾವ್, ಶ್ರೀ. ಸದಾರಾಮ್ ದಾಸ್, ಶ್ರೀ. ಎಮ್. ಈಶ್ವರ, ಶ್ರೀ. ಸುಂದರ ಅಮೀನ್ ಮತ್ತು ಮಿತ್ರವರ್ಯ ಶ್ರೀ. ಗುಡ್ಡೆಮನೆ ಇವರಿಗೂ ಅನಂತ ವಂದನೆಗಳು.

ಔದಾರ್ಯ—ಶ್ರೀ. ಕೆ. ಟಿ. ದೇವುಜಿಯವರು ಬಂಧುವಿನ ಹೆಸರಲ್ಲಿ ದೊರೆತ ಸೋಡ್ತಿ ಇನಾಮು ರೂಪ್ಯಾ ೧೫ರಲ್ಲಿ ೭॥ ಯನ್ನು ಬಂಧುವಿಗೆ ದಾನ ಮಾಡಿರುವರು. ಅವರ ಔದಾರ್ಯವು ಸ್ಮರಣೀಯವಿದೆ.



ಕರ್ನಾಟಕ ಸಂಗೀತ ಸಭಾ (ಎಮೆಚೂರ್ಸ್) ಮುಂಬಾಯಿ.



ಶ್ರೀ. ಕೆ. ಟಿ. ಕರ್ಕೇರರು

ಶ್ರೀ ಶಿವಭಕ್ತಿ ಯೋಗ ಸಂಘವು ರಾವ್ ಬಹದ್ದೂರ್ ಎಸ್. ಎನ್. ಸುವರ್ಣರವರ ಕಾರ್ಯದರ್ಶಿತ್ವಕ್ಕೊಳಗಾದ ನಂತರ ಹೊಸ ಹುರುಪಿನಿಂದ ಮುಂಪಡಿಯಿಡುತ್ತಿದೆ. ಪ್ರತಿ ಮಾಸಾಂತ್ಯದಲ್ಲಿ ಸಮಾಜ ಕೂಟ (Social Gathering) ನಡೆಯುತ್ತಿದೆ. ... ವಿದ್ಯಾವಂತ ಮಹಿಳೆಯರನ್ನು ಸಂಘಕ್ಕೆ ಬರಮಾಡುತ್ತಿದ್ದಾರೆ. ನವಂಬರ ೧೯ನೇ ದಿನ ನೇಶನಲ್ ಗರ್ಲ್ಸ್ ಸ್ಕೂಲಿನ ಹೆಡ್ ಮಿಸ್ಟ್ರೆಸರಾದ ಶ್ರೀಮತಿ ರಾಧಾಬಾಯಿಯವರು ಮಹಿಳೋತ್ಸಾಹದ ಕುರಿತು ಹೃದಯಂಗಮವಾಗಿ ಭಾಷಣಮಾಡಿದರು. ಕಳೆದ ೨೭ನೇ ದಿನ ಸಂಜೆ ಶ್ರೀ. ಮ. ಜಾರವರ ಮೆಜಿಕ್ ಪ್ರದರ್ಶನವಿದ್ದಿತು. ಸಂಘದ ತರುಣರು ತಂತಮ್ಮ ಶಕ್ತಿ ಸಾಮರ್ಥ್ಯ ಅಭ್ಯಾಸಗಳಿಗುಣವಾದ ಪ್ರದರ್ಶನಗಳನ್ನು ಮಾಡಿ ಸಂಘದ ಕಾರ್ಯಕಲಾಪಗಳನ್ನು ಜಯಶೀಲವನ್ನಾಗಿ ಮಾಡುವರೆಂದು ಹಾರೈಸಲಾಗಿದೆ. ಬಡ ಕುಟುಂಬಗಳ ಭಾವೀ ಸುಖ ದೃಷ್ಟಿಯಿಂದ ಒಂದು ಮರಣ ಫಂಡನ್ನೇರ್ಪಡಿಸಬೇಕೆಂದು ಶ್ರೀ. ಸುವರ್ಣರು ಯೋಜಿಸಿದ್ದು, ಆ ಬಗೆ ಸಾಧನೆಗೆ ತೊಡಗಿರುವುದು ಶ್ಲಾಘನೀಯವೆ.

ಹಣ ಕೊಡುವವರು ಸಿಂಧುವಾದ ರಶೀದಿಯನ್ನು ಪಡೆಯಲೇ ಬೇಕು.

ಮೆನೇಜರ್ ಬಿ. ಬ.

ಮೈಸೂರು ನರ್ಸಣ್ಣನ ಬೊಂಬ್ಯಾ ಸವಾರಿ.

ಬೈ: ಮಿ। ಮೈಸೂರ್ ನರ್ಸಣ್ಣ.

ಹಲ್ಲೋ ಹಲ್ಲೋ ಗುಡ್ ನೈಟ್, ಸ್ವಾಬ್ಜಿ! ಸೂಂವ್ಸೆ? ಏನ್ರಿ ರಾಯ್ರೆ ನಮಸ್ಕಾರ ದೇವ್ರೆ. ಸಂಪಾದುಕ್ರು ಬೊಂಬ್ಯಾ ಮೇಲೆ ಹೋಗ್ತಾರೆಂದು ನಾನೂ ಅವ್ರೊಡ್ನೆ ಹೊರ್ಟ್ಬಿಟ್ಟೆ. ಬೊಂಬ್ಯಾ ಮದ್ರಾಸು ದೇಕೋ—ಡಿಲ್ಲೀ ಮೈಸೂರು ದೇಕೋ-ಬೆಂಗ್ಳೂರು ಲಂಡಾನು ದೇಕೋ—ಹೆಂಗ್ಲೆಯರ ಮೋಜು ದೇಕೋ-ಎಂದು ಮಂಗ್ಳೂರಲ್ಲೊಬ್ಬ ಸದಾ ಹೇಳ್ತಾ ಬೊಂಬ್ಯಾ ನಗ್ರುದ ಚಿತ್ರ ತೋರ್ಸ್ತಿದ್ದ. ಅಂದಿನಿಂದ್ಲೂ ಬೊಂಬ್ಯಾ ನೋಡ್ಬೆ ಆಶೆ ನನ್ಗೆ. ಸಂಪಾದಕ್ರ ದಯೆಯಿಂದ ಬೊಂಬ್ಯಾ ನೋಡ್ವ ಪುಣ್ಯವೂ ದೊರೆತಂತ್ಯಾತು. ಬೊಂಬ್ಯಾ ನೋಡ್ದವ್ರು ಮನ್ಸರಲ್ಲ ಸ್ವಾಮಿ. ಮನ್ಸ ರೆಲ್ರೂ ಬೊಂಬ್ಯಾ ನೋಡ್ಲೇ ಬೇಕು. ಆದ್ರೆ ಒಂದ್ಮಾತ್ರ ರಿಮೆಂಬರಿರ್ಲಿ ಸ್ವಾಮಿ. ಅದ್ಯಾವ್ದೆಸ್ತೀರಾ? ಅದು ಜಾತೀ ವಿಷಯ ಸ್ವಾಮಿ. ನಾನು ಕೂಡಾ ಪ್ಯೂರು ಬ್ರಾಮ್ನು. ಆದ್ರೆ ವಾಟುಡೂ. ಇಲ್ಗೆ ಬಂದ್ಮೇಲೆ ಏನ್ಯಾವ್ದೂ ನಡ್ಯೋಕಿಲ್ಲ, ಆದ್ರೆ ನಾನ್ಮಾತ್ರ ಜಾತ್ಗೇನು ತೊಂದ್ರೆ ಪಡ್ಸಿ ಕೊಂಡಿಲ್ಲ, ಬೊಂಬ್ಯಾಗೆ ಬಂದಿಳೀವಾಗ್ಲೆ ನನ್ಗೇನೋ ಸ್ವಲ್ಪ ಹೆಡ್ ತಿರ್ಗೋಕೆ ಬಿಗಿನ್ ಆಗಿದೆ. ಆದ್ರಿಂದ ನಾನು ಬೊಂಬ್ಯಾಗೆ ಇಳ್ದಪ್ಲೆ ಬಾತ್ ಕೀತ್ ಮಾಡ್ಕೊಂಡು ಬೆಡ್ಡು ಕಿಟ್ಟು ಹಾಸ್ಕೊಂಡು ಗಡದ್ದಿನಲ್ಲಿ ಮಲ್ಕೊಂಡೆ, ಸಂಜ್ಗೆ ಎದ್ದೊಡ್ನೆ ಸಂಪಾದಕ್ರನ್ನು ಯಾರೋ ಕರ್ದು ಕೊಂಡು ಹೊರ್ಗೆ ಹೋದ್ರೆಂದು ಬಿಡಾರ್ದವ್ರು ನನ್ಗೆ ಸೂಚ್ನೆ ಕೊಟ್ರು, ನನ್ಗೂ ಸ್ವಲ್ಪ ತಿರ್ಗಾಡಿ ಬರ್ಬೇಕೆಂದು ಮನ್ಸಾಯ್ತು, ಮೆಲ್ಗೆ ನಾನಿದ್ದ ಮಾಳ್ಗೆಯಿಂದ ಕೆಳಗಿಳ್ದೆ. ನಾವು ಬೀಡು ಬಿಟ್ಟಿದ್ದು—ಟೋಪ್ ಫ್ಲೋರಲ್ಲಿ ಕ್ಷಮ್ಸಬೇಕ್ಸಾಮಿ, ನಾನು ಬೊಂಬ್ಯಾಗೆ ಬಂದ್ಮೇಲೆ ಇಂಗೀಷ್ ಉಚ್ಛಾರ್ನೇ ಹೆಚ್ಚಾಗಿ ಬಾಯಿಂದ ಹೊರ್ಟ್ಬಿಡ್ತೆ, ಈಗೀಗೆ ನನ್ಗೆ ಮಧ್ಯ ಮಧ್ಯ ದಲ್ಲಿ ಇಂಗ್ಲಿಷ್ ವರ್ಡ್ಸ್‌ಗಳ್ನು ಸೇರ್ಸದಿದ್ರೆ ಮಾತಾಡ್ವಾಗ ಏನೂ ಬಲಾ ಆಗೋದಿಲ್ಲ: ಆ ವಿಷ್ಯಾದಲ್ಲಿ ನನ್ಮೇಲೆ ಏನೂ ಬೇಸರ್ಸ ಬೇಡಿ, ಸರಿ ಅಲ್ಲಿಂದ ಕೆಳ್ಗಿಳ್ದನ್ನೆ ಸ್ಟ್ರೈಟ್ ಒಂದು ಮಾರ್ಗ ಹಿಡ್ದು ಹೋದೆ, ಸ್ವಲ್ಪ ಮುಂದೋಗಿ ಹಿಂದೆ ನೋಡ್ತೇನ್ಸಾಮಿ ನಾನ್ಬಂದ ರೋಡ್ ನನ್ಗೆ ಕಾಣೊ ದಿಲ್ಲ, ಇದೇನು ಕಿತಾಪತಿಯಾಯ್ತಪ್ಪ ಅಂದ್ಕೊಂಡು ಹಾಗೆ ಹಿಂದ್ಬಂದೆ, ಅಲ್ಲಿ ನೋಡ್ತೇನೆ ನಾನು ಪಾಸ್ ಆದ ದಾರಿ ಅದು ಅಲ್ಲೇ ಅಲ್ಲ. ಏನು ಮಾಯವಪ್ಪಾ ಇದು, ಐದೇ ಮಿನಿಟೊಳ್ಗೆ ಇದೇನು ಹೀಗ್ಯಾತು ಎಂದ್ಕನ್ಸಿ ಕಡ್ಗೆ ಎದೆ ಗಟ್ಟಿ ಮಾಡ್ಕೊಂಡು ಇನ್ನೊಂದು ಮಾರ್ಗ ತಿರ್ಗಿ ಬಿಟ್ಟೆ. ಸೈ ಅಲ್ಲಿ ಹೋಗಿ ನೋಡ್ತೇನೆ. ಒಂದು ಎರ್ಡು ಐದು ಹತ್ತು ಇಪ್ಪತ್ತು ಮತ್ತೂ ಇನ್ನು ಎಷ್ಟೆಷ್ಟೊ ರೋಡ್ಗಳು. ಇನ್ನೆಲ್ಗೆ ಟರ್ನ್ ಆಗೋದು ವಾಟುಡು ಐಮ್ ಆ್ಯ? ವ್ಹೊಟ್ಯೆ ಹಂಬಗ್ ಟೌನ್ ದಿಸೀಸ್ ಡೇಂ ಎಂದು ಕೋಪ್ದಿಂದ ನೆಲಕ್ಕೆ ಒಂದು ತುಳ್ದು ಬಿಟ್ಟೆ. ನನ್ನ ಹಾಗೆ ನಿಮ್ಗೂ ಆಗಿದ್ರೆ ನೀವೂ ಹಾಗೆ ಮಾಡ್ತಿದ್ರಿ, ಕಡ್ಗೆ ಅಲ್ಲಿದ್ದ ಒಬ್ಬ ಅಸಾಮಿಯೊಡ್ನೆ ನಮ್ಮ ಬಿಡಾರ್ದ ಎಡ್ರೆಸ್ಸು ಹೇಳಿ ಅಲ್ಗೆ ಎಲ್ಲಿಂದ ಹೋಗ್ಬೇಕೆಂದು ಕೇಳ್ದೆ ಅವ್ನು: "ಅಮ್ಕು ಮಾಲೂಮ್ ನಹಿ" ಅಂದ್ಬಿಟ್ಟ, "ನಾನು ಅಮ್ಕು ಮಾಲ್ಮು ನಹಿ" ನಿನ್ನಪ್ಪ. ನಾನ್ಯಾಕೋ? ಎಂದ್ಬಿಟ್ಟು ಸ್ವಲ್ಪ ಮುಂದರ್ಸಿದೆ. ಹೀಗೆ ಮುಂದೆ ಹೋಗ್ತಿರ್ವಾಗ ಮುಗ್ಗಿಲ ಮಾಳ್ಗೆ ಕಿಟ್ಕಿಗಳಿಂದ ರಂಗುರಂಗಿನ ಮುಖಗಳು ಕಂಡು ಬಂದ್ವು. ಇದೇನು ವೇಷಾ ಅಂತ ನಾನು ಅಲ್ಲೇ ಸ್ವಲ್ಪ ನಿಂತೆ. ಆಗ ಒಂದು ಕಿಟ್ಕಿಯಿಂದ ಒಂದು ಹೆಣ್ಣು ಕೈ ಹೊರ್ಬಂದು ನನ್ನನ್ನು ಕರೆಯಿತು. ನನ್ಗೆ ಪಕ್ನೆ ಹೊಳೈತು—ಇದು ಹಸ್ಸಿಹೊಡ್ತಕ್ಕೆ ಸಿಕ್ಕಿದ ಬಡ ಜೀವವೆಂದು—ಪುರ್ಷ ಪ್ರಾಣಿಯಿಂದ ಹಾಳು ಮಾಡಲ್ಪಟ್ಟ ಬೆಂದ ಒಡ ಲೆಂದು. ಅಷ್ಟು ಕೈಸನ್ನೆಯಿಂದ ನನ್ಗೆ ಮೋಜು ಕಾಣ್ಲಿಲ್ಲ. ಅದ್ರ ಬದ್ಲಿಗೆ ನನ್ ಹೃದಯ ಬಹಳ ನೊಂದು ಕೊಂಡಿತು. ಅಯ್ಯೋ ನನ್ತಾಯಿ ನೀನು ಇನ್ನೊಂದು ಜನ್ಮದಲ್ಲಾದ್ರೂ ನಿನ್ನ ಈ ದುರ್ಗತ್ಗೆ ಕಾರ್ಣರಾದ ದುಷ್ಟ ಪುರ್ಷ್ರಿಗೆ ವೈರಿಯಾಗಿ ಹುಟ್ಟಿ ಅವರ್ನ ನಾಶ ಪಡ್ಸು ಎಂದು ಅಂತ ಕರ್ಣಪೂರ್ವಕ ಆಶೀರ್ವಾದ ಕೊಟ್ಟು



ಮುಂದ್ನಡ್ದೆ. ಅಷ್ಟ್ರಲ್ಲಿ ಒಂದು ಮೈದಾನ್ ಸ್ಥಳಾಕ್ಕೆ ಬಂದೆ ದೇವ್ರೆ. ಅಲ್ಲಿ ನೋಡ್ತೇನೇನನ್ನು? ಅಯ್ಯೋ ಕನ್ನಡಿಗ್ರ ದುರ್ಗತ್ಯೇ! ಕನ್ನಡ ನಾಡನ್ನು ಬಿಟ್ಟು ಇಷ್ಟೊಂದು ದೂರದಿರ್ವ ಬೊಂಬ್ಯಾ ನಗ್ರಕ್ಕೆ ಬಂದೂ ಇಲ್ಯೂ ನಮ್ಮ ಹುಟ್ಟು-ಗುಣವನ್ನು ಬಿಡಲೊಲ್ಲರೀ ಕನ್ನಡಿಗ್ರು! "ಆಟಿನ್‌ನಲ್ಲಿ ಎಂಟಾಣೆ-ಡೈಮಂಡ್ ಒಳ್ಗೆ-ಕಿಲವರ್‌ನಲ್ಲಿ ಒಂದು ರೂಪ್ಯಾ" ಹೀಗೆಂದು ಹೇಳ್ತಾ ಜುಗಾರಾಡುತ್ತಾರೆ. ಇವರನ್ನು ಕಂಡು ಗುಜ್ರಾತ್ಗಳೂ ಮಾರಾ ಟ್ಗಳೂ "ಏ ಕೊಂಗಾಟ್ಗಾ ಲೋಕ್ ಹೈ" ಎಂದು ಕನ್ನಡಿಗ್ರ ಮುಖಕ್ಕೆ ಥೂ ಕರ್ಸುತ್ತಾರೆ. ಇಷ್ಟೆಲ್ಲಾ ತಿರುಗ್ವಾಗ ರಾತ್ಯಾಗ್ತಾ ಬಂತ್ಸಾಮಿ. ಇನ್ನೆಲ್ಲಿ ಹೋಗೋದ್ದೇವ್ರೆ ಎಂದು ಕಡ್ಗೆ ಬೇರೆ ಉಪಾಯವಿಲ್ದೆ ಮೈದಾ ನ್ದೊಳ್ಗೊಂದು ಸೀಟಿತ್ತು. ಅದ್ರಲ್ಲಿ ತೆಪ್ಪನೆ ಮಲ್ಗೊಂಡೆ. ಆಗ ಬಂದ್ನೊಬ್ಬ ಪಟಾನ್‌ವಾಲ. ಬಂದನ್ನೆ "ತೂಂ ಕೋನ್ ಹೈ" ಎಂದ ನನ್ಗೆ ಅವನ ಲೇಂಗ್‌ವೇಜ್ ಬರೋದಿಲ್ಲ. ಅವ್ನು ನನ್ಗೇನೋ ಬೈದಿ ರುದೆಂದು ನೆನ್ಸಿ ನಾನು ಹೇಳ್ದೆ "ತುಂ ಕೋನ್" ನಾನ್ಯಾಕೋ—ನಿನ್ ಮನೆಯವರಾಗ್ಲಿ ನಾನು ಮೈನಾ ಎಂದೆ. "ಕ್ಯಾ ಸಾಲಾ ಬದ್ಮಾಷ್" ಜಾವ್ ಇದರ್ಸೆ" ಎಂದು ಅವ್ನು ಹೇಳ್ದ, ಕೂಡ್ಲೆ ನಾನು "ಇಲ್ಲ ಮಹ ರಾಯ ಸಾಲ ಕೊಡ್ಲಿಕ್ಕೆ ನನ್ನೊಡ್ನೆ ಕಾಸಿಲ್ಲ ನಾನು ಸಾಲ ಕೊಡುವ್ದೂ ಬೇಡ ನೀನು ಬಾದಾಮಿ ಕೊಡ್ವುದೂ ಬೇಡ" ಎಂದ್ಬಿಟ್ಟೆ, ಅದ್ಕವ್ನಿಗೆ ರೇಗ್ತು ಸಾಮಿ. ಒಂದೇಟು ಕೊಟ್ಬಿಟ್ಟು "ಜಾವ್ ಬೇಕೂಫ್ ಏ ಗವರ್ನ್‌ ಮೆಂಟ್ ಮೈದಾನ್ ಹೈ ಇದರ್ ರಾತ್ಕೆ ರಕೋಂಕ್ ಹುಕುಂ ನಹಿ" ಎಂದು ದೂಡ್ಬಿಟ್ಟ, ಇದೇನ್ರಿ ಬೊಂಬ್ಯಾ ಒಳ್ಗೆ ನೆಮ್ಮದಿಯಿಂದ ಒಂದು ಕಡೇಲಿ ಮಲಗೋ ಎಂದ್ರೆ ಕೂಡಾ ಬಿಡೋದಿಲ್ಲ, ನಾನ್ಯಾಕಪ್ಪಾ ಒಬ್ಬಂಟಿ ಗ್ನಾಗಿ ಹೊರ್ಟು ಬಿಟ್ಟೇ ಎಂದ್ಕೊಂಡು ಅಲ್ಲಿಂದ ಮೇಲ್ಗೆ ಎದ್ಕೊಂಡು ಒಂದು ಅಂಗ್ಡಿ ಜಗ್ಲಿ ಮೇಲೆ ಮಲ್ಕೊಂಡೆ. ಮೋರ್ನಿಂಗ್ ಎದ್ದು ನೋಡ್ದೆ. ಸ್ವಾಮಿ ನನ್ನಯ್ಯಲ್ಲಿರೋದೆಂದ್ರೆ ಒಂತುಂಡು ಲಂಗೋಟಿ ಮಾತ್ರ. ಫೋರ್ಟುನೇಟ್ಲಿ ಮಾನ ಮರೆಸೋದಕ್ಕಷ್ಟು ಬಿಟ್ಟು ಹೋಗಿದ್ರು. ಅಷ್ಟೇ ದೊಡ್ಡ ಉಪ್ಕಾರ ಬೊಂಬಾಯಿ ಕಳ್ರದ್ದು. ನಜ್ಜೀವ ಬದ್ಕಿದ್ದೇ ನನ್ ಹೆಂಡ್ತಿ ಮಕ್ಳ ಪುಣ್ಯ. ಅಷ್ಟೊತ್ಗೆ ನಮ್ಸಂಪಾದಕ್ರು ನನ್ನನ್ನೇ ಹುಡ್ಕೊಂಡು ನನ್ಬಳ್ಗೆ ಬಂದ್ರು. ಆ ತನ್ಕ ಆದ ಎಲ್ಲಾ ಚರಿತೇನ್ನು ಅವರ್ಗೆ ಹೇಳ್ದೆ. ಅವ್ರು ಹೇಳ್ದ್ರು "ಮುಂದ್ಕೆ ಬಾಳಾ ಜಾಗ್ರುತೆ ನೀನೊಬ್ನೇ ಎಲ್ಲೂ ಹೋಗ್ಬೇಡ." ಗುಡ್ ನೈಟ್.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ
ಎಂ. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಇತ್ತ ನೋಡುವುದು.

ಗುಣ ಬಾರದಿದ್ದರೆ ಹಣ ಪರತ

ಪುರುಷತ್ವ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣದಿಂದ ಸ್ವಪ್ನದಲ್ಲಿ ಹಾಗೂ ಮೂತ್ರದ್ವಾರಾ ಹೋಗುವ ವೀರ್ಯವು ಕೂಡಲೇ ಬಂದಾಗುವುದು, ಗರಮಿ ಪರಮಾದಿಂದಾದ ಉಷ್ಣತಾ, ಮುಷ್ಟಿಮೈಥುನದಿಂದಲೂ, ಅತಿರತಿಯಿಂದಲೂ ಧಾತು ನೀರಾಗುವಿಕೆ, ಧಾತು ಕ್ಷೀಣತೆ, ಅಶಕ್ತತೆ ಶೀಘ್ರದ ಧಾತುಪತನ ಇವೆಲ್ಲ ರೋಗಗಳು ನಾಶವಾಗಿ ರಕ್ತಶುದ್ಧಿಯಾಗುತ್ತದೆ. ಹಸಿವೆ, ಸಾಮರ್ಥ್ಯಗಳು ಹೆಚ್ಚಾಗಿ ತೂಕ ಬೆಳೆಯುತ್ತದೆ. ಮತ್ತು ವೀರ್ಯವು ಗಟ್ಟಿಯಾಗಿ ಗರ್ಭಧಾರಣಕ್ಕೆ ಯೋಗ್ಯವಾಗುತ್ತದೆ. ಮುಖ್ಯ ಸರ್ಟಿಫಿಕೇಟ, ಮೆ. ರಾ. ಎಸ್. ಅಗಡೆ ಮ್ಯಾಜಿಸ್ಟ್ರೇಟ್ ಸಾತಾರಾ—ಈ ಚೂರ್ಣದಿಂದ ನನಗೆ ಆಶ್ಚರ್ಯಕಾರಕ ಗುಣವಾಯಿತು. ಅನೇಕ ತರದ ಅವಿಚಾರದಿಂದ ದುಷ್ಟವಾದ ವೀರ್ಯ ಹಾಗೂ ರಕ್ತವು ಇದರಿಂದ ಸತೇಜವಾಗಿ ಪ್ರಕೃತಿಯು ನೆಟ್ಟಗಾಗದೆ ಇರದು. ೨೧ ದಿವಸ ಸಾಕಾಗುವಷ್ಟು ಡಬ್ಬಿಗೆ ಕಿಮ್ಮತ್ತು ೫ ರೂ. ಟ. ಖ. ೦-೮-೦.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರರಿಗೆ ಶತ್ರುವಾಗಿರುವುದು, ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ. ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು, ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ್ಸ್ ಮೆ. ರಾ. ಎ. ಎಮ್. ಇನಸ್ಪೆಕ್ಟರ ಬೆಳಗಾಂವ—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳೆ ಶರಗ ಇಲ್ಲದಂತಾದವು. ೨೧ ದಿವಸದ ಡಬ್ಬಿಯು ಕಿಮ್ಮತ್ತು ರೂ. ೩. ಟ. ಖ. ೦-೮-೦.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದ್ದು ಕೂಡಲೆಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ 'ಡಾಕ್ಟರ್ ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಮೂ। ಕೇಳಿವಾನಾಹಿಮಜಿ. ರಾಣೀ'' ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ೦-೮-೦.

ವಿಳಾಸ—

ಸಂಜೀವಿನೀ ಔಷಧಾಲಯ, ಮು॥ ಪೋ॥ ಮಿರಜ,


S. M. C.

The Mangalore Harmonium Works,

HAMPANKATTA, MANGALORE.

ದಿ ಮಂಗಳೂರು ಹಾರ್ಮೋನಿಯಂ ವರ್ಕ್ಸ್,


ಹಂಪನಕಟ್ಟೆ, ಮಂಗಳೂರು.



ನಮ್ಮಲ್ಲಿ ಎಲ್ಲಾ ತೆರನಾದ ಉತ್ತಮ ಹಾರ್ಮೋನಿಯಮ್‌ಗಳೂ, ಡಬ್ಬಲ್ ರೀಡ್ಸ್, ಸಿಂಗಲ್ ರೀಡ್ಸ್, ಕಾಲಿನ ಪೆಟ್ಟಿಗೆ, ಕೈಪೆಟ್ಟಿಗೆ- ಮೊದಲಾದ ಅನೇಕ ನಮೂನೆಗಳಲ್ಲಿ ಸುಲಭ ಕರೀದಿಯಲ್ಲಿ ಸಿಗುವ್ವವು ನಮ್ಮಲ್ಲಿಯೇ ಹೊಸತಾಗಿ ತಯಾರಿಸಿ ಸುಲಭ ಬೆಲೆಯಲ್ಲಿ ದೊರೆಯುವ್ವವು. ಅಲ್ಲದೆ ಎಲ್ಲಾ ತರದ ಹಾರ್ಮೋನಿಯಮ್ ಮತ್ತು ರಿಪೇರಿಯು ಬಹಳ ನಾಜೂಕಾಗಿ ಮಾಡಲ್ಪಡುವುದು.

ಹೆಚ್ಚಿನ ಮಾಹಿತಿ—ಒಮ್ಮೆ ಬಂದಲ್ಲಿ ಅಥವಾ ಬರಕೊಂಡಲ್ಲಿ ತಿಳಿಯುವುದು.

A. GANAPATHY, PROPRIETOR.



ಬಿ ದೇವದಾಸ್.

(ಮೆಡಲಿಸ್ಟ್)

ಹಾರ್ಮೋನಿಯಮ್ ಮೋಕರ್, ಹಂಪನ್‌ಕಟ್ಟೆ,

ಮಂಗಳೂರು.



ಸಂಗೀತ ಕಲಾಭಿಮಾನಿಗಳೇ,

ಇತರ ಕಂಪೆನಿಗಳಲ್ಲಿ ಸಿದ್ಧವಾದ ಹೊಸ ಹೊಸ ನಮೂನೆಯ ಹಾರ್ಮೋನಿಯಂ ಪೆಟ್ಟಿಗಗೆಳು ನಮ್ಮಲ್ಲಿ ನಾಜೂಕಾಗಿ, ಗಿರಾಕಿಗಿಳಿಗೆ ಮೆಚ್ಚಿಕೆಯಾಗುವಂತೆ ತಯಾರಿಸಲ್ಪಟ್ಟು, ಮಾರಾಟಕ್ಕೆ ಸಿದ್ಧವಿವೆ. ಮಾತ್ರವಲ್ಲದೆ ಎಲ್ಲಾ ತರದ ಸಂಗೀತ ಸಾಮಗ್ರಿಗಳು ಕೂಡಾ ಚಲೋದಾಗಿ ದುರುಸ್ತಿ ಮಾಡಲ್ಪಡುವುವು. ನಮ್ಮ ಉತ್ತಮ ತರದ ಕೆಲಸದ ಪ್ರಾಶಸ್ತಿಗಾಗಿ ಅನೇಕಾನೇಕರು ನಮಗೆ ಭಂಗಾರದ ಪದಕಗಳನ್ನು ಬಹುಮಾನಿಸಿರುವರು. ನೀವು ಒಮ್ಮೆ ಪರೀಕ್ಷಿಸಿದ್ದಲ್ಲಿ ಖಾತ್ರಿಯಾಗುವ್ವದು.

ಹೆಚ್ಚಿನ ಮಾಹಿತಿಗೆ ಇವರಲ್ಲಿ ಪತ್ರವ್ಯವಹಾರ ಮಾಡುವುದು.

ಬಿ. ದೇವದಾಸ್, ಹಂಪನಕಟ್ಟೆ, ಮಂಗಳೂರು.

"BADAVARA BANDHU"

PATRONS

LIFE DONORS.

M. R. Ry. K. N. Guruswamy Avl., Excise Contractor to the Government of Mysore, Bangalore	Rs.	100—0—0
M. R. Ry. B. G. Mangalorekar, Avl., Partner Messrs. Paragon Products Co., Amrith Bldg., Ballard Estate, Bombay	,,	100—0—0
A Well-wisher	,,	50—0—0
M. R. Ry. Rao Bahadur N. N. Suvarna Avl., Advocate Mangalore	,,	50—0—0

PATRONS.

M. R. Ry. D. Manjaya Heggade Avl., Manager, Temple Dharmastala, S. Kanara	,,	10—0—0
M. R. Ry. K. Raghuchandra Ballal Avl., Land-Lord, Mangalore	,,	10—0—0
'A Bandhu'	,,	10—0—0
M R.Ry. K. T. Kerkera Avl., Thomas Street, Colaba, Bombay.	,,	10—0—0
M. R.Ry. M. Narayana, Avl., Editor, 'Thodalnudi' 140 Bohra Bazaar Street, Fort Bombay.		10—0—0
Srimathi Avantika Bai K. Kudalkar. 281 Bazar Gate St. Top Floor, Fort Bombay		10-0-0
Dr. M. Rama Rao. L. C. P. S. Fort Bombay		10—0—0

MEMBERS FOR FIVE RUPEES' SCHEME.

M. R. Ry. M. N. Prabhu Avl., Government Pleader and Public Prosecutor, Mangalore

M. R. Ry. H. Narsappa Avl., Assistant Income-Tax Officer, Mangalore.

M. R. Ry. M. A. Talwar Avl., B. A. B. L., M. R. A. S. Vakil, Mangalore.

M. R. Ry. S. G. Shastry Avl., B. A., Msc. (Lond F. C. S. F. M. U., Industrial Chemist and Chemical Engineer, Government Soap Factory Bangalore.

Mrs. N. Sharada Bai, wife of M. R Ry. T Narsappa Avl., Hon. Bench Magistrate Mangalore.

M. R. Ry. H. Coragappa Avl., Sahukar and Hon. Bench Magistrate, Mangalore.

A Hon. Bench Magistrate.

Messrs. Kochikar Bros., Agents Bombay Life Assurance Co., Ltd., Udipi.

M. R. Ry. J. A Puthran Avl., M. C., B. Manager Asian Assurance Co., Ltd., Mangalore.

M. R. Ry. M. K. Vaidyer Avl., Mangalore,

M. R. Ry. Guthedar B. Babu, Avl., Mangalore.

M. R. Ry. S. Narayan Shastry Avl., Manager Cooverjee Ardeshier & Co., Mangalore.

M. R. Ry. M. V. Shastry Avl., Ayurveda Bhusana, Bheshajashram, Mangalore.

Dr. K. Gopalachar, Senior Physician Sri Rama Krishna Dharma Vaidyashram, Mangalore.

M. R. Ry. A. M. Naganna Hegde, M. C. Prop., Satyanarayan Tile Works, Mangalore.

M. R. Ry. V. N. Bolar Avl., Messrs. Kochikar Bros., Udipi.

M. R. Ry. Abbahithilu Ishwar Poojary Avl., Land Lord and Sowcar Boloor, Mangalore.

M. R. Ry. Contractor K. Guddappa Avl., Kodialbail Mangalore.

M. R. Ry. M. Venkappaya Avl., Merchant Bendoor, Mangalore.

M. R. Ry. K. Devappa Avl., Soda Factory, Kodialbail, Mangalore.

M. R. Ry. M. Vasudev Nayak Avl., Messrs. Manel Krishna Nayak & Sons Mangalore.

Dr. I. K. P. Sharma. Ayurveda Visharada and Bhushana, Medical Officer-in-charge of Municipal Ayurvedic Dispensary. Mangalore.

Mr. K. Raffuddin Ahmad Saheb, District Manager. The Great Eastern Industrial & All India Insurance Co., Ltd., River View, Mangalore.

M. R. Ry. B. Narsappa Kotian Avl., C/o Poly Clinic 20 New Queens' Road, Bombay.

M. R. Ry. B. M. Kotian Avl., P. B. 827 Bombay.

OUR PATRONS.

Continued.

Mr. John Steven D'Souza,
Manager, Baker Shop, Kudroli,
Mangalore.

M. R. Ry. Laxman Govind Pal Avl.,
Proprietor, Banian Mart,
Market Road, Mangalore.

,, S. Madhava Laxumana Naik Avl.,
Merchant Bunder, Mangalore.

,, E. D. Anchan Avl,
Proprietor Zenith Cap Mart,
Market Road, Mangalore.

,, Potail Devappa Malli Avl.,
Potail of Kunjathabail S. K.

,, K. Venkoji Rao Avl.,
Gollarkeri, Mangalore.

,, Annappa B. Shettigara, Avl. Agent,
Hindustan Co-operative Insurance,
Society Ltd. Commissariat Building,
Fort Bombay.

,, A. B. Kukian Avl.,
c/o National City Bank of
New York, Church-gate Street,
Fort Bombay.

,, M. R. Shriyan Avl.,
c/o Abdulla Hirji Esq.,
2nd Floor, No. 5, Dalal Street,
Fort Bombay

,, K. C. Kaverappa Avl.,
Manager, Dodnandi Coffe Estate,
Bankal, Kadur Dt.

,, K. Talawar Avl.,
Proprietor, Messrs K. Chapman & Co.
Girgaum, Bombay.

,, Contractor Koragappa Avl.,
Kodialbail, Mangalore.

,, Tukrappa Avl.,
Messrs. Pais shop,
Mangalore.

,, Datt Shet Avl.,
Bharat Jewellery Mart,
Mangalore.

M. R. Ry. A. P. Kirodian Avl.,
Dadar Post, Bombay.

Dr. K. V. Bhat, L.I.M. Physician in charge,
Municipal Ayurvedic Dispensary,
Jeppu, Mangalore.

Swasthi Sri Charukeerthi Panditharcharya-varya Swamiji, Danasala Mutt, Mudabidri.

M. R. Ry. V. S. Prabhu, Avl., Proprietor,
West India Soap & Industrials Co.
Mangalore.

,, Shesappa J. Shriyan Avl.,
The Yokohama Specie Bank Ltd.,
Post Box No. 207, Bombay.

,, Bolar Narayana Rao Avl.,
Proprietor,
Popular Tailoring Shop,
Sir Pheroj Shah Metha Road,
Fort Bombay.

,, H. Vasudev Shetty Avl.,
Proprietor, Hindu Restaurant,
Bruce Street,
Fort Bombay.

,, M. B. Shetty Avl,
c/o Charles Lister & Co.,
Novsari Chamber Outram Road,
Bombay.

,, Bolanthur Laxminarayan
Prabhu, Avl. Merchant,
Bunder, Mangalore.

Prof. N. Sheshappa,
South Kanara Physical Culture Institute,
Bombay.

Hon. Secretary,
Kannada Sangeetha Sabha,
12, Maruthi Lane, Bombay.

M. R. Ry. A. Sitarama, Avl.,
Sub-Registrar, Katachera,
North Malabar.

OUR PATRONS. (Continued.)

M. R. Ry. B. Narayana, Avl., C/o B. Babu, Merchant Bolar, Mangalore.

M. R. Ry. A. Ramappa Avl., Pandeshwar Mangalore.

M. R. Ry. N. Srinivasa Avl., District Health Office, Mangalore.

M. R. Ry. B. Devappa, Avl., Manager Soda Factory Kadri Road, Mangalore.

Messrs. Rao & Rao, Chevrolet Sub Dealers, Maidan Road, Mangalore.

M. R. Ry. M. Vittappa Prabhu Avl., Manager Coffee Hotel, Mannagudde Mangalore.

M. R. Ry. K. Kanthappa Avl., Contractor, Mangalore.

M. R. Ry. B. Rangappa Avl., Proprietor Star Cycle & Motor Co., Mangalore.

M. R. Ry. M. N. Shetty Avl. C/o Messrs Langley & Co., P. Box No. 384 Fort Bombay.

M. R. Ry. M. D. Kuckian Avl., C/o Messrs Langley & Co., P. Box No. 384 Bombay.

M. R. Ry. Narayan A. Karkera Avl., C/o Messrs Langley & Co., P. Box 384 Bombay.

M. R. Ry. S. Hoovaya B. Salian Avl., C/o P. A. Hromarjee & Co., 70 Forbes Street Fort Bombay.

M. R. Ry. T. A. Kotian Avl., C/o Ciba (India) Ltd. Exchange Building, Ballard Estate, Bombay.

M. R. Ry. Babu K. Kotian Avl., Kian Gwan Co, (India), Churchgate House, Churchgate St., Fort Bombay.

Messrs. G. J. Bros., 25 Raghunath Dadaji Street, Bombay.

"A Friend of the Poor" Bombay.

M. R. Ry. Jarappa A. Suvarna Avl. Sassoon Devid & Co, 143. Esplanade Road, Fort Bombay.

M. R. Ry. U. Rangappa Avl. C/o Lallubhai Ranchhoddas, Agakhan Buildings, Dalal Street, Fort Bombay.

M. R. Ry. M. R. Shenoy. Avl., Gopalkrishna Hindu Hotel, 259 Hornby Road, Bombay.

M. R. Ry. M. R. Chander Avl., Havero Trading Co. Ltd., Fosberry Road, Mazagoan, Bombay No. 10

M. R. Ry. K. B. Amin Avl., C/o Messrs Langley & Co., P. B. No. 384 Fort Bombay.

M. R. Ry. M. Kuppaya Avl., C/o Western India Match Company Nical Road Vulcan House Ballard Estate, Bombay.

M. R. Ry. Kumar M. Kundar Avl., C/o Toyo Menka Kaisha & Co., P. O. Box 594–192 Hornby Road Bombay.

M. R. Ry. S. Anthappa Avl., Master Tailor 64 Barbar Lane Fort Bombay.

M. R. Ry. Narayan S. Shetty Avl., C/o Belgian East India Trading Co., 41–45 Stock Exchange Building Bombay.

M. R. Ry. M. K. Kotian Avl., 128–30 Bora Bazar Street 4th Floor, Haji Cassim Buildings Fort Bombay

Mrs. M. Yamuna Bai, 128 Bora Bazar Street, 4th Floor Fort Bombay.

M. R. Ry, Kuppaya. S. Amin Avl., C/o Messrs M. R. Ved & Co., Share Brokers, Agakhan Buildings, Dalal Street, Fort Bombay.

M. R. Ry. Paddoo Gurikara Avl. C/o V. F. Counto Esq, B. A., LL. B. Advocate, High Court, Kalbadevi Road, Bombay No. 2

M. R. Ry. H. Ramaya Avl. The Panjab National Bank Ltd. Amir Buildings, P. B. 266, Bombay

Dr. N. R. Suvarna, M. S. (Bom) New Surgical Home, Tram Terminus, Sandhurst Road, Bombay.

M. R. Ry. Moolur Sheenappa Shetty Avl, N/o Domba Shetty, Baarath Hindu Uparagraha, Progressive Land Blds., No. 1 Kala Chowky Chinch Pokly, Post No. 12. Bombay

M. R. Ry. Rama T. Amin Avl. C/o Dr. Jal & Patel, Bombay House, Bruce Street, Bombay.

M. R. Ry. N. J. Suvarna Avl., Proprietor, Furniture Mart Mangalore.

M. R. Ry. Somappa B. Shetty, Avl., Prop. Hindu Hotel. Alexander Dock, Red Gate Shed, No. 4 Fort Bombay

ಬಡವರ ಸೇವೆಯೇ ಭಗವಂತನ ಸೇವೆಯು.

ಬಡತನದ ವರವು ಎಲ್ಲರಿಗೆ ದೊರೆಯಲಾರದು, ದೇವರ ಮಕ್ಕಳೇ ಅದಕ್ಕೆ ಅರ್ಹರು

ESTABLISHED 1932.

"ಬಡವರ ಬಂಧು"

"BADAVARA BANDHU"

ಸಂಪುಟ 2	ಜನವರಿ 1934.	ಸಂಚಿಕೆ 7

ಕಾಲಚಕ್ರ

ತಿರುಗುತ-ತಿರುಗುತ
ಲೋಕ ಲೋಕಗಳ
ಹೊರಳಿಸಿ-ಹೊರಳಿಸಿ
ಯುಗ ಯುಗ ಯುಗಗಳ
ಹಳೆ ಯುಗವಳಿಸಿ-ಹೊಸ ಜಗವಿರಿಸಿ
ತಿರುಗುತಲಿರುವುದು ಜಗವನೆ ಬಿರಿಸಿ-
ಕಾಲನ ದವಡೆಯು
ಕೋರೆಯು ದಾಡೆ-

ಆಹುತಿ ಮಂತ್ರಕೆ
ಬಂದೇ ಹಾಡೇ!!
ಅಳುವರ ನಗಿಸಿ-ನಗುವರನಳಿಸಿ
ಅಬ್ಬರಿಸುವರಬ್ಬರವನೆ ಇಳಿಸಿ
ಕಾಲಚಕ್ರದಾ
ನಾಟ್ಯವೆ ನಾಟ್ಯ-
ಹೆಮ್ಮೆಯ ಆಟಾ
ಪದ ಹಿರಿ ನಾಟ್ಯ!

ಲೋಕವನುರಿಸಿ-ಲೋಕವ ತಣಿಸಿ
ದಾರಿದ್ರ್ಯದಿ ಉರುಳಾಡಿಸಿ-ಉಣಿಸಿ
ಶಾಂತಿಯ ನೀರನು
ಒಡಲುರಿ ಥಗಿಸಿ
ಮೌನದ ಶರಧಿಯೊ
ಳಲೆಗಳ ಕರೆಸಿ-
ಮಿಂಚನು ಹೊಳೆಸಿ-ಗುಡುಗನು ಬರೆಸಿ
ಭೀಕರ ರೂಪನು ಲೋಕದಿ ಮೆರೆಸಿ-

ಶಾಂತಿಯೆ ಇಲ್ಲದೆ
ಹೊರಳಿಸಿ-ಹೊರಳುತ
ಹೊಸ ಜಗವರಸುತ
ಲೋಕ ಲೋಕಗಳ-
ಅಂಕೆಯೊಳಿರಿಸಿ-ಅಳಿದುದ ಬೆಳೆಸಿ
ಬೆಳೆದುದನಳಿಸಿ-ಹೊಸದನು ತರಿಸಿ-
ತಿರುಗುತಲಿರುತಿದೆ ಹರಸೀ-ಶಪಿಸೀ!!
ಕಾಲಚಕ್ರದಾ ನಾಟ್ಯವಿದು! . . . .

ನೀಲಾಂಗ, ಪುತ್ತೂರು

ಬಡತನಕ್ಕೆ ಬಲಿ.

ಲೇಖಕರು—ಶ್ರೀ. ಶಂಕರನಾರಾಯಣ.

ಚಿಕ್ಕದೊಂದು ಹಳ್ಳಿ. ಅರ್ಧ ಮೈಲಿಗೊಂದರಂತೆ ಮನೆಗಳು. ಈ ಹಳ್ಳಿಯ ಉತ್ತರ ಮೂಲೆಯಲ್ಲೊಂದು ಗುಡಿಸಲು. ಗೋಡೆಗಳ ಬದಲಿಗೆ, ನಾಲ್ಕು ಕಡೆಗಳಿಂದಲೂ ತೆಂಗಿನೆಲೆಗಳ ಆವರಣ. ಒಂದೆಡೆ ಮಾಡಿಗೆ ಹೊದಿಸಿದ್ದ ಹುಲ್ಲು ಜಾರಿ ಬಿದ್ದು, ಸೂರ್ಯ-ಚಂದ್ರರು ಒಳ ನೋಡಲು ಅನುಕೂಲವಿತ್ತು. ಈ ಗುಡಿಸಲಿನ ಒಳಗೆ ಚಿಕ್ಕ ಪುಟ್ಟನು ಒಂದು ಹರಕು ಚಾಪೆಯ ಮೇಲೆ ಮಲಗಿದ್ದನು. ಬಳಿಯಲ್ಲಿ ತಾಯಿಯು ಕುಳಿತು ಕಣ್ಣೀರು ಬಿಡುತಿದ್ದಳು.

ಕಿಟ್ಟಮ್ಮನಿಗೆ ಪುಟ್ಟನು ಒಬ್ಬನೇ ಮಗ. ಅವನಿಗೀಗ ನಾಲ್ಕು ವರ್ಷ. ಹುಟ್ಟಿದಂದಿನಿಂದಲೂ ಪುಟ್ಟನಿಗೆ ಕಾಯಿಲೆ ತಪ್ಪಲಿಕ್ಕಿಲ್ಲ. ಮೊದಲೇ ಬಡತನ! ಒಪ್ಪೊತ್ತಿಗೂ ಗಂಜಿ ಸಿಗುವುದೇ ಕಷ್ಟ. ಅದರೆಡೆಯಲ್ಲಿ ಮುದ್ದು ಪುಟ್ಟುವಿನ ಅಸೌಖ್ಯ! ಆದರೇನು, ಹೊಟ್ಟೆ ಕೇಳುವುದೆ? ಕೊರಗನು ಒಬ್ಬನೇ ದುಡಿದು ತಂದ ಸೇರು ಅಕ್ಕಿಯು, ಎಲ್ಲಿಗೂ ಸಾಲುವಂತಿದ್ದಿಲ್ಲ. ಅದು ಕೂಡ ಒಂದು ದಿನ ಉಂಟು—ಒಂದು ದಿನ ಇಲ್ಲ. ಕಿಟ್ಟಮ್ಮನು ತನ್ನ ಮುದ್ದು ಮಗುವೊಂದನ್ನೆ ಆ ಏಕಾಂತ ಸ್ಥಳದಲ್ಲಿ ಮಲಗಿಸಿ, ಮನಸ್ಸಿಲ್ಲದ-ಮನಸ್ಸಿನಿಂದ ಗೇಯಲಿಕ್ಕೆ ಹೋಗಬೇಕಾಯಿತು. ಪುಟ್ಟನ ಕಾಯಿಲೆಯು—ತಕ್ಕ ಚಿಕಿತ್ಸೆಯಾಗದಿದ್ದುದರಿಂದಲೋ ಏನೋ—ದಿನೇ ದಿನೇ ಹೆಚ್ಚಾಯಿತು. ಕಡೆಗೆ ಕಿಟ್ಟಮ್ಮನೂ ಮನೆಯಲ್ಲೇ ಉಳಿಯಬೇಕಾಯಿತು.

ಕಿಟ್ಟಮ್ಮನು ಹೊರಗೆ ಕಾಲಿಡದೆ ಇಂದಿಗೆ ಮೂರು ದಿನಗಳಾದುವು. ಮನೆಯ ಒಲೆಯಲ್ಲಿ ಬೆಂಕಿ ಉರಿಸದೆ ಎರಡು ದಿನ. ನಿನ್ನೆ ದಿನ ಕೊರಗನು ಊರೆಲ್ಲ ತಿರುಗಿ, ಅದೊಂದು ಕೆಲಸವೂ ದೊರಕದೆ, ಬರಿಗೈಯಿಂದ ಮನೆಗೆ ಬಂದಿದ್ದನು. ಗಂಡಹೆಂಡಿರಿಬ್ಬರೂ ಉಪವಾಸ ಮಲಗಿದ್ದರು. ಮಗುವೂ ಉಪವಾಸವೆ. ಕೊರಗನು, ಮುಂಜಾನೆ ಎದ್ದು ಕೆಲಸ ಹುಡುಕುತ್ತ ಹೋಗಿದ್ದನು ಪುಟ್ಟನ ಕಾಯಿಲೆಯು ವಿಶೇಷವಾಗಿತ್ತು. ಕಿಟ್ಟಮ್ಮನು ಹೊರ ಹೋಗಲಿಲ್ಲ. ಮಧ್ಯಾಹ್ನವಾಯಿತು. ಪುಟ್ಟನು “ಅಮ್ಮಾ, ಗಂಜಿ—ಗಂಜಿ” ಎಂದನು. ಕಿಟ್ಟಮ್ಮನಿಗೆ ಇನ್ನು ಸಹಿಸಲಾಗಲಿಲ್ಲ. ಅವಳು ಮಗನನ್ನು ಎತ್ತಿ ತೊಡೆಯ ಮೇಲೆ ಹಾಕಿಕೊಂಡು 'ಗೋಳೋ' ಎಂದು ಅಳಹತ್ತಿದಳು. ಮಗುವಿಗೆ ಗಂಜಿ ಇಲ್ಲವೆಂದು ತಿಳಿಯಿತೋ ಏನೋ “ನೀರು ನೀರು” ಎಂದು ಒಣಗಿದ ನಾಲಿಗೆಯನ್ನು ಹೊರ ನೀಡಿತು! ಕಿಟ್ಟಮ್ಮನು ಮೆಲ್ಲ ಎದ್ದು ಮೂಲೆಯಿಂದ ನೀರು, ತಂದಳು. ತಂಬಿಗೆಯ ಅಂಚನ್ನು ಮಗುವಿನ ಬಾಯಿಗೆ ಆನಿಸಿ ಹಿಡಿದಳು. ಪುಟ್ಟನು ಒಂದು ಗುಟುಕು ನೀರನ್ನು ಕುಡಿದನು. ಅರೆ ಮುಚ್ಚಿದ್ದ ಕಣ್ಣನ್ನು ಸರಿ ತೆರೆದು ತಾಯಿಯ ಮುಖವನ್ನೊಮ್ಮೆ ನೋಡಿದನು. “ಅ—ಮ್ಮ—ಆ—” ಮುಗಿಯಿತು! ಪುಟ್ಟನ ಇಹಲೋಕ ವ್ಯಾಪಾರವು ಮುಗಿಯಿತು. ಪುಟ್ಟನು ಕಷ್ಟಮಯ ಪ್ರಪಂಚದಿಂದ ಬಿಡುಗಡೆ ಹೊಂದಿದನು.

* * * * * *

ರಾತ್ರಿ 8 ಗಂಟೆ ಹೊತ್ತು. ಕೊರಗನು ದಿನವೆಲ್ಲ ತಿರುಗಿದರೂ ಏನೂ ದೊರೆಯದೆ, ನಿನ್ನಿನಂತೆಯೇ ಬರಿಗೈಯಿಂದಲೇ ಮನೆ ದಾರಿ ಹಿಡಿದನು. ಗುಡಿಸಲನ್ನು ಸಮೀಪಿಸುವಾಗ ಅವನಿಗೇಕೋ ಹೃದಯವು ಕಳವಳಿಸ ತೊಡಗಿತು. ಕೈಕಾಲು ನಡುಗಲಾರಂಭಿಸಿದುವು! ಮರಣೋನ್ಮುಖವಾಗಿ ಮಲಗಿದ್ದ ಮಗುವಿಗೆ ಪಥ್ಯ ಕೊಡಲಿಕ್ಕೂ ಏನೂ ದೊರಕದೆ ಹೋಯಿತೆಂದೇ ಅವನಿಗೆ ಯೋಚನೆ. ಹೇಗೂ ಬಾಗಿಲಿಗೆ ಬಂದನು. ಒಳಗೆ ನಿಶ್ಶಬ್ದ! ಬಾಗಿಲನ್ನು ಮೆಲ್ಲಗೆ ದೂಡಿದನು! ಒಳಗೆ ಕತ್ತಲೆ! ಮಿಣುಗುಟ್ಟುತ್ತಿದ್ದ ಚಿಮಿಣಿ ದೀಪವೂ ಇಲ್ಲ! ಒಲೆಯ ಮೇಲಿದ್ದ ಬೆಂಕಿಪೆಟ್ಟಿಗೆಯನ್ನು ತೆಗೆದು ಒಂದು ಕಡ್ಡಿ ಒರೆದು ಬೆಂಕಿ ಹಚ್ಚಿದನು. ಸುತ್ತಲೂ ನೋಡಿದನು. ಮೂಲೆಯಲ್ಲಿ ಹರಕು ಚಾಪೆಯ ಮೇಲೆ ಪುಟ್ಟುವು ಮಾತ್ರ ಕಾಣಿಸಿದನು. ಹತ್ತಿರ ಹೋಗಿ ಚಾಪೆಯ ಬಳಿ, ಮೊಣಕಾಲೂರಿ ನೋಡಿದನು- ಜೀವವಿದ್ದಂತೆ ಕಾಣಿಸಲಿಲ್ಲ. ಕೈಯಿಂದ ಅಲ್ಲಾಡಿಸಿದನು. ಪುಟ್ಟು ಹೆಣ! ಕೂಡಲೆ ಚಾಪೆಯಿಂದ ದೂರ ಸರಿದು ಎದ್ದು ನಿಂತನು. ಸುತ್ತು ನೋಡಿದನು. ಯಾರೂ ಇಲ್ಲ! “ಕಿಟ್ಟೂ” ಎಂದನು, ಉತ್ತರವಿಲ್ಲ. “ಕಿಟ್ಟೂ—ಕಿಟ್ಟೂ” ಎಂದು ಗಟ್ಟಿಯಾಗಿ ಕೂಗಿದನು. ಮೊದಲಿನಂತೆಯೇ ಕೊರಗನ ತಲೆ ತಿರುಗಲಾರಂಭಿಸಿತು. ಎರಡು ಕೈಗಳಿಂದಲೂ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡು, ಅಯ್ಯೋ, ದೇವರೇ' ಲೋಕವೆಲ್ಲಾ ಕಠಿಣವಾಗಿದೆ! ನಿನಗೂ ಬಡವರ ಮೇಲೆ ದಯೆ ಇಲ್ಲವೆ?” ಎಂದನು. ಕೂಡಲೇ ಅವನ ಮನಸ್ಸಿನಲ್ಲೇನೋ ಹೊಳೆಯಿತು. ಗುಡಿಸಲಿನಿಂದ ಧಾವಿಸಿದನು! ಭಾವಿಯ ಕಡೆ!

* * * * * *

ಮರುದಿನ ಬೆಳಿಗ್ಗೆ ಹಳ್ಳಿಯ ಜನರೆಲ್ಲ ಕೊರಗನ ಗುಡಿಸಲಿನ ಬಳಿ ನೆರೆದಿದ್ದರು. ಊರ ಪಟೇಲರು ಪೋಲೀಸರೊಂದಿಗೆ, ಬಾವಿಯೊಳಗಿಂದ ಕೊರಗ ಮತ್ತು ಕಿಟ್ಟಮ್ಮನ ಹೆಣಗಳನ್ನು ಮೇಲಕ್ಕೆ ತೆಗೆಸಿದರು. ಗುಡಿಸಲಿನ ಒಳಗಿಂದ ಪುಟ್ಟನ ಹೆಣವನ್ನು ಹೊರ ತರಿಸಿದರು. ಮೂರು ಹೆಣಗಳನ್ನು ಪೋಲೀಸ್ ಸ್ಟೇಷನಿಗೆ ಸಾಗಿಸಲಾಯಿತು. ನೆರೆಕರೆ ಸಾಕ್ಷಿ ವಿಚಾರಣೆಗಳು ನಡೆದವು; ಏನಾದರೇನು? ವ್ಯವಹರಣೆ-ವಿಚಾರಣೆ, ಎಲ್ಲ ಸತ್ತ ಮೇಲಲ್ಲವೇ? ದಿನದಿನಕ್ಕೆ ಅನೇಕಾನೇಕ ಭಾಗ್ಯಹೀನ ಬಂಧುಗಳು ಬಡತನಕ್ಕೆ ಬಲಿ ಬೀಳುವಾಗ, ಯಾರಾದರೂ ವಿಚಾರಿಸಿ, ನಿವಾರಿಸುವವರಿದ್ದಾರೆಯೇ?

ಅಂಥ ನನ್ನ ಮಗನು ಮರೆತು ಸಹ ನಿಮ್ಮೂರ ಕಡೆಗೆ ಹೆಜ್ಜೆ ಇಡಲಾರನು. ಅವನು ಮನೆ ಬಿಟ್ಟು ಎಲ್ಲಿಯೂ ಹೋಗಿಲ್ಲ. ನೀವು, ನಿಮ್ಮ ಮಗಳ ಕಲಂಕವನ್ನು ಬಚ್ಚಿಡಲು, ಏನಾದರೊಂದು ಸುಳ್ಳು ಹೇಳುವಿರಿ. ನಿಮ್ಮ ಪಾಪದ ಹೊರೆಯನ್ನು, ನನ್ನ ತಲೆಯ ಮೇಲಪ್ಪಳಿಸಲು ಹವಣಿಸುವಿರಿ.

ಪಂತರು ಧೈರ್ಯಗುಂದದೆ– ಒಳ್ಳೇದು, ಮೊದಲು ನಿಮ್ಮ ಲಜ್ಜಾಶೀಲ ಮಗನೊಡನೆ ಅವನು ಕಳೆದ ಬನದ ಹಣ್ಣಿಮೆಯ ಸುಮಾರಿಗೆ, ಇಲ್ಲಿಗೆ ಬಂದಿದ್ದನೋ, ಇಲ್ಲವೊ ಎಂಬುದನ್ನು ವಿಚಾರಿಸಿರಿ. ಆ ಮೇಲೆ, ನಿಮ್ಮ ಮನಸ್ಸಿಗೆ ಬಂದಂತೆ ಆಡಿಕೊಳ್ಳಿರಿ. ವ್ಯರ್ಥವಾಗಿ ಇನ್ನೊಬ್ಬರಿಗೆ ಹೆಸರಿಡುವುದು ಅದಾವ ಬುದ್ಧಿವಂತರ ಲಕ್ಷಣವು?

ಗಾಡಿಯು ನಿಲ್ಲಿಸಲ್ಪಟ್ಟಿತು ಅಭಾಗಿನಿಯಾದ ಶಾಂತಿಯು ಗಾಡಿಯಿಂದಿಳಿದಳು. ಕೇರಿಯೊಳಗಿನ ಜನರ ಮಾತಿಗೂ ಶಾಸ್ತ್ರಿಗಳು ಒಪ್ಪಲಿಲ್ಲ. ಎಷ್ಟೊಂದು ಮಾತುಕತೆಗಳಾದ ತರುವಾಯ, ಕೃಷ್ಣಮೂರ್ತಿಯನ್ನೇ ಕರೆಕಳುಹಬೇಕೆಂದೂ, ಅವನು ಇಲ್ಲಿಗೆ ಬಂದಿದ್ದು ಒಪ್ಪಿದರೆ ಶಾಂತಿಯು ಸಚ್ಚರಿತ್ರಳೆಂದೂ, ಇಲ್ಲವಾದರೆ ಚರಿತ್ರಹೀನಳೆಂದೂ ಗೊತ್ತಾಯಿತು.

೪

ಮೂರು ದಿನಗಳ ನಂತರ ಒಂದು ದೊಡ್ಡ ಸಭೆ ಸೇರಿತು. ಕೆಲವರು ಪಂತರಿಗೆ ಕುಚೇಷ್ಟೆ ಮಾಡುತ್ತಿದ್ದಾರೆ. ಕೆಲವರು ಶಾಂತಿಯನ್ನು ಹಳಿಯುತ್ತಿದ್ದಾರೆ. ಕೆಲವರು ತಮ್ಮದೇ ದೊಡ್ಡಸ್ತನವನ್ನು ಕೊಚ್ಚಿಕೊಳ್ಳುತ್ತಿದ್ದಾರೆ. ಕೆಲವರು "ಪಾಪ, ಶಾಂತಿಯು ಒಳ್ಳೇ ಹುಡುಗಿ, ಅವಳಿಗೆ ವ್ಯರ್ಥವಾಗಿ ಕಲಂಕ ಹಚ್ಚುತ್ತಿರುವರು. ಹುಡುಗನು ಇಲ್ಲಿಗೆ ಬಂದಿದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ" ಎಂದೂ ಅನ್ನುತ್ತಿದ್ದಾರೆ. "ಏನು ಸುಳ್ಳೋ, ಏನು ನಿಜವೋ ಬಲ್ಲವರಾರು?" ಎಂದೂ ಕೆಲವರ ಮತ. ಬನದಹುಣ್ಣಿಮೆಯ ದಿನ ಮೂರ್ತಿಯನ್ನು ನಾವಿಲ್ಲಿ ನೋಡಿದ್ದೇವೆಂದು ಹೆಚ್ಚಿನವರ ಹೇಳಿಕೆ. ಅವನು ಇಲ್ಲಿಗೆ ಬಂದೇ ಬಂದಿದ್ದನು; ನಾವು ಕಣ್ತುಂಬ ನೋಡಿದ ಸಂಗತಿ ಇದು; ಎಂದು ಮುಂತಾಗಿ ಕೂಡಿದ ಜನರು ಗುಣುಗುಟ್ಟುತ್ತಿರುವಷ್ಟರಲ್ಲಿ ಓರ್ವ ಯುವಕನು ಬಂದು, ಸಭೆಯ ಮಧ್ಯದಲ್ಲಿ ನಿಂತನು. ಅವನ ಮುಖವು ಬಾಡಿದ್ದಿತ್ತಲ್ಲದೆ, ಬೆದರಿದ ಚಿಹ್ನೆಗಳಾದರೂ ಒಡೆದು ಕಾಣುತ್ತಿದ್ದುವು. ನಾಚಿಕೆಯಿಂದ ತಲೆ ಕೆಳಗೆ ಹಾಕಿದ್ದನು. ಕಾಲುಗಳು ಥರಥರ ನಡುಗುತ್ತಲಿದ್ದುವು. ಇಂಥ ಸ್ಥಿತಿಯಲ್ಲಿ ನಿಂತ ಆ ತರುಣನ ಕಡೆಗೆ ಸಭಿಕರೆಲ್ಲರ ಕಣ್ಣುಗಳು ಹೊರಳಿದುವು. ನಾಲ್ಕೂ ಕಡೆಗೆ ಶಾಂತತೆಯು ನೆಲೆಗೊಂಡಿತು. ಆ ಯುವಕನ ಬಾಯಿಯಿಂದ ಹೊರಡುವ ಶಬ್ದಗಳನ್ನು ಕೇಳಲು ಎಲ್ಲರೂ ಕುತೂಹಲಪಡುತ್ತಿದ್ದರು. ಕೃಷ್ಣಮೂರ್ತಿಯು ಸತ್ಯವನ್ನೇ ಹೇಳುವನೆಂದು ಶಾಂತಿಯ ತಂದೆತಾಯಿಯರು ಒಳ್ಳೇ ಹರ್ಷದಿಂದ ತಲೆಯೆತ್ತಿಕೊಂಡು ನಿಂತಿದ್ದರು. ತನ್ನ ಗಂಡನು ಒಂದೇ ಒಂದು ಮಾತಿನಿಂದ ತನ್ನ ಕಲಂಕವನ್ನು ತೊಳೆದು ಹಾಕುವನೆಂದು ಒಳ್ಳೇ ಅಭಿಮಾನದಿಂದ ಆತನೆಡೆಗೆ ನೋಡುತ್ತಿದ್ದಳು ಶಾಂತಿ. ಎಲ್ಲರ ದೃಷ್ಟಿಯೂ ಮೂರ್ತಿಯಲ್ಲಿ. ಮೂರ್ತಿಯ ದೃಷ್ಟಿಯು ನೆಲದಲ್ಲಿ ನೆಟ್ಟಿದ್ದುವು. ಬಹಳ ಹೊತ್ತಿನ ವರೆಗೆ ಮೂರ್ತಿಯು ಮಾತನಾಡದಿರುವುದನ್ನು ಕಂಡು ಶಾಸ್ತ್ರಿಯವರು ಕೋಪಗೊಂಡರು ಮತ್ತು– "ನೋಡು ಮೂರ್ತಿ! ಬಹಳ ವೇಳೆಯಾಯಿತು. ಹೆಂಡತಿಯು ದುಶ್ಚರಿತ್ರಳೆಂದು ಸಿದ್ಧವಾದರೆ, ನಿನಗೇನೂ ಭಯವಿಲ್ಲ. ನೀನು ನಾಚುವ ಕಾರಣವಿಲ್ಲ. ನೀನು ಹೇಳಬೇಕಾದುದನ್ನು ಬಾಯಿಬಿಟ್ಟು ಸಂಕೋಚಭಾವವನ್ನಳಿದು ಹೇಳಿಬಿಡು. ತೀವ್ರ ಹೇಳಿಬಿಡು. ತೀವ್ರ ಹೇಳಿ ಬಿಡು!

ಈ ಪ್ರಕಾರ ನುಡಿದು ಶಾಸ್ತ್ರಿಗಳು ಸುಮ್ಮನಾದರು. ಸಭೆಯಲ್ಲಿ ಶಾಂತತೆಯು ನೆಲೆಗೊಂಡಿತು. ನೂರಾರು ದೃಷ್ಟಿಗಳು ಮೂರ್ತಿಯ ಬಿಳುಪೇರಿದ ಮುಖದಲ್ಲಿ ನೆಟ್ಟವು. ಎಷ್ಟೋ ಕಿವಿಗಳು, ಅವನ ಬಾಯಿಯಿಂದ ಹೊರಡಲಿರುವ "ಹೌದು' ಅಥವಾ "ಇಲ್ಲ' ಎಂಬ ಹೃದಯವಿದಾರಕ ಶಬ್ದಗಳನ್ನು ಕೇಳಲು ಹಾತೊರೆಯುತ್ತಿದ್ದುವು.

ಮೂರ್ತಿಯು ಒಳ್ಳೇ ಪೇಚಾಡುತ್ತ ತಲೆಯೆತ್ತಿದನು. ತನ್ನ ತಂದೆಯನ್ನೊಂದು ಸಲ ನೋಡಿ ತೀರ ಸಣ್ಣ ದನಿಯಲ್ಲಿ ತಡವರಿಸುತ್ತ, ನುಡಿದನು– "ಇ–ಲ್ಲ!'

ಮೂರ್ತಿಯ ಮುಖದಿಂದ ಹೊರಟ ಶಬ್ದವು, ಸಭೆಯಲ್ಲಿ ಒಳ್ಳೇ ಗೊಂದಲವನ್ನೆಬ್ಬಿಸಿತು. ನೂರಾರು ಕಂಠಗಳಿಂದ ಧಿಕ್ಕಾರ ಸ್ವರವು ಹೊರಟಿತು. ಕೂಡಿದ ಜನರು ಗೊಂದಲವನ್ನೆಬ್ಬಿಸಿದರು. ಶಾಂತಿಯು ಮೂರ್ಛಿತಳಾಗಿ ತಾಯಿಯ ತೊಡೆಯ ಮೇಲೆ ಬಿದ್ದುಬಿಟ್ಟಳು. ಪಂತರ ಕಣ್ಣುಗಳೊಳಗಿಂದ ಒಂದು ಪ್ರಳಯಾಗ್ನಿಯು ಹೊರ ಚಲ್ಲಿತು.

ನಿಜ ಸಂಗತಿಯನ್ನರಿತವರು "ಇವನೆಂಥ ಗಂಡಸು! ಕೈಲಾಗದ ಗಂಡ!" ಎಂದು ಹೇಳುತ್ತ ಸಾಗಿದರು.

ಸೂಚನೆ–ಈ ಕಥೆಯು 'ಚಾಂದ' ಎಂಬ ಹಿಂದೀ ಮಾಸಪತ್ರಿಕೆಯ ಮಾರ್ಚಿ ೧೯೩೩ರ ಸಂಚಿಕೆಯಲ್ಲಿ ಪ್ರಕಟವಾದ "ಹಿಂದೂ ಪತಿ–ಕೀ ದುರ್ಬಲತಾ" ಎಂಬ ಕತೆಯ ಕನ್ನಡಾನುವಾದವು.

ಸುಯ್ಯಲರಿಗೆ.

ಲೆ. – ವೆಂಕಟರಮಣ.
(ವಾ. ಷ.)

ಏನಿದನವಸರವೆಲವೊ ಸುಯ್ಯೆಲರೆ ನೀನಿಂತು
ಏನನರಸುತ ಎಲ್ಲಿಗಾಗಿ ಪೋಗುತಲಿರುವೆ
ಏನು ಭೀಕರ ರೂಪ ತಾಳ್ದು ದಾರಿಯೊಳಡ್ಡವಾಗಿರ್ದ
ತರುಲತೆಗಳಾ

ನೀನಿಂತು ಮೂಲೆಗೊತ್ತುತೆ ಸಾಗಿ ಪೋಗುತಿಹೆ
ಏನು ವಿಷಯುವದೆಂಬುದನ್ನಾರಿಗೂ ಅರುಹ–
ದೇನಿಂತು ಸಾಗುತಿಹೆ ಜೀವಕೋಟಿಗಳಾವುವನ್ನು ತಾ
ಲಕ್ಷಿಸದೆಯೆ.

ಪರರ ನೋವನ್ನರಿಯೆಯೇನು ನೀನಿತರರೆ
ಲ್ಲರು ಪಡುವ ಸಂಕಟವನರಿಯೆಯೇನ್ಯೆ ನಿನ್ನ
ತರವ ಕಂಡರೆ ಇಹವ ಬಿಟ್ಟ ರುಧ್ರನ ತೆರದೆ ಕಾಂಬುದಲ್ಲೇನು
ಪವನ.

ತಿರೆಯೊಳಿಹ ಜನರು ನಿನ್ನಂತಿಹರು ಎಂದು ನೀ
ನರಿಯ ಬೇಡ್ಯೆ, ಅವರು, ಜೀವಕೋಟಿಗಳು ಸಹ
ಕರ ಕರೆಯ ಪೊಂದುವರು ಭೀಕರವ ಬಿಟ್ಟು ನೀ ಶಾಂತ-
ನಾಗಯ್ಯ ಪವನ.

ಎಲ್ಲಿಂದ ಎಲ್ಲಿಗಾಗೀಗ ಸಾಗುತಲಿರುವೆ
ಎಲ್ಲಿ ನಿನ್ನಯ ತಾಣ ಎಲ್ಲಿ ನಿನ್ನಯ ನೆಲೆಯು
ಎಲ್ಲಿದ್ದೆ ಈ ಮೊದಲು ಇನ್ನು ಎಲ್ಲಿಗೆ ಹೋಗುತಿರುವೆ
ಹೇಳಯ್ಯ ಒಲಿದು.

ಜಳ್ಳುಗಳು ಭಾರತದಿ ನೆಲಸಿಹರು ಎಂದೆನುತ
ಎಳ್ಳಿನಿತು ಸಂಗವಿನರದು ಬೇಡವೆಂದೆಣಿಸಿ
ಇಲ್ಲಿಂದ ಹೊರಟು ಹೋಗುವೆಯಾದರೊಮ್ಮೆ ತಡೆ
ತಿರುಳಿರಿಸು ಜಳ್ಳಿನೊಳಗೇ.

ಶಾಂತಿಯೇ ಲೋಕದಲಿ ಉತ್ತಮುವದಾಗಿರಲು
ಶಾಂತಿಯನ್ನೇ ಜೀವಕೋಟಿಗಳು ಇಚ್ಛಿಸಲು
ಶಾಂತ ರೂಪವ ನಿಂದು ತಾಳದೆಯೆ ನೀನೇಕೆ ಈ ತೆರದ
ರೂಪ ತಾಳ್ದೆ?

ಶಾಂತಿಯಿಂದಲಿ ಗೆಲಲು ಬಹುದೈಯ್ಯ ಶಾಂತಿಯನು
ಶಾಂತಿಯೇ ಲೋಕದಲ್ಲಿನ ಜೀವವಾಗಿಹುದು
ಶಾಂತಿಯನು ನೀ ಪೊಂದಿ ಕಲಿಸಿ ಜೀವಿಗಳಿಗದ ಶಾಂತಿ
ರಾಜ್ಯವ ಸ್ಥಾಪಿಸೂ.

ಧನ್ಯ ನೀ ಭಾರತೀಯ!

೧

ಧರಣಿ ಯುವತಿಗೆ ಕಣ್ಗಳಂತೆಸೆವ ಭಾರತದಿ
ತರತರದ ವೈಭವಕೆ ನೆಲೆಯೆನಿಪ ಬೀಡಿನಲಿ
ನರಜನ್ಮದಲಿ ಪುಟ್ಟಿ ಪರಮ ವೈಭವ ಪುಣುವ ನರನು ದಿಟದಿಂ ಧನ್ಯನು ॥
ಸಿರಿದೇವಿ ನೆಲೆಸಿರುವ ಪರಮ ಬೀಡಿದುವು ಮೇಣ್
ಸರಸತಿಯು ವಿದ್ಯೆಗಳ ಭಾಂಡಾರವಿದುವು ಯೆನೆ–
ಲಿರುವುದಿದು ಭಾರತವು ಸಕಲ ವೈಭವಗಳಿಂ ಮೆರೆಯುತಿದೆ ಪುಣ್ಯಭೂಮಿ ॥

೨

ಮೆರೆಯುತಿದೆ ತರತರದ ಕೆರೆಗಳಿಂ ತೊರೆಗಳಿಂ
ಪರಿಪರಿಯ ಕಮನೀಯ ಪೊಳೆಗಳಿಂ ಪೊಲಗಳಿಂ
ಪರಮ ವೈಭವದಿಂದ ಮೆರೆಯುತಿದೆ ಭಾರತವು ತರತರದ ರತ್ನಂಗಳಿಂ ॥
ಧರಣಿ ತಲದೊಳಗಿರುವ ಜಾತಿನಿಕರಂಗಳಿಂ
ಪರಿಪರಿಯ ಹಸನಾದ ಪೈರು ಪಚ್ಚೆಂಗಳಿಂ
ಮೆರೆಯುತಿಹ ಭಾರತದಿ ಪುಟ್ಟಿ ಬಳೆಯುತಲಿರುವ ನರನೆ ನೀ ಧನ್ಯಧನ್ಯಂ ॥

೩

ಮತ್ಸ್ಯಕೂರ್ಮ ವರಾಹ ನರಸಿಂಹ ಶ್ರೀರಾಮ
ಮತ್ತೆ ವಾಮನ ರಾಮಕೃಷ್ಣ ಬೌದ್ಧಾದಿಗಳು
ಕುತ್ಸಿತರನಳಿಸಲು ಜನಿಸಲಿಲ್ಲವೆ ನರನೆ ಭರತ ಭೂಮಿಯೊಳು ಮುನ್ನ ॥
ಉತ್ತುಂಗ ಭಾರತದಿ ದೇವನವತರಿಸಿರಲ್
ಮತ್ತೆ ವ್ಯಾಮೋಹ ತಳೆದು ಕುಳಿತಿಹುದೇಕೆ
ಉತ್ತಮಾನಂದಮಂ ತಳೆವರಿನ್ನಾರಿಹರು ಧರಣಿತಲದೊಳಗೆ ಬಂಧೂ? ॥

೪

ಪರಮ ಕಬ್ಬಿಗರಾದ ರನ್ನ ಲಕ್ಷ್ಮೀಶಹರಿ
ಹರಷಡಕ್ಷರಿ ದೇವ ಪೊನ್ನನಯಸೇನ ಮೇಣ್
ಪರಪಂಪ ನೃಪತುಂಗ ಮೊದಲಾದ ಕಬ್ಬಿಗರು ಜನಿಸಿರುವ ಪುಣ್ಯಭೂಮಿ ॥
ವರಕವಿರವೀಂದ್ರ ಜನಿಸಿರುವ ಪಾವನಭೂಮಿ
ತರಣಿವೊಲು ಬೆಳಗಿರುವ ತಿಲಕ ಜನಿಸಿಹ ಭೂಮಿ
ಪರಮ ಪಾವನನಾದ ಗಾಂಧಿದೇವನು ಜನಿಸಿ ಮೆರೆಯುತಿಹ ಪುಣ್ಯಭೂಮಿ ॥

೫

ಪರಮ ಕಬ್ಬಿಗನೆನಿಸಿ ರಾಮಾಯಣವ ಬರೆದು
ಧರೆಗೆಸಮುಸಂತಸವನಿತ್ತಿರುವ ವಾಲ್ಮೀಕಿ
ವರಮುನೀಂದ್ರನು ಜನಿಸಿ ಲೋಕ ಪಾವನನೆನಿಸಿ ಮೆರೆದಿರುವ ಪುಣ್ಯಭೂಮಿ ॥
ವರ ರಾಮಕೃಷ್ಣ ಚೈತನ್ಯ ದೇವಾದಿಗಳು
ಭರತಭುವಿಯೊಳು ಪುಟ್ಟಿ ಲೋಕವಂ ಬೆಳಗಿಸುತ
ಮೆರೆದಿಹರು ಭರತಮಾತೆಯ ಪುತ್ರ ನೀ ಜನಿಸಿ ಬೆಳೆದಿರುವ ಭೂಮಿಯೊಳಗೆ ॥

೬

ಹರಿಯುತಿವೆ ಹದಿನೆಂಟು ನದಿಗಳೀ ಭೂಮಿಯೊಳ್
ಮೆರೆಯುತಿವೆ ವಿಂಧ್ಯಾದಿಗಿರಿಗಳೀ ದೇಶದೊಳ್
ಭರತಮಾತೆಯ ಸುತನೆ ಧನ್ಯನೀನಹುದಹುದು ಲೋಕದೊಳ್ ಧನ್ಯಧನ್ಯಂ ॥
ಪರಮಾತ್ಮನಾವಾಸವೆನಿಸಿರುವ ಭಾರತದಿ
ಮೆರೆಯುತಿರು ಬಂಧುವನವರತ ದೇವನ ಭಜಿಸಿ
ತರಣಿವೊಲ್ ಬೆಳಗುತಿರು ಭಾರತೀಯನೆ ಪರಮ ಬಂಧು ನೀ ಧನ್ಯ ಧನ್ಯಂ ॥

'ಶ್ರೀಕೃಷ್ಣ ತನಯ'

ಮದುವೆಯ ಊಟ.

ಲೇಖಕರು:—ಶ್ರೀ. ಗಣಪತಿ ರಾಮಭಟ್ಟ, "ಮಕ್ಕಳ ಕೂಟ" ಪೆರಡಾಲ

ಅವನು ಬಡ ಹವೀಕ ಬ್ರಾಹ್ಮಣ. ಅವನ ಹೆಸರು ಶಂಕರ ಭಟ್ಟನೆಂದು. ಹೆಂಡತಿ ಗಂಗಮ್ಮ. ಅವರಿಗೆ ಐದಾರು ಚಿಕ್ಕ ಮಕ್ಕಳು—ಹಾಗೂ, ಹೀಗೂ—ಕಾಲ ಕಳೆಯುತ್ತಿದ್ದರು.

ಬ್ರಾಹ್ಮಣನ ಹಿರಿಯರೇನೂ 'ಮರ್ಯಾದೆ' ಬಿಟ್ಟವರಲ್ಲ. ಬಲು ಬಡವನಾದರೂ ಹಿರಿಯರ 'ಆ' ಅಭಿಮಾನಕ್ಕಾಗಿ ಮೊದಲು ಮೊದಲು ಆಮಂತ್ರಣವಿಲ್ಲದ ಮದುವೆ ಮುಂಜಿಗಳಿಗೆ ಅವನು ಹೋದವನಲ್ಲ. ಹೀಗೆ ಎಷ್ಟು ಸಮಯ ಇರಬಹುದು? ಆದರೂ ಒಂದೆರಡು ವರ್ಷಗಳು ದಾಟಿದುವು. ಸಾಲದ ಶೂಲಕ್ಕೇರಿದನು. ಇಂದು ಅವನ 'ಆ' ಅಭಿಮಾನವು ಕರಗಿ ಹೋಗಿತ್ತು. ಈಗ ಹೆಂಡತಿ ಮಕ್ಕಳೊಂದಿಗೆ 'ಕರೆ'ಯಿಲ್ಲದ 'ಊಟ'ಕ್ಕೆ ಹೋಗುವುದೇ ಅವನ ಪ್ರತಿ ನಿತ್ಯದ ಜೀವನೋಪಾಯ. ಪಾಪ! ಸ್ವತಂತ್ರ ಜೀವನದ ಯಾವುದೊಂದು ದಾರಿಯೂ ಅವನಿಗೆ ಕಾಣಲಿಲ್ಲ.

* * *

ಶ್ಯಾಮ ಭಟ್ಟರ ಮಗಳಿಗೆ ವೈಶಾಖ ಶು। ೫ ಯಂದು ರಾತ್ರಿ ವಿವಾಹ ಮಹೋತ್ಸವವೆಂದು ಊರಲ್ಲೆಲ್ಲ ಗಲಭೆ—ಶ್ಯಾಮ ಭಟ್ಟರೆಂದರೆ ದೊಡ್ಡ ಧನಿಕರು. ತನಗೆ ಯೋಗ್ಯನಾದ ಅಳಿಯನನ್ನು 'ನಗದು' ಎರಡು ಸಾವಿರ ರೂಪಾಯಿ ಕೊಟ್ಟು—ಇಪ್ಪತ್ತು ಮೈಲು ದೂರದಲ್ಲಿ—ನಿಶ್ಚಯಿಸಿದ್ದಾರೆ. ಅನುಮಾನ ಪ್ರಯೋಗದಿಂದ—"ಮದುವೆ ದಕ್ಷಿಣೆ ನಾಲ್ಕಾಣೆ" ಎಂದು ಎಲ್ಲರೂ ತಿಳಿದೇ ಇದ್ದಾರೆ.

* * *

ಊಟಕ್ಕೆ ಸಾವಿರ ಜನರು ಕೂಡಿದ್ದರು (ಏನೋ ನೂರು ಮಾತ್ರ ಕಡಿಮೆ.) ಹೊರಲಾರದ ನಿದ್ದೆಯ ಭಾರದಿಂದ ಸ್ತ್ರೀಯರು ತಮ್ಮ ಮಕ್ಕಳನ್ನೆ ಮರೆತಿದ್ದರು. ರಾತ್ರಿಯ ಮದುವೆಯಲ್ಲವೆ!

ಹಾಗೂ, ರಾತ್ರಿ ಕಳೆಯಿತು. ಬೆಳ್ಳನೆ ಬೆಳಗಾದರೂ ಯಾರೂ ಎಚ್ಚತ್ತವರಿಲ್ಲ. ಆಗ ತಾನೆ ಒಬ್ಬಳು ಎದ್ದು ಪಕ್ಕದಲ್ಲಿ ಅಳುತ್ತಿರುವ ಮಗುವನ್ನು ಸಮಾಧಾನ ಮಾಡುತ್ತಿದ್ದಳು. ಕೂಡಲೇ ಅವಳು ಅತ್ತಿತ್ತ ಏನನ್ನೊ ಹುಡುಕಲು ತೊಡಗಿದಳು . . . . . . ಮಗುವಿನ ಕುತ್ತಿಗೆಯಲ್ಲಿದ್ದ "ಚಕ್ರಸರ"ವೊಂದು. ಕೆಲವು ನಿಮಿಷಗಳೊಳಗೆ ಈ ಸುದ್ದಿಯು ಗುಲ್ಲೆಬ್ಬಿಸಿತು.

* * *

ಕಳವೆಂದೇ ನಿರ್ಧಾರ. ಪತ್ತೆ ಹಚ್ಚುವ ಕೆಲಸವು ಭರದಿಂದ ನಡೆಯಿತು. ಶ್ಯಾಮ ಭಟ್ಟರು—ಕಳವಾದುದು ಅವರ ಮನೆಯೊಳಗೇ ಆದುದರಿಂದ—ಕೆಂಡದಂತೆ ಕೆಂಪಾಗಿದ್ದರು. "ತೆಗೆದವರು ಯಾರಿರಬಹುದು" ಎಂದು ಎಲ್ಲರ ತಲೆಯ ಸುತ್ತಲೂ ತಿರುಗುತ್ತಿರುವ ದೊಡ್ಡದೊಂದು ಪ್ರಶ್ನಾರ್ಥಕ ಚಿಹ್ನೆ.

"ಶಂಕರ ಭಟ್ಟನ ಹೆಂಡತಿ;" "ಇಲ್ಲಿಯೇ ಮಲಗಿದ್ದಳು;" "ಅವಳು ಬಡವೆ." "ಯಾಕೆ ಅವಳು ತೆಗೆದಿರಬಾರದು?" "ಅವಳೇ ಇರಬಹುದು;" "ಸಪ್ಪಗಿದ್ದಾಳೆ;" ಹೀಗೆ ಕೆಲವು ಸೊಲ್ಲುಗಳೆದ್ದುವು. ಶ್ಯಾಮ ಭಟ್ಟರ ಕಿವಿಗಳು ನೆಟ್ಟಗಾದುವು. ಇನ್ನೇನು?

* * *

"ಧಾಂಡಿಗ"ರು ಕೆಲವರು ಸಜ್ಜಾಗಿದ್ದರು. ಕದ್ದುದು ಗಂಗಮ್ಮನೆಂದೇ ನಿಶ್ಚಯ. ಅವಳನ್ನು ಮಾಳಿಗೆಗೆ ಒಯ್ದರು. ಶಂಕರ ಭಟ್ಟನು ಮಾಳಿಗೆಯ ಕಡೆಗೆ ಪಿಳಿ ಪಿಳಿ ನೋಡುತ್ತಿದ್ದಾನೆ. ನಾಗರ ಬೆತ್ತ, ಮೆಣಸಿನ ಮುದ್ದೆ ಮೊದಲಾದುವನ್ನು ಮಾಳಿಗೆಗೆ ಒಯ್ಯುತ್ತಿದ್ದುದೂ ಅವನಿಗೆ ಕಂಡೇ ಕಾಣುತಿತ್ತು. ಆ-ದ-ರೆ, ಪಾಪ! ಏನು ಮಾಡ್ಯಾನು? "ಅಮ್ಮಾ! ಅಮ್ಮಾ!" "ಇಲ್ಲಪ್ಪಾ!" "ಸತ್ತೆ! ದಮ್ಮಯ್ಯ!" ಎಂದು ಆರ್ತನಾದಗಳು ಆಗಾಗ ಕೇಳಬರುತ್ತಿದ್ದವು. ಬೆಂದೊಡಲ ಶಂಕರ ಭಟ್ಟನ ಎದೆಯು ಈಗ ಕೆಂಪು ಕಣ್ಣ ನೀರಿನಿಂದಲೆ ತಣಿಯುವಂತಿದ್ದಿತು.

* * *

ಏನು ಮಾಡಿಯೂ ಪ್ರಯೋಜನವಿಲ್ಲದಾದಾಗ ಗಂಗಮ್ಮನ ವಿಮೋಚನೆಯಾಯಿತು.

* * *

ಮರುದಿನವೇ "ಚಕ್ರಸರ"ವು ಸಿಕ್ಕಿತಂತೆ. ಮದುವೆ ದಿನ 'ಜನರು ಎಂಜಲು ಕೈ ತೊಳೆದಲ್ಲಿ ಕಸದಡಿಯಲ್ಲಿ ಬಿದ್ದಿತ್ತಂತೆ.

* * *

ಗಂಗಮ್ಮನು ಅಂತು ಮನೆಯನ್ನೇನೋ ಸೇರಿದಳು. ಆದರೆ, ಒಂದು ತಿಂಗಳ ವರೆಗೆ ಹಾಸಿಗೆಯನ್ನವಳು ಬಿಡಲಿಲ್ಲ, ಶಂಕರ ಭಟ್ಟನಿಗಂತೂ, ಹೆಂಡತಿಯ ಚಾಕರಿ, ಮಕ್ಕಳ ಪಾಲನೆ—ಇದರಿಂದ ಕಣ್ಣೀರ ಗಂಜಿಯನ್ನು ಕುಡಿಯುತ್ತಿದ್ದಾನೆ. ಆ ವೇದನೆಯಿಂದ ಹಿಡಿದ "ಕೋವೆ" ಕೆಮ್ಮು ಗಂಗಮ್ಮನನ್ನೆಂದೂ ಬಿಡಲಿಲ್ಲ. ಕೆಮ್ಮಿನ ಕಾಟದಿಂದ ತಲೆಯೆತ್ತಲಾರದೆ ಮರಣ ಪರ್ಯಂತ ಅವಳು ಕಷ್ಟಪಟ್ಟಳು. ಆದರೆ, ಇಂದು ಅವಳು ಇಲ್ಲ. [illegible] ಗಿಯೇ ಸಾಗಿದ್ದಾಳೆ. [illegible] ಶಂಕರ ಭಟ್ಟನು ಮಾತ್ರ ಹುಚ್ಚಾಗಿ ಅಲೆಯುತಿದ್ದಾನೆ. ಇಂದು ಅವನು ಅನುಭವಿಸುತ್ತಿರುವುದು ಮದುವೆಯ ಊಟದಿಂದೊದಗಿದ [illegible] ಹೃದಯದ ಪ್ರಮತ್ತ ಸಂತೋಷ!!

ನಾವೇಕೆ ಬಡವರಾದೆವು?

ಲೇಖಕರು—ಶ್ರೀ. ಪಂಡಿತ ಕೆ. ಹನುಮಂತರಾವ್, ಬೆಂಗಳೂರು ಸಿಟಿ.

ಬಡತನಕ್ಕಿಂತಲೂ ಹೀನತರವಾದ ದುಃಸ್ಥಿತಿಯೇ ಇಲ್ಲವೆನ್ನುವುದರಲ್ಲಿ ಸ್ವಲ್ಪವೂ ತಪ್ಪಿಲ್ಲ. ಬಡವನಾದವನಿಗೆ ಸ್ಥಾನ ಗೌರವವಿಲ್ಲ; ಸಮಾಜದಲ್ಲಿ ಮರ್ಯಾದೆ ಕಡಿಮೆ; ಅಭಿವೃದ್ಧಿಗೆ ಅಡಚಣೆಗಳಂತೂ ಬೇಕಾದಷ್ಟಿವೆ. ಈ ವಿಷಯಗಳನ್ನರಿತೇ ಬಡತನವನ್ನನುಭವಿಸುವವರು ಹಿಂದಿನ ಜನ್ಮದಲ್ಲಿ ಮಹಾ ಪಾಪವನ್ನು ಮಾಡಿರುವರೆಂದು ಹೇಳುತ್ತಿರುವುದನ್ನು ಕೇಳಿಯೇ ಇರುವೆವು. ಪ್ರಕೃತ, ನಮ್ಮ ಬಡತನಕ್ಕೆ ಕಾರಣಗಳೇನೆಂಬುದನ್ನು ಕಂಡು ಹಿಡಿದು ಅವುಗಳ ನಿವಾರಣೋಪಾಯವನ್ನು ಗೊತ್ತು ಮಾಡಿ ನಮ್ಮನ್ನುದ್ಧಾರ ಮಾಡಿಕೊಳ್ಳುವುದೊಂದು ಅತ್ಯನವಶ್ಯಕವಾದ ಕೆಲಸವಾಗಿದೆ.

ಈ ಲೇಖನಕ್ಕೆ ಬಲುಮಟ್ಟಿಗೆ ಉತ್ತರವು ರಾಜಕೀಯ ವಿಚಾರಗಳಿಗೆ ಸಂಬಂಧಿಸಿರುವುದಾದರೂ, ಅದನ್ನು ಕುರಿತು ನಾವು ಚರ್ಚಿಸದೆ ನಮ್ಮ ಕಣ್ಣೆದುರಿನ ಕೆಲವು ನಡವಳಿಕೆ, ನೋಟಗಳನ್ನು ಮಾತ್ರವೇ ವಿಮರ್ಶಿಸಬೇಕೆಂದಿರುವೆವು.

ನಾವು ಭಾರತೀಯರು. ನಾವೆಲ್ಲರೂ ಸಂಪ್ರದಾಯ ಬದ್ಧರು; ಇಂದಿನ ಆಗು ಹೋಗುಗಳ ಮೇಲೆ ನಾವು ಲಕ್ಷ್ಯವಿಡತಕ್ಕವರಲ್ಲ; ನಮ್ಮದು ಎಂದಿನಿಂದಲೂ ಒಂದೇ ಮಾರ್ಗ; ಅದು ತಪ್ಪೆಂದು ನಮಗೇನೋ ಗೊತ್ತೇ; ಆದರೆ? ಪೂರ್ವಾಚಾರವನ್ನು ಬದಲಾಯಿಸುವುದೇ? ಆ ಬದಲಾವಣೆಯಿಂದ ನಾವು ಧರ್ಮಚ್ಯುತರಾಗುವುದಿಲ್ಲವೇ? ಈ ಮಹತ್ತರವಾದ ಅರ್ಥವಿಲ್ಲದ ಯೋಚನೆಗಳಲ್ಲಿಯೇ ಮಗ್ನರಾಗಿ ನಾವು ಹಿಂದಿನದನ್ನು ಇದು ವರೆಗೂ ಅನುಸರಿಸಿ, 'ರಾತ್ರಿಯಲ್ಲಿ ಕಂಡ ಬಾವಿಗೆ ಹಗಲು ಬಿದ್ದಂತವರಾಗಿ' ದುಃಸ್ಥಿತಿಗೆ ಬಂದಿರುವೆವು. ಮತ ಧರ್ಮಗಳನ್ನು ಸಂಪೂರ್ಣವಾಗಿ ಬದಲಾಯಿಸಬೇಕೆಂಬ ಅಭಿಪ್ರಾಯದಿಂದ ಈ ರೀತಿ ಬರೆಯುತ್ತಿರುವೆವೆಂದು ಯಾರೂ ಭಾವಿಸ ಕೂಡದು. ಮತ ಧರ್ಮದ ಅವಲಂಬನೆಯಿಂದ ನಾವು ಅಷ್ಟಾಗಿ ಬಡವರಾಗಿಲ್ಲ; ವ್ಯಾಪಾರ, ಕೈಗಾರಿಕೆ, ವ್ಯವಸಾಯ, ವಿದ್ಯಾಭ್ಯಾಸ, ಕಾರ್ಯನಿರ್ವಾಹಣ ಕ್ರಮಗಳಲ್ಲಿ ನಾವು ಎಂದಿನಂತೆಯೇ ಇಂದಿನ ವರೆಗೂ ನಡೆದುಕೊಂಡು ಬಂದಿರುತ್ತೇವೆ. ಯಾರು ಯಾವುದನ್ನಾದರೂ ಅನುಸರಿಸಿ ಸ್ವಲ್ಪ ಮುಂದುವರಿದರೆಂದರೆ ನಾವೆಲ್ಲರೂ ಅದನ್ನೇ ಅನುಕರಣ, ಅನುಸರಣೆ ಮಾಡಿಬಿಡುವೆವು! ಅದು ನಮ್ಮ ಸ್ಥಿತಿಗೂ, ಸ್ಥಾನ ದೇಶಗಳಿಗೂ ಸರಿ ಹೋಗುತ್ತದೆಯೋ ಇಲ್ಲವೋ ಎಂಬುದನ್ನೇ ವಿವೇಚಿಸೆವು. ಸರಕಾರದ ಕೆಲಸಕ್ಕಾಗಿ ಓದುವ ಪ್ರಯತ್ನದಲ್ಲಿ ಮುಂದಾಲೋಚನೆಯಿಲ್ಲದೆ ಎಷ್ಟೋ ಮಂದಿ ಯುವಕರು ಓದಿ ಓದಿ ತಮ್ಮ ಬಾಳುವೆಯನ್ನೇ ನೀಗಿಕೊಂಡು, ಸರಕಾರದ ನೌಕರಿಯನ್ನು ಪಡೆಯದೆ ಜೀವನಕ್ಕಿಲ್ಲದಂತೆ ಅಲೆಯುತ್ತಿರುವರು. ಯಾವ ಓದಿನಿಂದ ನಮಗೆ ಸ್ವತಂತ್ರ ಜೀವನವೂ, ಶ್ರೇಯಸ್ಸೂ ದೊರೆಯುವುದೋ ಅಂತಹುವುದಕ್ಕೆ ಶ್ರಮಿಸಬೇಕು. ವಿದ್ಯಾ ನೈಪುಣ್ಯದಿಂದ ಎಲ್ಲರೂ ಸಾಮಾನ್ಯವಾಗಿ ಆಚರಿಸುತ್ತಿರುವ ಮಾರ್ಗಗಳಲ್ಲಿರುವ ಕುಂದುಕೊರತೆಗಳನ್ನು ಕಂಡು ಹಿಡಿದು, ಉತ್ತಮವಾದ ಬೇರೊಂದು ಮಾರ್ಗವನ್ನು ಹುಡುಕಿ ಬಾಳುವುದಾದರೆ ಅದಕ್ಕಿಂತಲೂ ಮೇಲಾದುದೇ ಇಲ್ಲವೆನ್ನಬಹುದು.

ಬೇಸಾಯದಲ್ಲಿ ನಾವು ಎಳ್ಳಷ್ಟಾದರೂ ಹೊಸ ಮಾರ್ಗವನ್ನವಲಂಬಿಸಲು ಮನಸ್ಸು ಕೊಟ್ಟಿಲ್ಲ. ಅಪ್ಪ ಹಾಕಿದ ಆಲದ ಮರವೆಂದು ಅದಕ್ಕೇ ನೇಣು ಹಾಕಿಕೊಳ್ಳುತ್ತಿರುವೆವು. ಬೆಳೆದ ಬೆಳೆಯನ್ನೇ ಪ್ರತಿ ವರ್ಷವೂ ಒಂದೇ ಜಮೀನಿನಲ್ಲಿ ಬೆಳೆ ಮಾಡುವೆವು. ಯಾರು ಯಾವ ಕಸಬಿನಲ್ಲಿ ಏಳಿಗೆಗೆ ಬರಬೇಕೋ ಅದನ್ನೇ ಯೋಚಿಸದೆ ಆಯಾ ಉದ್ಯೋಗವನ್ನು ಬಿಟ್ಟು ಎಲ್ಲರೂ ಸರಕಾರಿಯ ಉದ್ಯೋಗಕ್ಕೆ ಬಾಯಿ ಬಿಟ್ಟು ಕುಲ ಕಸಬುಗಳಿಗೆ ಎಳ್ಳು ನೀರನ್ನು ಬಿಟ್ಟಿರುವರು. ಹೀಗಾಗಿ ನಮ್ಮ ದೇಶದ ಕೈ ಕಸಬುಗಳು ನಾಶವಾದುವು; ಕಸಬುದಾರರು ಕಸಬನ್ನೇ ಮರೆತರು.

ನಮ್ಮಲ್ಲಿಯ ಒಂದು ದೊಡ್ಡ ಹುಚ್ಚು ಇನ್ನೂ ಪ್ರಾಬಲ್ಯದಲ್ಲಿದೆ! ಸರಕಾರದ ಹುದ್ದೇದಾರನೇ ದೊಡ್ಡ ಮನುಷ್ಯನು; ಅವನೇ ಸುಖ ಪುರುಷನು; ಅವನೇ ಮಹಾ ಪ್ರತಿಭಾವಂತನು; ಅವನೇ ಐಶ್ವರ್ಯವಂತನೆಂಬುದು. ಈ ಮೂಢ ತಿಳುವಳಿಕೆಗೆ ಔಷಧಿಯೇ ಇಲ್ಲದಂತಾಗಿದೆ. ಅಧಿಕಾರ ವರ್ಗದವರಿಗೆ ಸ್ಥಾನ ಮಾನಗಳನ್ನು ಕೊಡತಕ್ಕವರು ನಾವು, ಪ್ರಜೆಗಳು. ಅವರಿಂದ ನಮಗೆ ಸಲ್ಲುವ ಮರ್ಯಾದೆಯೇ ಒಂದು ತರಹದು. ಅಕ್ಷರ ವಿದ್ಯೆಯನ್ನು ಎಲ್ಲರೂ ಕಲಿಯಬೇಕು; ಆದರೆ ಅದರಿಂದ ನಮ್ಮ ಸ್ವಾತಂತ್ರ್ಯಕ್ಕೆ ಕುಂದಕವಾಗಬಾರದು. ಅಂದರೆ ನಮ್ಮನ್ನು ಇತರರಿಗೆ ಮಾರಿಕೊಳ್ಳಬಾರದು. ಇದು ಮಾನವನ ಜೀವನದ ನೀತಿಗೆ ವಿರೋಧವಾದುದು.

ನಮಗೆ ನಮ್ಮ ಮುಂದಿನ ಬಾಳುವೆಯ ಯೋಚನೆಯೇ ಇಲ್ಲದಿರುವುದು ಇನ್ನೊಂದು ದೊಡ್ಡ ವಿಷಾದವು. ಇದಕ್ಕೆ ನಮ್ಮ ಹಿರಿಯರೇ ಕಾರಣ ಕರ್ತರು. ಅವರು ತಮ್ಮ ಮಕ್ಕಳ ಬುದ್ಧಿಶಕ್ತಿಯನ್ನು ಗ್ರಹಿಸಿ, ಯಾವುದರಿಂದ ಅವರು ಏಳಿಗೆಗೆ ಬರುವರೆಂಬುದನ್ನು ಪರಿಶೀಲಿಸಿ ಅಂತಹ ಮಾರ್ಗದಲ್ಲಿ ಅವರನ್ನು ಬಿಡುತ್ತಿರುವುದಿಲ್ಲ. ಇದರಿಂದ ಹಿರಿಯರು ಮಕ್ಕಳ ವಿದ್ಯಾಭ್ಯಾಸವೆಂಬ ನೆವದಿಂದ ಬೇಕಾದಷ್ಟು ಧನವನ್ನು ಹಾಳು ಮಾಡಿ ಬಡತನವನ್ನು ಆನಂದದಿಂದ ಅಪ್ಪಿ

12ನೇ ಪುಟವನ್ನು ನೋಡುವುದು.

ವರದಕ್ಷಿಣೆ.

ಲೇಖಕರು:—ಶ್ರೀ. ಕಂಪಕ ಈಶ್ವರ.

ಅದೊಂದು ಕಾಲವಿತ್ತು. ಅಂದು ಭಾರತವು ಭಾಗ್ಯದ ನಾಡಾಗಿತ್ತು ಇಂದು ಅದೇ ನಾಡು ಬಡತನದ ಬೀಡಾಗಿದೆ. ಆಗ ಭಾರತೀಯರು ಗೆಲವಿನಿಂದ ನಲಿಯುತ್ತಿದ್ದರು. ಈಗ ಅದೇ ಭಾರತೀಯರು ಬೆಂದೊಡಲ ಬಿಸಿಯುಸಿರನ್ನು ಬಿಡುತ್ತಿರುವರು. ಆಗಿನ ಸಂತೋಷ, ಆನಂದ, ನಗು, ಅವೆಲ್ಲವೂ ಈಗ ಮಾಯವಾಗಿ ಅನ್ಯಾಯವು ಹರಡಿ, ಅಶಾಂತಿಯು ಹಬ್ಬಿ, ಅಳುವು ತುಂಬಿದೆ. ವಿಶಾಲವಾದೀ ಸೌಭಾಗ್ಯ ಭಾರತವು ಇಂದು ನಿಸ್ತೇಜವಾಗಿರಲು ಕಾರಣವೇನು? ಒಂದೇ ಮಾತಿನಿಂದ ಹೇಳುವುದಾದರೆ, ಭಾರತವು ಅವನತಿಗಿಳಿದು ಬಡತನವು ಒಲಿಯಲು ಅದಕ್ಕೆ ಹಿಡಿದ ರೋಗವೇ ಮೂಲ. ರೋಗಗಳು ಬಹಳವಿವೆ. ಈಗ ಭಾರತಕ್ಕೆ ಅಂಟಿದ ಬಲವಾದ ರೋಗಗಳಲ್ಲಿ "ವರದಕ್ಷಿಣೆ"ಯೂ ಒಂದು.

ವರ–ಎಂದರೆ ಮದುವೆಯಾಗುವವನು ಯಾ ಆಶೀರ್ವಾದ. ದಕ್ಷಿಣೆ–ಎಂದರೆ ನೀಡುವಿಕೆ. ಭಾವಾರ್ಥ—"ನಮ್ಮ ಕನ್ಯೆಯನ್ನು ನೀನು ಪರಿಗ್ರಹಿಸಿ ಸುಖಸಂತೋಷದಿಂದ ಸಂಸಾರವನ್ನು ಸಾಗಿಸು" ಎಂಬ ಸದಿಚ್ಛೆಯ ಆಶೀರ್ವಾದವೇ ಈ ವರದಕ್ಷಿಣೆ. ಆದರೆ ಕಾಲಚಕ್ರದ ಗತಿಯಿಂದಾಗಿ ಇಂದದು ತಿರುಗು ಮುರುಗಾಗಿದೆ ಈಗಿನ ಅರ್ಥವೆಂದರೆ ವರನ ಕಡೆಯವರಿಗೆ ವಧುವಿನ ಕಡೆಯವರು ಕೊಡುವ ಹಣವೇ–ಹಣದ ಗಂಟೇ ವರದಕ್ಷಿಣೆ! ಇಂದಿನ ಈ ವರದಕ್ಷಿಣೆಯು ಧನಿಕ ಸಮಾಜದಿಂದಲೇ ಹೊರಟು ನಿರ್ಗತಿಕ ಸಮಾಜಕ್ಕೂ ತಾಗಿತು. ಅದರಿಂದಾಗಿಯೇ ಇಂದು ಅದೆಷ್ಟೋ ಹೆಣ್ಣುಮಕ್ಕಳು ಮನೆಯ ಮೂಲೆಯ ಪಾಲಾಗಿರುವರು. ಮದುವೆಯಾಗದೆ–ಮದುವೆಯಾಗಲು ದಾರಿಗಾಣದೆ ಮನೆಯಲ್ಲುಳಿದು–ಕೆಡುಕ ಬೇಡರ ಬಲೆಗೆ ಬಿದ್ದು–ಹಾಳಾಗಿ, ಲೋಕನಿಂದೆಗೆ ಗುರಿಯಾಗಿ ಆತ್ಮಹತ್ಯೆಯನ್ನು ಮಾಡಿಕೊಂಡವರೂ ಇರುವರು ಪರಕೀಯರ ಪಾಲಿಗೆ, ವಾರಾಂಗನೆಯರ ಮತಕ್ಕೆ ಭಿಕ್ಷುಕಿಯರ ಸಮೂಹಕ್ಕೆ ಹತ್ತಲ್ಲ, ಹಲವಲ್ಲ ಅಸಂಖ್ಯಾತ ಬಡವೆಯರು ದೊಬ್ಬಲ್ಪಟ್ಟಿರುವರೆಂದರೆ ಕಲ್ಲಾದರೂ ಕರಗದೇ? ಮರವಾದರೂ ಮರುಗದೇ? ಆದರೆ ಇದಕ್ಕಾಗಿ ಅದಾವ ಭಾರತೀಯನ ಕಣ್ಣುಗಳಿಂದ ಅಶ್ರುಧಾರೆಯು ಹರಿಯುವುದು? ಹರಿಯುವುದೇ? ಹರಿವುದಾದರೆ ಎಷ್ಟು ಜನರ ಕಣ್ಣುಗಳಿಂದ?

ವಿವಾಹವೆಂಬುದು ಆಟಕ್ಕಾಗಿ ಹೂಡಿದ ಆಚರಣೆಯಲ್ಲ. ಇದು ಮಾನವನಿಗೆ ಶಾಸ್ತ್ರೀಯ ರೀತಿಯಲ್ಲಿ ವಿಧಾಯಕವಾದ ಷೋಡಶಕರ್ಮಗಳಲ್ಲೊಂದು. ಆಮರಣಾಂತ–ಮರಣಾನಂತರವೂ ವ್ಯಕ್ತಿಗೆ ಸಂಬಂಧಪಟ್ಟುದು. ಪವಿತ್ರ ಪ್ರೇಮವೇ ವಿವಾಹದ ಮೂಲ. ಪ್ರೇಮವು ಹುಟ್ಟಬೇಕಾದರೆ ಪ್ರೇಮದಿಂದ ದಯೆಯಿಂದ–ಮಮತೆಯಿಂದ. ಅದು ಕೊಟ್ಟು ಕೊಂಡುಕೊಳ್ಳುವ ವಸ್ತುವಲ್ಲ. ಮಾರಾಟಕ್ಕಿಟ್ಟ ಸಾಮಾನಲ್ಲ. ಹಣಕ್ಕಿದು ದೊರೆಯದು. ಹಾಗಿರಲು ತಮಗೆ ಅಷ್ಟು ಕೊಡಬೇಕು! ಇಷ್ಟು ಕೊಡಬೇಕು! ತಾವು ಬಿ. ಎ., ಎಮ್. ಎ., ಕಲಿತಿರುವೆವು–ಕಲಿಯಲಿರುವೆವು ಎಂದು ಇಂದು ನಾಗರೀಕತೆಯನ್ನು ಹೊಂದಿದ ವಿದ್ಯಾವಂತರು (?) ಹೇಳುತ್ತಿರುವರು. ಅಯ್ಯೋ ನಾಚಿಕೆಯೇ? ವಿದ್ಯಾವಂತರಾದವರಿಂದು ಈ ರೀತಿ ಹೇಳುವುದೇ? ಹೆಣ್ಣಿನ ಕಡೆಯವರಿಗೆ ತನ್ನನ್ನು ಮಾರ್ಕೇಟಿನ ಸಾಮಾನಿನಂತೆ ಮಾರಿಸಿಕೊಳ್ಳುವುದೇ? ತಮ್ಮನ್ನು ಮಾರಿಕೊಂಡಾದರೂ ಪರ ಊರಿನ ಬೀದಿಗಳನ್ನು ಸುತ್ತಾಡುವ ಲವಲವಿಕೆ! ವಿದ್ಯೆ (?) ಗಳನ್ನು ಕಲಿಯುವ ಬಯಕೆ!! ಬಡವರ ಮಕ್ಕಳ ತಂದೆತಾಯಿಗಳಿಂದ ಸುಲಿದು ಸೆಳೆದ ವರದಕ್ಷಿಣೆಯಿಂದಾಗಿ ಕಲಿಯುವ ವಿದ್ಯೆಗಾದರೂ ಬೆಂಕಿ ಹಚ್ಚಬಾರದೇ? ವರದಕ್ಷಿಣೆಯ ಆಸೆಯಿಂದಾಗಿ ಹೆಣ್ಣು ಮಕ್ಕಳಿರುವ ಮನೆಯನ್ನೇ ಮಣ್ಣುಗೂಡಿಸುವ ವಿದ್ಯಾವಂತರು (?) ನಾಯಿ ಕುನ್ನಿಗಿಂತಲೂ ಕಡೆ! ಧಿಕ್ಕಾರ! ಧಿಕ್ಕಾರ!! ಇವರ ವಿದ್ಯಾವಂತತನಕ್ಕೆ ಧಿಕ್ಕಾರ!

ಕೆಲವರೆನ್ನುವರು—ವರದಕ್ಷಿಣೆ ಪಡೆಯದಿದ್ದರೆ ಮರ್ಯಾದೆಯೇ ಇಲ್ಲವೆಂದು. ಇನ್ನೂ ಕೆಲವರೆನ್ನುವರು "ಮದುವೆಯಾಗಲು ಹಣ ಬೇಡವೇ? ಅದಕ್ಕಾಗಿ" ಎಂದು. "ಮದುವೆಯಾದ ನಂತರ ನಮ್ಮ ಮುಂದಿನ ಗತಿಯೇನು?" ಎಂದು ಕೆಲವರೆನ್ನುವರು. "ವರದಕ್ಷಿಣೆ ಕೊಂಡುಕೊಳ್ಳುವುದು ನಮಗಾಗಿಯಲ್ಲ. ಆ ಹಣವನ್ನು ಅವಳ (ವಧು) ಬಗ್ಗಾಗಿಯೇ ವೆಚ್ಚ ಮಾಡುವೆವು" ಎಂದು ಇನ್ನೂ ಕೆಲವರೆನ್ನುವರು. ಹೀಗೆ ಬೇರೆಬೇರೆಯವರು ಬೇರೆ ಬೇರೆ ತೆರನಾಗಿ ವಾದಿಸುವರು. ನಾವು ಮುಚ್ಚಿದ್ದ ಕಣ್ಣನ್ನು ಸ್ವಲ್ಪವೇ ತೆರೆದರೆ–ಆಗ ಅವರ ವರ್ತನೆಯು ತಪ್ಪೆಂದು ನಮಗೆ ಕಂಡು ಬಾರದಿರದು. ಮರ್ಯಾದೆಯು ಬರುವುದಾದರೆ ಅದು ಈಗಿನ ವರದಕ್ಷಿಣೆಯಿಂದಾಗಿಯಲ್ಲ; ನ್ಯಾಯವಾದ ನಡೆಯಿಂದ. ಬಳಲುವ ಬಡವರನ್ನುದ್ಧರಿಸುವುದರಿಂದ. ಹೆರವರನ್ನು ನಂಬಿ ಹೆರವರ ಹಣದಿಂದ ಮದುವೆಯಾಗುವವನು ಮೂರ್ಖನು. ಇದಕ್ಕಿಂತಲೂ ನೀಚವಾದ ಹೆಸರು ಬೇರೊಂದು ಇರುವುದಾದರೆ ಹಾಗೆಂದೂ ಕರೆಯಬಹುದು! ಇಂತಹ ಧನಾಪೇಕ್ಷಿಗಳನ್ನು! ಬಡವರಿಂದ ಹಣ ಸುಲಿದು ಆ ಹಣದಿಂದಾಗಿ ಮದುವೆಯಾಗುವುದೇ? ಬಡವರ ಬೆಂದ–ಬೆವರಿನ ಹಣವನ್ನು ತಮ್ಮ ಮೋಜಿಗಾಗಿ ವಿಲಾಸಕ್ಕಾಗಿ ಸುಲಿಯುವುದೇ? ಎಂತಹ ಅನ್ಯಾಯ! ಎಂತಹ ಅನಾಚಾರ!! ಕೆಲವರು ತಮ್ಮ ಮುಂದಿನ ಜೀವನಕ್ಕಾಗಿ! ಅಯ್ಯೋ ನಾಚಿಕಯೇ? ಬಡವರಿಂದ ಹಣ ಸುಲಿಯುವುದು ತಮ್ಮ ಜೀವನ ಸಾಗಿಸಲಿಕ್ಕಾಗಿಯೇ? ಇಂತಹ ಜೀವನವು ಇದ್ದಾದರೂ ಫಲವೇನು? ಇಂತಹ ಜೀವನವನ್ನು ಇಂದೇ ನೀಗಿದರಾಗದೇ? ಭೂಮಿಯ ಭಾರವಾದರೂ ಕಡಿಮೆಯಾಗದೇ? ತಮಗಾಗಿಯಲ್ಲವಂತೆ–ಬರುವವಳಿಗಾಗಿಯಂತೆ. ಎಂತಹ ಮಾತಿದು? ಅವಳ ನೆತ್ತರನ್ನು ಅವಳಿಗೇ ಕುಡಿಸುವ ನೆವ ತೋರಿಸುವುದು! ಹಲವರೆನ್ನಬಹುದು. ತಮ್ಮ ಹೆಣ್ಣುಮಕ್ಕಳಿಗಾಗಿ ಕೊಟ್ಟಿರುವೆವು. ತಮ್ಮ ಹುಡುಗನಿಗೂ ಸಿಗಬೇಕೆಂದು. ಎಂತಹ ಮಾತಿದು? ಮಗನನ್ನು ಮಾರಿ ಹೆಣ್ಣನ್ನು ಪಡೆಯುವುದೇ? ಅಥವಾ ಹೆಣ್ಣು–ಹೊನ್ನನ್ನು ಪಡೆಯಲು ಮಗನನ್ನು ಮಾರುವುದೇ? ಮದುವೆಯೆಂಬುದು ವ್ಯಾಪಾರವೇ? ಅಥವಾ ಮಾರಾಟವೇ?

ವಾಚಕ ಮಹಾಶಯರೆ!—ಕಣ್ತೆರೆಯಿರಿ. ಅದೋ ನೋಡಿರಿ–ಗುಂಡಿಗಿಳಿದ ಕಣ್ಣುಗಳಿಂದ ಹೊರಡುವ ಕಣ್ಣೀರ ಕಾಲುವೆಯನ್ನು ಹಲಗೆಯೆದೆಯಿಂದ–ಎಲುವುಗೂಡಿನಿಂದ ಹೊರಡುವ ನಿಟ್ಟುಸಿರನ್ನೂ ಅದೋ ಕೇಳಿರಿ. ಕಿವಿಯಿದ್ದ ಕಿವುಡರು–ಕಣ್ಣಿದ್ದ ಕುರುಡರು ಈಗಿನ ಸಾಮಾಜಿಕರಾಗಿರುವರೇ? ನಾಚಿಕೆ! ನಾಚಿಕೆ!! ನಿಜವಾಗಿಯೂ ನಾಚಿಕೆ!!! ಒಂದೇ ಹೆಣ್ಣುಮಗಳಿರುವವನ ಗತಿಯಾದರೂ ಹೇಗಿರಬೇಕು? ಸಂಸಾರದಲ್ಲಿರುವ ಸತಿಗೆ ತಾನೇ ಪತಿ ಮತ್ತು ಗತಿ ಎಂದು ಒದರುವವನು ಬಡವರ ಕಷ್ಟಾರ್ಜಿತ ಹಣವನ್ನು ಕೊಂಡುಕೊಂಡಾನೇ? ಇಲ್ಲ. ಎಂದಿಗೂ; ಎಂದೆಂದಿಗೂ ಕೊಂಡುಕೊಳ್ಳನು! ಇಂದು ಎಷ್ಟೋ ಮನೆಗಳಲ್ಲಿ ಹುಟ್ಟಿದ

ಮಗುವು ಹೆಣ್ಣಾದರೆ ಅಳುವುದುಂಟು! ಅದೆಷ್ಟೋ ಬಡವರು ತಮ್ಮ ಮಕ್ಕಳ ಮುಂದಿನ ಗತಿಯನ್ನು ನೆನೆದು ಬಾಲ್ಯದಲ್ಲೇ ಸುಣ್ಣದ ನೀರನ್ನು ಬಿಡುವುದುಂಟು—ಕೊರಳಿಗೆ ತಮ್ಮ ಕಾಲುಗಳನ್ನಿಡುವುದುಂಟು! ಅದೂ ಸಾಗದೆ ಹೋದರೆ ತಮ್ಮ ಮಕ್ಕಳನ್ನು ನಡುಗುಡ್ಡೆಯಲ್ಲೋ—ಹೊಳೆಯ ದಂಡೆಯಲ್ಲೋ ಬಿಟ್ಟು ಬರುವುದೂ ಉಂಟು! ಎಷ್ಟೋ ಹೆಣ್ಣುಮಕ್ಕಳು ಈ ವರದಕ್ಷಿಣೆಯಿಂದಾಗಿ ತಾವಾಗಿಯೇ ಆತ್ಮಹತ್ಯ ಮಾಡಿಕೊಂಡಿಲ್ಲ? ಅದನ್ನೆಲ್ಲಾ ನೋಡಿರಬಹುದು! ನೋಡಿರದಿದ್ದರೂ ಕೇಳಿರಬಹುದು! ಹಾಗೆಲ್ಲಾ ಅವರೇಕೆ ಮಾಡುವರು?

ವಾಚಕರೇ! – ಇಡೀ ದೇಶಕ್ಕೆ ಆಧಾರಸ್ತಂಭಗಳಂತಿರುವ ಈ ನಮ್ಮ ಸಹೋದರೀ ವರ್ಗದ ಈ ಶೋಚನೀಯ ಯಾತನೆಗೆ ಮೂಲಕಾರಣವಾದ ಈ ವರದಕ್ಷಿಣೆಯೆಂಬ ರೋಗದಿಂದಾಗಿ ಎಷ್ಟೋ ಬಡ ಕುಟುಂಬಗಳು ನೆಲಸಮವಾಗಿವೆ-ಆಗುತ್ತಲಿವೆ-ಆಗಲಿವೆ. ಇನ್ನಾದರೂ ಕಣ್ತೆರೆಯಲಾರಿರಾ? ದೇಶ ಸೇವೆಯೆಂದರೇನು? ಮರದ್ದೆ? ಮಣ್ಣಿನದೇ? ಗಾಳಿದ್ದೇ—ಯಾ ನೀರಿನದ್ದೇ? ಅಲ್ಲ, ಅಲ್ಲ. ದೇಶದಲ್ಲಿರುವ ದುಃಖಿತರ–ಅನಾಥರ–ಬಡವರ–ಬಂಧುಗಳ ನಿಜಸೇವೆಯೇ ದೇಶಸೇವೆ—ಅದೇ ಈಶ ಸೇವೆ!

ನೋಟೀಸು.

'ಬಡವರ ಬಂಧು'ವಿನ ಡೆಲಿವರಿ ಕೆಲಸದಲ್ಲಿದ್ದ ಕುದ್ರೋಳಿ ಬುಡಾನ್ ಸಾಹೇಬನೆಂಬ ಮಹಾರಾಯನು ರಶೀದಿ ವಿನಹ ಸುಮಾರು ಒಂದು ನೂರು ರೂಪಾಯಿಗಳನ್ನು ನಮ್ಮ ಗ್ರಾಹಕರಿಂದ ತೆಗೆದು ಕೊಂಡಿರುವನೆಂದು ತಿಳಿದುಬಂದುದರಿಂದ ಅವನನ್ನು ಕೆಲಸದಿಂದ ನಿವೃತ್ತಗೊಳಿಸಲಾಗಿದೆ. ಮುಂದಕ್ಕೆ ಬಡವರ ಬಂಧುವಿನ ಸಿಂಧುವಾದ ರಶೀದಿ ವಿನಹ ನಮ್ಮ ಹಣವನ್ನು ಅವನ ಅಥವಾ ಬೇರೆ ಯಾರ ಕೈಯ್ಯಲ್ಲಾಗಲೀ **ಕೊಡಲೇ ಬಾರದು.** ಇಷ್ಟರವರೆಗೆ ಹಾಗೆ ಹಣ ಕೊಟ್ಟುದಕ್ಕೆ ನಾವು ಎಂದಿಗೂ ಜವಾಬ್ದಾರರಲ್ಲ.

ಮೆನೆಜರ 'ಬಡವರ ಬಂಧು'

10ನೇ ಪುಟದಿಂದ ಮುಂದರಿಸಿದುದು.

ಕೊಳ್ಳುವರು. ಈ ಬಗೆಯ ವಿವೇಕ ಹೀನತೆಯಿಂದುಂಟಾದ ಆರ್ಥಿಕ ದುಸ್ಥಿತಿಯು ಕೇವಲ ಅಧಿಕವಾಗಿಯೇ ಇದೆ.


ನಾವು ಬಡವರೆಂದು ನಮಗೆ ಗೊತ್ತಿದ್ದರೂ ನಮ್ಮ ಯೋಗ್ಯತೆಯನ್ನು ಮೀರಿ ಕೆಲಸ ಮಾಡುವುದರಲ್ಲಿ ಬಹಳ ಹಣವನ್ನು ನಿರರ್ಥಕ ಮಾಡುವೆವು. ಇಷ್ಟೇ ಅಲ್ಲ, ನಮ್ಮ ಸಮಾಜವು ಬಡವರ ಮೇಲೆ ತೋರಿಸುವಷ್ಟು ನಿರ್ದಾಕ್ಷಿಣ್ಯತೆಯನ್ನು ಬಲ್ಲಿದರ ಮೇಲೆ ತೋರಿಸುವುದಿಲ್ಲ. ಬಡವನು ಬಡವನೊಡನೆಯೇ ಬಾಂಧವ್ಯವನ್ನು ಬೆಳೆಸುವನು; ಐಶ್ವರ್ಯವಂತರು ಬಡವರನ್ನು ಹೀನಾಯವಾಗಿ ಕಾಣುವರು; ತಮ್ಮ ದೊಡ್ಡಸ್ತಿಕೆಯು ಬಡವರ ಸಹವಾಸ ಸಂಬಂಧದಿಂದ ತಗ್ಗುವುದೆಂದೆಣಿಸುವರು. ಈ ರೀತಿ ಬಡವರು ಬಡವರಾಗಿಯೇ ನಿಲ್ಲುತ್ತಿರುವರಲ್ಲದೆ ಬಲ್ಲಿದರಾಗಲು ಅವಕಾಶ ಕಡಮೆ. ಮತಧರ್ಮಗಳನ್ನು ಬಡವರು ಬಲುಮಟ್ಟಿಗೆ ಅನುಸರಿಸಬೇಕಾಗಿರುವಂತೆ ಹಣವಂತರಿಗಿರುವುದಿಲ್ಲ. 'ದುಡ್ಡಿದ್ದವನೇ ದೊಡ್ಡಪ್ಪ'ನೆಂಬ ಸಾಮತಿಯು ಇಲ್ಲಿ ಸರಿ ಹೋದಂತಾಗಿದೆ.

ನಾವು ಬಡವರಾಗುವುದಕ್ಕೆ ಇನ್ನೊಂದು ಕಾರಣವುಂಟು. ಅನವಶ್ಯಕವಾದವುಗಳಿಗೆ ವಿಶೇಷವಾಗಿ ವೆಚ್ಚ ಮಾಡುವೆವು. ಜೀವನಕ್ರಮದಲ್ಲಿ ಒಂದು ನಿರ್ದಿಷ್ಟವಾದ ಮಾರ್ಗವನ್ನೇ ಅನುಸರಿಸೆವು. ನಮ್ಮದೆಂಬ ಅಭಿಮಾನವು ನಮಗಿಲ್ಲ. ನಮ್ಮ ದೇಶದಲ್ಲಿ ಆದ ಸಾಮಾನುಗಳಿಗೆ ನಮ್ಮ ಉತ್ತೇಜನವೂ, ಮೆಚ್ಚಿಗೆಯೂ ಇಲ್ಲ. ನಮ್ಮದು ಎಷ್ಟೇಶ್ರೇಷ್ಠವಾಗಿದ್ದರೂ ಅನ್ಯರನ್ನೇ ಪ್ರೀತಿಸಿ ಪ್ರೋತ್ಸಾಹಿಸುವೆವು. ಈ ಮಾರ್ಗದಿಂದ ನಮಗಾಗುವ ಮಾನ, ಧನಹಾನಿಗಳು ಅಧಿಕ.

ಅನ್ಯದೇಶೀಯರು ಯಾವ ಯಾವ ಸದ್ಗುಣಗಳಿಂದ ಮಹದ್ದೆಸೆಗೆ ಬಂದಿರುವರೊ ಅದೆಲ್ಲವನ್ನು ನಾವು ಕೈಲಾದಷ್ಟು ಅವಲಂಬಿಸಿ, ನಮ್ಮ ದುಸ್ಥಿತಿಗೆ ಕಾರಣವಾದವುಗಳನ್ನು ಪರಿತ್ಯಜಿಸಬೇಕು. ನಮ್ಮಲ್ಲಿ ಒಗ್ಗಟ್ಟೆಂಬುದು ಶೂನ್ಯವಾಗಿದೆ; ಇದರಿಂದ ನಮ್ಮ ದೇಶದ ಬಲವು ತಗ್ಗಿ ಹೋಗಿದೆ; ಉತ್ತಮವಾದ ಕೆಲಸಗಳು ನೆರವೇರದಂತಾಗಿದೆ. ಇಷ್ಟೇ ಅಲ್ಲ, ಬಡತನವೂ ಉಂಟಾಗಿದೆ.

ನಾವು ನಮ್ಮ ಬುದ್ಧಿ ಶಕ್ತಿಯನ್ನು ಬಹು ಮುಖೇನ ಬೆಳೆಸುವುದಕ್ಕೆ ಬದಲಾಗಿ ನಾನಾ ಬಗೆಯಾಗಿ ಮೆಟ್ಟುತ್ತಿದ್ದೇವೆ. ನಮಗುಚಿತವಲ್ಲದ ಪರದೇಶೀಯರ ನಡವಳಿಕೆಯನ್ನನುಕರಿಸುವುದೂ ಹಿತವಲ್ಲದ ಕಾರ್ಯಗಳಲ್ಲಿ ತೊಡಗುವುದೂ ಅತ್ಯಂತ ಶೋಚನೀಯವಾದುದು.

ಒಟ್ಟಿನಲ್ಲಿ, ನಮ್ಮ ಬಡತನಕ್ಕೆ ಹಲವು ಕಾರಣಗಳಿರುವುವು. ಅವುಗಳಲ್ಲಿ ಕೆಲವನ್ನು ಮೇಲೆ ತಿಳಿಸಿದೆ. ಅಂತಹವುಗಳಿಗೆ ಮುಂದೆ ಅವಕಾಶ ಕೊಡದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಯುವಕನ ಕರ್ತವ್ಯವಾಗಿದೆ. ಸುವರ್ಣಭೂಮಿಯೆನಿಸಿದ್ದ ಭರತಭೂಮಿಯು ಇಂದು ಬಡತನದ ಬೀಡಾಗಿ ಇರುವುದಕ್ಕೆ ಕಾರಣವೇ ನಾವು!



ಅಮೇರಿಕಾದಲ್ಲಿ ರೊಬೆಟ್ ಎಂಬ ಯಂತ್ರವನ್ನು ಮನುಷ್ಯಾಕೃತಿಯಂತೆ ತಯಾರಿಸಿರುತ್ತಾರೆ. ಇದು ವಿದ್ಯುಚ್ಛಕ್ತಿಯಿಂದ ನಡೆಯುತ್ತದೆ. ಈ ಯಂತ್ರವು ಒಳಗಿನ ಅತಿ ಸೂಕ್ಷ್ಮವಾದ ಇಲೆಕ್ಟ್ರಿಕ್ ಉಪಕರಣಗಳ ಮೂಲಕ ಶಬ್ದವನ್ನೂ, ಬೆಳಕನ್ನೂ, ವಿದ್ಯುಚ್ಛಕ್ತಿಯನ್ನೂ ಪರಿಗ್ರಹಿಸಬಲ್ಲುದು. ಈ ಮೊದಲು ಮನುಷ್ಯನಿಂದಲೇ ಆಗಬೇಕಾಗಿದ್ದ ಕೆಲಸಗಳನ್ನು ಈಗ ಈ ವಿದ್ಯುದ್ದೀಪದ ಮನುಷ್ಯನು ಮಾಡಬಲ್ಲನು. ಈ ರೊಬೆಟ್ ಅಥವಾ ವಿದ್ಯುಚ್ಛಕ್ತಿಯ ಮನುಷ್ಯನ ರಚನೆಯು ಎಲ್ಲಾ ರೀತಿಯಲ್ಲೂ ಜೀವಂತ ಮನುಷ್ಯನಂತೆಯೇ ಇದೆ. ಬೇಂಕು ವ ಇತರ ಎಲ್ಲಾ ಆಫೀಸುಗಳಲ್ಲಿ ನಿತ್ಯ ವ್ಯವಹಾರ ಕೆಲಸಗಳನ್ನೂ, ಕ್ಲಾರ್ಕ ಕೆಲಸಗಳನ್ನೂ ಈ ಗೊಂಬೆಯು ಮಾಡುವುದು. ಯಾರಾದರೂ ಹೊರಗಿನಿಂದ ಬಂದರೆ ಅವರಿಗೆ ಬಾಗಿಲನ್ನು ತೆಗೆಯುವುದು ವುದು, ಅವರಿಗೆ ಅಫೀಸು, ಕುರ್ಚಿ ಸಾಮಾನುಗಳನ್ನು ತೋರಿಸುವುದು ಇವೇ ಮೊದಲಾದ ಕೆಲಸಗಳನ್ನು ಇದು ಮಾಡುವುದು. ಈ ಗೊಂಬೆಯು ಸಾರ್ವತ್ರಿಕವಾಗಿ ಪ್ರಸಾರ ಹೊಂದಿದರೆ ಸಾವಿರಾರು ಜನರು ನಿರುದ್ಯೋಗಗಳಾಗಬಹುದೆಂದು ಊಹಿಸಿದ್ದಾರೆ. ರಾತ್ರೆ ಪಹರೆಗಾಗಿ ಈ ಯಂತ್ರಗಳನ್ನು ಅನೇಕ ಆಫೀಸುಗಳಲ್ಲಿ ಉಪಯೋಗಿಸುತ್ತಾರೆ.

ಬರ್ಮದ, ಟೌನ್‌ಂಗ್ಡ್‌ವಿಂಗಿ, ಕೋಸ್ಟ್ ಸ್ಟ್ರೀಟಿನಲ್ಲಿ ಕಿನ್ ಮೊಂಗ್‌ವೂ ಎಂಬವರಲ್ಲಿ ಒಂದು ಕೋಳಿಯ ಮೊಟ್ಟೆ ಇರುತ್ತದೆ. ಇದರ ಒಂದು ತುದಿಯಲ್ಲಿ ಒಂದು ಬಾಲವಿರುತ್ತದೆ. ಗೋಣಿ ಚೀಲದಲ್ಲಿ ಸರಕನ್ನು ತುಂಬಿಸಿ ತುದಿ ಕಟ್ಟಿ ಇಟ್ಟರೆ ಹೇಗೆ ತೋರುತ್ತದೋ, ಹಾಗೆ ಈ ಮೊಟ್ಟೆಯ ಭಾವಚಿತ್ರವು ತೋರಿಬರುತ್ತದೆ. ಈ ಬಾಲ ಉಂಟಾಗಲು ಕಾರಣವೇನೆಂದು ಗೊತ್ತಾಗಿಲ್ಲ. ಇನ್ನು ಈ ಮೊಟ್ಟೆಯನ್ನು ಮರಿ ಮಾಡಿದರೆ ಮರಿಯು ಯಾವ ರೂಪವನ್ನು ತಾಳಿ ಹೊರಗೆ ಬರುವುದು ಎಂದು ಪರೀಕ್ಷಿಸಬೇಕೆಂದಿರುವರು. ಬಾಲವು ಮೊಟ್ಟೆಯ ಮೇಲಿನ ಸಿಪ್ಪೆಯಂತೆಯೇ ಗಟ್ಟಿಯಾಗಿರುತ್ತದೆ. ತೂತು ಇರುತ್ತದೆ. ಮೊಟ್ಟೆಯು ಭಾರವಾಗಿಯೂ ಇದೆ.

ಕುರುಡರ ಅದೃಷ್ಟವು ಚೆನ್ನಾಗುತ್ತಿದೆ—"ರೊಯಲ್ ಲಂಡನ್ ಐ ಹೊಸ್ಪಿಟಲ್"ನಲ್ಲಿ ಕುರುಡರನ್ನು ಮದ್ದಿನ ಮೂಲಕ ಗುಣಪಡಿಸಿ ಅವರಿಗೆ ಕಣ್ಣನ್ನುಂಟು ಮಾಡುವ ಪರೀಕ್ಷೆಯು ನಡೆದು ಯಶಸ್ವಿಗಳಾಗಿದ್ದಾರೆ. ಕುರುಡರ ಕಣ್ಣುಗಳನ್ನು ಒಂದು ವಿದ್ಯುದ್ದೀಪ ಸಾಧನದ ಮೂಲಕ ಗುಣಪಡಿಸಿ ಕಣ್ಣಿನ Retina ಎಂಬ ಭಾಗಕ್ಕೆ ಪ್ರಕಾಶ ಶಕ್ತಿಯನ್ನು ಕೊಡುವರು. ಇದರಿಂದಾಗಿ ಕೆಲವು ದಿನಗಳಲ್ಲೇ ಕುರುಡರ ಕಣ್ಣಿನ ಶಕ್ತಿಯು ವೃದ್ಧಿಗೊಂಡು ಅವರಿಗೆ ಕಣ್ಣು ಕಾಣಿಸುವುದು. ಕೆಲವು ಸಂದರ್ಭಗಳಲ್ಲಿ ಈ ಯತ್ನವು ಫಲಕಾರಿಯಾಗಿದೆ. ಇನ್ನೂ ಕೆಲವು ಪರೀಕ್ಷೆ ನಡೆಸಿ ಸಂಪೂರ್ಣ ಜಯಗೊಂಡರೆ, ಈ ಯೋಜನೆಯನ್ನು ಎಲ್ಲಾ ಕುರುಡರಿಗೆ ಉಪಯೋಗಿಸಿ ನೋಡಲಾಗುವುದು.

ಕಳೆದ ನವಂಬರ ತಿಂಗಳಲ್ಲಿ ಹಾವೇರಿಯಿಂದ ಹುಬ್ಬಳ್ಳಿಗೆ ಮೋಟರ್ ಲೋರಿಯೊಂದು ಬರುವಾಗ ಮಾರ್ಗದಲ್ಲಿ ಗಿಡದ ಮೇಲಿರುವ ಒಂದು ನಾಗರ ಹಾವು ಮೋಟರಿನ ಮೇಲ್ಭಾಗಕ್ಕೆ ಹಾರಿ ಅಲ್ಲಿಂದ ಮೆಲ್ಲನೆ ಒಳಗೆ ಕುಳಿತ ಶಾಂತವೀರ ಎಂಬ ೧೧ ವರ್ಷ ಪ್ರಾಯದ ಹುಡುಗನ ಕೊರಳಿಗೆ ಸುತ್ತು ಹಾಕಿತು. ಈ ಸಂಗತಿಯು ಉಳಿದ ಜನರ ಕಣ್ಣಿಗೆ ಬೀಳಲು ಎಲ್ಲರೂ ಗಾಬರಿಯಾಗಿ ಚೀರಾಡ ತೊಡಗಿದರು. ಈ ಬೊಬ್ಬೆಗೆ ಡ್ರ್ಯಾವರನು ಮೋಟರನ್ನು ನಿಲ್ಲಿಸಿದನು. ಎಲ್ಲರೂ ಅವಸರದಿಂದ ಕೆಳಗಿಳಿದರು. ಆದರೆ ಶಾಂತವೀರನು ಮಾತ್ರ ಶಾಂತತದಿಂದ ಯಾವ ಚಲನೆಯನ್ನೂ ಮಾಡದೆ ಸಂದು ಸಾಧಿಸಿ, ಆ ನಾಗಪ್ಪನ ಬಾಯಿಯನ್ನು ಮುಷ್ಟಿಯಲ್ಲಿ ಗಟ್ಟಿಯಾಗಿ ಹಿಡಿದು ಸಾವಕಾಶವಾಗಿ ಕತ್ತಿನ ಸುತ್ತಲಿನ ಸುತ್ತುಗಳನ್ನು ಬಿಡಿಸಿ, ಹಾವನ್ನು ನೆಲಕ್ಕೆ ಬಿಸಾಡಿದನು. ಜನರು ಒಟ್ಟಾಗಿ ಅದನ್ನು ಕೊಂದರು. ಶಾಂತವೀರನಿಗೆ ಯಾವ ತರದ ಅಪಾಯವೂ ಆಗಿರುವುದಿಲ್ಲ. ಎಲ್ಲರೂ ಆ ಬಾಲವೀರನ ಸಾಹಸವನ್ನು ಶ್ಲಾಘಿಸಿದರು. ಮೋಟರು ಮುಂದಕ್ಕೆ ಸಾಗಿತು.

ಮೈಸೂರು ನರ್ಸಣ್ಣನ ಡೋಲು ಡಮರ.

ಬೈ: ಮಿ। ಮೈಸೂರು ನರ್ಸಣ್ಣ.

ಸಲಾಂ ಸ್ವಾಮಿ ಸಲಾಂ, ಹೊಸ ವರ್ಷದ ಹೊಸ ಸಲಾಂ! ಬಂತೈ ಬಂತೈ ಹೊಸ ಹೊಸ ವರ್ಷವು। ಸಂತೈ ಸಂತೈ ಹಳೆ ವರ್ಷವು। ನಿಂತೇ ಹೇಳ್ತೇನೆ ಕೇಳಿರಿ ಮಾತನು। ಸಂತಸ ಹರುಷಗಳೊಡನೆ ಬಂತೈ। ಹೊಸ ವರ್ಷದ ಜನವರಿಯೂ ಬಂತೈ. ಹಳೆ ಯುಗವೆಲ್ಲವು ಕೊಳೆಯುತ ಹೋಯ್ತು. ಭಲೆ ಭೇಷ್ ಎನ್ನುವ ದಿನವದು ಬಂತು. ತಲೆ ಕೆಳಗಾಗುತ ಕಾಲ್ಮೇಲಾಯಿತು ಕಾಲೊಂದಾಗುತ ತಲೆ ಎರಡಾಯ್ತು, ಹೊಲೆಯರು ಎನ್ನುವ ಹೊಲೆತನ ಹೋಯ್ತು. ಹಾರುವರೆನ್ನುವ ಗೌರವ ಹೋಯ್ತು।

ಏನು ಕಾಲ ಸ್ವಾಮಿ ಇದು. ಎಂತಹ ಯುಗವಿದು? ಏನು ವಿಚಿತ್ರ! ಏನು ಔಚಿತ್ಯ! ಬೊಂಬ್ಯಾಯ ರಘುನಾಥ ದಾದಾಜಿ ಕಂಪ್ನಿಯ ವಿ ಎಸ್. ಸಾಲಿನ್ಸ್ ಎಂಬ ಮಹಸೀಯರೊಬ್ರು, ಅಲ್ಲ—ಅಲ್ಲ—ದೇವ್ರೆ ತಪ್ಪಿ ಬಿದ್ದೆ. ಮಹಾ+ಹಾಸೀಯರೊಬ್ರು ಬಡವ್ರ ಬಂದುವ್ಗೆ ತಾನು ಪೋಷಕ್ನಾಗಿ ಸೇರಿ ತನ್ನಿಂದ ಸಲಲಿಕ್ಕಿದ್ದ ಹಣಕ್ಕೆ ವಿ. ಪಿ. ಮಾಡ್ರೆಂದು ಭರವಸೆಯಿತ್ತು ವಿ ಪಿ. ಮಾಡಿದ್ದನ್ನು ಹಿಂದೆ ಬಿಟ್ಟು ಬಡವ್ರ ಬಂಧುವ್ಗೆ ನಷ್ಟ ಪಡಿಸು ವಷ್ಟರ ನಿಷ್ಕರುಣ್ರುಗಳಾದರು. ಈಗ್ನಿಂತಹ ಹಣದ ಅಭಾವವಿರುವ ಸಮಯದಲ್ಲಿ ಅದ್ರಲ್ಲೂ ಇಂತಹ ಬಡವ್ರ ಸಂಸ್ಥೆಗೆ ಅನಾವಶ್ಯಕ ನಷ್ಟ ಗೊಳಿಸಬಲ್ಲ ಜನ್ರ ಬದ್ಕು ಇದ್ದರೇನು? ಇಲ್ಲದಿದ್ದರೇನು?

ಕಳ್ದ ತಾ. ೨೪ನೇ ದಿವ್ಸ ಬಂಧ್ವಿನ ಉಪಸಂಪಾದಕರ್ಗೆ ಮದ್ವೆಯಾಯಿತ್ರಿ. ಏನು ಮದ್ವೆಯೋ ಏನು ಮಣ್ಣೋ! ನನಗೂ ಬರ್ಲಿಕ್ಕೆ ಹೇಳಿದ್ರು. ನಾನೆಣ್ಸಿದೆ—ಸಂಪಾದಕ್ರ ಮದುವೆ ಬಾರೀ ಗೌಜಿ ಇರ್ಬಹ್ದು; ಊಟ ಉಪ್ಚಾರಕ್ಕೆ ಕಮ್ಮಿ ಇರ್ಲಿಕ್ಕಿಲ್ಲ. ಉಡ್ಗೊರೆ ದಕ್ಷಿಣೆಯು ತುಂಬಾ ಇರಬಹುದು ಎಂದು. ಅಯ್ಯೋ ಅವ್ರ ಮದುವೆಯೇ! ಅದ್ರ ವಿಷಯ ನನಗೆ ಹೇಳಲಿಕ್ಕೆ ನಾಚ್ಕೆಯಾಗುತ್ತೆ ಸಾಮಿ. ಥೂ! ಈ ರೀತಿ ಮದ್ವೆ ಯಾರು ಆಗ್ತಾರ್ದು ಸ್ವಾಮಿ. ಏನಂತೀರಿ ಬರೇ 13 ರೂಪ್ಾಯೊಳ್ಗೆ ಒಂದು ಮದ್ವೆಯಾದ್ರೆ ಇನ್ನು ಊಟ ಉಪ್ಚಾರಕ್ಕಾಗಿ, ಶಾಲು ಧೋತಿಗಳ್ಗಾಗಿ, ಡೋಲು ವಾದ್ಯಗಳ್ಗಾಗಿ, ಮೇಳತಾಳಗಳ್ಗಾಗಿ, ಕೋಲುಕೊಂಬಿಗಾಗಿ ಹಾ ಎಂದು ಬಾಯ್ಬಿಡ್ವ ಜನ್ರಿಗೇನ್ಗತಿ ದೇವ್ರೆ. ಅವರ ಮದ್ವೆಯ ವಿಷಯ ಜನ್ರಿಗೆ ಬೇಸರ ಸ್ವಾಮಿ! ಕೆಲವರೆನ್ತಾರೆ ಅವ್ರ ಮದ್ವೆಗೆ ಹೋಗೊದೇಕ್ರಿ? ಊಟ, ಉಡ್ಗೆರೆ ಇಲ್ಲ ಅಂತೆ. ಇನ್ನು ಕೆಲವರೆನ್ತಾರೆ ಅವ್ರ ಮದ್ವೆಗೆ ಬಹುಮಾನ ಕೊಡೋಕ್ಕಾದ್ರೂ ನಮ್ಗೆ ಹಕ್ಕಿಲ್ಲವಂತೆ. ನಾವು ಬಹುಮಾನ ಕೊಡೋಕ್ಕಿಲ್ಲದಿದ್ರೆ ಮತ್ತ್ಯಾಕೆ ಅವ್ರ ಮದ್ವೆಗೆ ಹೋಗ್ಬೇದು? ಎಂದು ಕೆಲವರೆನ್ತಾರೆ. ಹೌದು ಸ್ವಾಮಿ ಅವ್ರ ಮಾತನ್ನು ನಾನು ನಿಜವೆನ್ತೇನೆ. ನಮ್ಮ ಉಪ ಸಂಪಾದಕ್ರು ಏನ್ಮಾಡಿ ಬಿಟ್ರು ಸ್ವಾಮಿ ಮದ್ವೆ ಹೆಸ್ರಲ್ಲಿ ಕಮ್ಮಿಯಲ್ಲೆಂದರೆ, ಏಳೆಂಟು ನೂರು ರೂಪ್ಾಯ ಗಂಟು ಒಳ್ಗೆ ಹಾಕ್ಬಹುದಿತ್ತು. ಇವ್ರ ಅವಿವೇಕತನ ಇನ್ನೊಂದುಂಟ್ಸಾಮಿ! ವರದಕ್ಷಿಣೆ ಇಲ್ಲದೆನೇ ಮದುವೆಯಾಗಿಬಿಟ್ರು. ಮದ್ವೆಯೆಂಬುದು ಸುಲಿಗೆಯ ವ್ಯಾಪಾರ ರೂಪಕ್ಕೆ ಇಳ್ದ ಇಂತಹ ಕಾಲ್ದದಲ್ಲೂ ವರದಕ್ಷಿಣೆ ಇಲ್ಲದೇ ಮದ್ವೆಯಾಗುವುದೆಂದ್ರೆ ಇವರ್ಗೇನನ್ನ ಬೇಕ್ಸಾಮಿ? ಸಾವಿರ ಸಾವಿರ ರೂಪ್ಾ ವರದಕ್ಷಿಣೆ ಕೊಡುತ್ತೇನೆಂದು ಬರೆದ ಶ್ರೀಮಂತ ಕುಟುಂಬಿಕರನ್ನು ಗಣ್ಯಕ್ಕೆ ತಾರ್ದೆ ಬಡತನದಲ್ಲೇ ಬಡವ್ರ ಹುಡ್ಗಿಯನ್ನೇ ಮದುವೆಯಾದ್ವೆಂದ್ರೆ ಇನ್ನೀಗ ಹೇಗೆ ಸ್ವಾಮಿ? ಬಳುವಳಿ ಹಣ—ಬಹುಮಾನದ ಹಣ ಇವರ್ಗೆ ಬೇಡವೆಂದಾದರೆ ನನ್ನಂತಹ ಬಡ ನರ್ಸಣ್ಣನಿಗಾದರೂ "ಇಕೋ ಅಪ್ಪಾ ತಕ್ಕೋ" ಎಂದು ಕೊಡ್ಬಾರ್ದಿತ್ತೆ? ನಾನಾದ್ರೂ ಸದ್ಯಕ್ಕೆ ಮಂಗ್ಳೂರ್ಗೆ ಬಂದ ಫನ್ ಫೇರ್ಗೋ ಗನ್ ಬೋರ್ಗೋ—ರನ್ ಜೈಲ್ಗೂ ಸನ್ ಪೇಸ್ಗೋ ಹೋಗಿ ಸ್ವಲ್ಪ ದಿವ್ಸದ ಮಟ್ಟಿಗಾದ್ರೂ ಮಜಾ ಮಾಡ್ತಿದ್ದೆನಪ್ಪಾ. ನನ್ಗೂ ಕೊಡ್ಲಿಕ್ಕೆ ಮನ್ಸಿಲ್ದಿದ್ರೆ ಬಡ ಜ್ಞಾನ ಶೂನ್ಯ ಸಮಾಜದಲ್ಲಿ ತಾವು ದೊಡ್ಡ ಗುರಿಕಾರ್ರೆಂದು ಹೇಳಿಕೊಂಡು ತನ್ಗೆ ಶರಾಬು ಕುಡ್ಸಿ ಕೈಯಲ್ಲೊಂದು ಹತ್ತಿಪ್ಪತ್ತು ರೂಪ್ಾ ಕೊಟ್ರೆ ಜಾತಿ ಇಲ್ಲದವರ್ಗೂ ಜಾತಿ(?) ಕೊಟ್ಟು ಕಾಸು ಕೊಡದವರ್ಗೆ ಕೈಲಾಸ ತೋರ್ಸುವ ಕಳ್ಳು ಕುಡಿಯುವ ಸಂಸ್ಥೆಯೊಂದನ್ನೇರ್ಪಡ್ಸಿಕೊಳ್ಳುವರೇ ಆ ರೂಪ್ಾಯನ್ನು ಕೊಟ್ಟು ದನವನ್ನು ಕೊಂದು ಹುಲಿಗೆ ದಾನ ಮಾಡಿದವರ ಪ್ರುಣ್ಯವನ್ನಾದ್ರೂ ಕಟ್ಟಿಕೊಳ್ಳ ಬಾರ್ದಿತ್ತೇ? ಒಂದು ಮದುವೆಗೆ ಒಂದು ನೂರರ ವಾರಂಟಾದ್ರೂ ಬಾರದಿದ್ರೆ ಅದ್ಕೆ ಮದ್ವೆ ಎನ್ತಾರೇನು? ಒಂದು ತಿಂಗ್ಳ ಮಟ್ಟಿಗಾದ್ರೂ ಮನೆ



ಬಾಗ್ಲಿಗೆ ಸಾಲಿಗರು ಕಾಲನ ದೂತ್ರಂತೆ ಕಾವಲು ಮಾಡದಿದ್ರೆ ಆ ಮನೆಯನ್ನು ಮದ್ವೆ ಮನೆಯೆಂದು ಹೇಳ್ತಾರೇನು? ಮದ್ವೆಗಲ್ಲದ ಸಾಲ ಮಸಣಕ್ಕೋ? ಈ ರೀತ್ಯಲ್ಲಿ ಇಷ್ಟು ಸುಲಭ್ದಿಲ್ಲ; ಮದ್ವೆಯಾಗ್ಬು ದೆಂದಿದ್ರೆ! ನಾನು ಬರೇ ಎರ್ಡು ಹುಡ್ಗರ್ಗೆ ಮದ್ವೆ ಮಾಡಿ ನನ್ನ ಮನೆ ಮಠ ಮಾರಿ ಬೇಡಿ ತಿನ್ವ ಈ ಗತ್ಲೆ ಬರ್ಬೇಕಿತ್ತೇ? ಹೀಗಾದ್ರೆ ನನ್ಗಿದ್ದ ಇನ್ನು ಹದಿಮೂರು ಹುಡ್ಗರ್ಗೆ ಇಪ್ಪತ್ತಾರು ಮದ್ವೆ ಮಾಡ್ವೆನಲ್ಲಾ. ಆದ್ರೆ ಅಯ್ಯೋ ಆ ಅವಮಾನ ಯಾರ್ಗೆ ಬೇಕ್ಸಾಮಿ? ಇಷ್ಟೊಂದು ಚಿಲ್ರೆಯಲ್ಲಿ ಮದ್ವೆಯನ್ನುವದೆಂದ್ರೆ ಆಗ್ದು ಸಾಮಿ ಆಗ್ದು, ನನ್ನಿಂದಾಗ್ದು.

ಮಂಗಳೂರು, ತಾ. ೧೮—೧೧—೩೩.

ಮುಂಬಾಯಿಯ ನನ್ನ ಮಿತ್ರರೆಲ್ಲರಿಗೂ ವಂದನೆಗಳು.

ತಮ್ಮಗಳ ಅಗಲುವಿಕೆಯಿಂದಾಗಿ ನನಗೆ ಮಂಗಳೂರಿಗೆ ಬಂದ ಕೆಲವು ದಿನಗಳ ವರೆಗೆ ಹೇಗೋ ಹೇಗೋ ಅನಿಸಿತು. ನಾಗರೀಕತೆಯು ಉಚ್ಚ ಶಿಖರಕ್ಕೇರಿದ ಮುಂಬಾಯಿ ಪಟ್ಟಣದಲ್ಲಿ ಬಾಂಧವರಿಂದ ನನಗೆ ಲಭಿಸಿದಷ್ಟು ಆದರೋಪಚಾರ, ಸಹಾಯ, ಪ್ರೋತ್ಸಾಹಗಳು ಸಿಕ್ಕೀತೆಂಬ ಭರವಸೆಯು ನನ್ನಲ್ಲಿ ಇಲ್ಲವೇ ಇಲ್ಲವಿತ್ತು. ಆದರೆ ನಾನು ಮುಂಬಾಯಿಯಲ್ಲಿದ್ದಷ್ಟು ದಿನವೂ ನನ್ನ ಮೇಲೆ, ನನ್ನ ಮಿತ್ರರಿಗಿದ್ದ ಅತುಲ—ಹಾಗೂ ಪವಿತ್ರ ಪ್ರೇಮವನ್ನು ಕಂಡು ನಾನು ನಿಜವಾಗಿಯೂ ಆನಂದ ಭಾಷ್ಪಗಳನ್ನು ಸುರಿಸಿದ್ದೇನೆ. ಈಗಲೂ ನನಗೆ ಆಗಾಗ್ಗ ತಮ್ಮಗಳೊಡನೆ ಬೆರೆತುಕೊಳ್ಳಲು ಅತಿಯಾದ ಆಶೆಯಾಗುವುದಾದರೂ, ಕರ್ತವ್ಯದೆಡೆಗೆ ಕೈನೀಡಿರುವುದರಿಂದ ಆ ಆಶೆಯು ಕೊನೆಯನ್ನು ಉಪಾಯವಿಲ್ಲದೆ, ಮನಸ್ಸನ್ನು ನೋಯಿಸಿ ಚಿವುಟ ಬೇಕಾಗುತ್ತದೆ. ಹೇಗೂ ಇದ್ದರೂ ತಮ್ಮಗಳೊಡನಾಟವು ನನಗೆ, ನನ್ನಂತ್ಯದ ಮೊದಲು ಇನ್ನೊಮ್ಮೆ ದೊರೆಯದಿರಲಾರದೆಂದೇ ನನ್ನ ದೃಢವಾದ ನಂಬುಗೆ. ಪರಮಾತ್ಮನು ತಮ್ಮೆಲ್ಲರಿಗೂ ಆಯುರಾರೋಗ್ಯೈಶ್ವರ್ಯಗಳನ್ನಿತ್ತು ಪೊರೆಯಲೆಂದು ಪ್ರಾರ್ಥಿಸುವ,

ತಮ್ಮಗಳ ಬಡ ಮಿತ್ರ,

ಬಿ. ನರ್ಸಪ್ಪ.

ಬಡವರ ಬಂಧು ಹಾಸ್ಯೌಷಧಾಲಯ.

ಹೆಂಡತಿ–ನೀವು ಇನ್ನು ಮುಂದೆ ಎಂದೂ ನನ್ನನ್ನು ಪ್ರೀತಿಸಲಾರಿರಿ.

ಗಂಡ–ಅದೇಕೆ, ಹುಚ್ಚಿ? ಹಾಗೆ ಹೇಳುತ್ತೀ?

ಹೆಂಡತಿ–ಬೇರೆ ಸೀರೆ ಇಲ್ಲದೆ, ಈ ಹರಕು ಕೊಳಕು ಬಟ್ಟೆಯುಟ್ಟ ಹೆಂಗಸನ್ನು ಯಾವ ಗಂಡಸಾದರೂ ಪ್ರೀತಿಸಿಯಾನೇ ನೀವೆ ಹೇಳಿ!

* * * * *

ತಂದೆ ಮಗನಿಗೆ ರಾಮಾಯಣವನ್ನು ಹೇಳುತ್ತಾ (ಸೀತೆಯನ್ನು ಕದ್ದೊಯ್ದುದನ್ನು ಹೇಳುವಾಗ)

ಮಗ–ರಾವಣನು ನಿಜವಾಗಿಯೂ ತಿಳಿಗೇಡಿ.

ತಂದೆ–ನಿಜ, ಅವನಿಗೆ ತಾನು ಮಾಯದ ಸೀತೆಯನ್ನು ಕೊಂಡೊಯ್ಯುವುದೆಂದು ತಿಳಿದೇ ಇರಲಿಲ್ಲ.

ಮಗ–ಅದಲ್ಲ, ಅವನು ಹತ್ತು ತಲೆಯವನಿದ್ದು ಒಂದೇ ತಲೆಯ ಸೀತೆಯನ್ನು ಕದ್ದೊಯ್ದುದು ಮೂರ್ಖತನ. ಹತ್ತು ತಲೆಯವಳನ್ನೇ ಕದ್ದೊಯ್ಯ ಬೇಕಿತ್ತು.

ತಂದೆ–ಅದೇಕೆ?

ಮಗ–ಅವನು ಹತ್ತು ಮುಖಗಳಿಂದ ಒಂದೇ ಮುಖದ ಸೀತೆಯನ್ನು ಹೇಗೆ ಚುಂಬಿಸಿಯಾನು?

* * * * *

ಗಂಡ–ಪ್ರಿಯೆ ನೀನು, ಹೆಂಗಸರಿಗೆ ಆಭರಣಗಳ ಆಶೆ ಇರಬಾರದೆಂಬ ವಿಷಯದಲ್ಲಿ ಬರೆದ ಲೇಖನವನ್ನು ಓದಿ ತುಂಬಾ ಹರ್ಷಿತನಾದೆನು. ಆದುದರಿಂದ ನಿನಗೇನು ಬಹುಮಾನ ಬೇಕು, ಕೇಳು.

ಹೆಂಡತಿ–ನನಗೆ ಒಂದು ಮುತ್ತಿನಸರ ಮತ್ತೊಂದು ಬಂಗಾರದ ಬ್ರೋಚು.

* * * * *

"ಈ ಬಾಗಿಲನ್ನು ಯಾವ ವಿಧದಿಂದಲಾದರೂ ಮುಟ್ಟಿದರೆ ಅದು ಕೂಡಲೇ ಪೋಲೀಸರಿಗೆ ತಿಳಿಯುವಂತೆ ವಿದ್ಯುಚ್ಛಕ್ತಿಯ ಅಲಾರಮ್ ಕನೆಕ್ಷನ್ ಕೊಡುತ್ತದೆ. ಕಳ್ಳರೇ ಎಚ್ಚರವಿರಲಿ" ಎಂದು ಬರೆದ ನೋಟೀಸೊಂದನ್ನು ತನ್ನ ಬಂಡಸಾಲೆಯ ಬಾಗಿಲಿಗೆ ಅದರ ಮ್ಹಾಲಿಕನು ತೂಗಹಾಕಿದ್ದನು.

ಒಂದು ದಿನ ಬೆಳಿಗ್ಗೆ ಇವನು ಬರುವಾಗ ತನ್ನ ನೋಟಿಸಿನ ಬದಲಿಗೆ ಬೇರೊಂದು ನೋಟಿಸನ್ನು ಕಂಡ. ಅದರಲ್ಲಿ ಈ ರೀತಿ ಬರೆದಿತ್ತು. "ನೋಟಿಸನ್ನು ಬರೆದು ಹಾಕಿ ಮೊದಲೇ ಎಚ್ಚರಕೊಟ್ಟುದುದಕ್ಕಾಗಿ ನಿಮಗೆ ವಂದನೆಗಳು. ನಾವು ಬಾಗಿಲನ್ನು ಮುಟ್ಟದೆ ಗೋಡೆಯ ಮುಖಾಂತರ ಒಳ ನುಗ್ಗಿದ್ದೇವೆ."

* * * * *

ಉಪಾಧ್ಯಾಯ–ಸುಮ್ಮನಿದ್ರೆ ಪಾಠ ಬರುತ್ತದೇನು? ಏನು ಮಾಡಬೇಕು?

ರಾಮು–ಹೊಡೆಯಬೇಕು, ಸಾರ್.

* * * * *

ಉಪಾಧ್ಯಾಯಿನಿ–ಏನೇ ಮನೆಯಲ್ಲಿ ಓದುವುದಿಲ್ಲ? ನಿಮ್ಮಮ್ಮನ ಕಾಣುತ್ತೇನೆ.

ವಿದ್ಯಾರ್ಥಿನಿ–ಹೂಂ! ಮೇಡಮ್, ಅಮ್ಮ ಅದೇ ಹೇಳುತ್ತಾಳೆ. "ಶಾಲೆಯಲ್ಲಿ ಓದುವುದಿಲ್ಲ? ನಿಮ್ಮ ಉಪಾಧ್ಯಾಯಿನಿಯರನ್ನು ನೋಡುತ್ತೇನೆ" ಎಂದು.

* * * * *

ಹೆಂಡತಿ–ಗಂಡಸರಿಗೆ ಏನಾದರೂ ಹೇಳಿದರೆ, ಅವರು ಒಂದು ಕಿವಿಯಲ್ಲಿ ಕೇಳಿ, ಇನ್ನೊಂದು ಕಿವಿಯಲ್ಲಿ ಬಿಟ್ಟು ಬಿಡುತ್ತಾರೆ.

ಗಂಡ–ಹೌದು ಹೆಂಗಸರಿಗೆ ಏನಾದರೂ ಹೇಳಿದರೆ, ಅವರು ಎರಡು ಕಿವಿಗಳಲ್ಲಿಯೂ ಕೇಳಿ, ಬಾಯಿಯಲ್ಲಿ ಬಿಟ್ಟು ಬಿಡುತ್ತಾರೆ.

* * * * *

ಅವ–ನನ್ನ ತುಟಿಯಿಂದ ಒಂದೇ ಒಂದು ಸುಳ್ಳಾದರೂ ಹೊರ ಬಂದಿಲ್ಲ.

ಇವ–ಪ್ರಾಯಶಃ ನೀವು ಇಷ್ಟರ ವರೆಗೆ ಮಾತನಾಡುತ್ತಿದ್ದುದು ಮೂಗಿನಿಂದ.

* * * * *

ಅತಿಥಿ–ಹೋಟೆಲಿನ ಮೆನೇಜರರೆಲ್ಲಿ? ಇಲ್ಲಿಯ ಊಟವೇನೂ ರುಚಿಕರವಾಗುವುದಿಲ್ಲವೆಂದು ದೂರು ಕೊಡ ಬೇಕೆಂದಿದ್ದೇನೆ.

ನೌಕರ–ಮೆನೇಜರ ಸಾಹೇಬರು ಎಲ್ಲಿಯೋ ಬೇರೆ ಹೊಟೇಲಿಗೆ ಊಟ ಮಾಡಲು ಹೋಗಿರುವರು.

* * * * *

ಗುರು–ಮನುಷ್ಯನು ನೀರಿನಲ್ಲಿ ಎಷ್ಟು ಸಮಯ ಬದುಕ ಬಲ್ಲನು?

ಶಿಷ್ಯ–ಪ್ರಾಣ ಹೋಗುವ ತನಕ ಸಾರ್.

* * * * *

ಆಕೆ–ಅನ್ಯಾಯ ಮಾಡುವವಳು ಅನ್ನ ತಿಂದಾಳು!

ಈಕೆ–ಹೌದು. ಸತ್ಯ ಹೇಳುವವರು ಸತ್ತೇ ಹೋದಾರು.

* * * * *

ವೈದ್ಯ–ಸಂಪಾದಕರು ತಪ್ಪಿದರೆ ತಿದ್ದು ಪಡಿ ಬರೆಯುವರು.

ಸಂಪಾದಕ–ವೈದ್ಯರು ತಪ್ಪಿದರೆ ಹೂಳಿ ಬಿಡುವರು.

* * * * *

'ಏನು ಸಾಹೇಬರೇ! ಕನ್ನಡಿ ಕೈಯಲ್ಲಿ ಹಿಡಿದು ಮಲಗಿಕೊಂಡು ಕಣ್ಣು ಮುಚ್ಚಿದ್ದೀರಲ್ಲಾ! ಏನು ನೋಡುತ್ತಿದ್ದೀರಿ?

ನಿದ್ದೆ ಹೋಗುತ್ತಿದ್ದಾಗ ನನ್ನ ಮೋರೆ ಹೇಗೆ ಕಾಣಿಸುವುದು ಎಂದು ನೋಡುತ್ತಿದ್ದೇನೆ.

ಜೀವನವೂ ಹಸ್ತರೇಖೆಗಳೂ.

ಲೇಖಕ—ಮು. ಜಾ.

— ಕಳೆದ ಸಂಚಿಕೆಯಿಂದ ಮುಂದುವರಿದುದು. —

ನಂಬ್ರ 3ನೇ ಚಿತ್ರದಲ್ಲಿನ ನಂಬ್ರ 4ನೇ ರೇಖೆಯು ಶಿರೋರೇಖೆಯಿಂದ ಕವಲೊಡೆದು ಬಂದರೆ ಅಂತಹ ವ್ಯಕ್ತಿಯು ಸ್ಥಿರ ಚಿತ್ತವುಳ್ಳವನಾಗನು. ಅಂತಹವನು ಎಷ್ಟು ಸಣ್ಣ ಕೆಲಸವನ್ನು ಮಾಡ ಹೋಗುವಾಗಲೂ ಮೇರೆ ಮೀರಿ ವಿಷಯ ವಿಮರ್ಶೆಯನ್ನು ಮಾಡಿಕೊಳ್ಳುವನು. ಈ ಬಗೆಯ ಆಲೋಚನಾತರಂಗಗಳು ಅವನ ಮನದಲ್ಲಿ ಮೂಡಿ ಅವನು ಯಾವ ಕಾರ್ಯವನ್ನೂ ಸ್ಥೈರ್ಯದಲ್ಲಿ ಸಾಧಿಸಲು ಸಮರ್ಥನಾಗನು. ಅಂತಹವನು ಸರಿ ದಾರಿಗೆ ಬರಬೇಕಾದರೆ ಅವನು ತನ್ನ ಪ್ರಥಮ ಆಲೋಚನೆಯನ್ನೇ ಆಧರಿಸಿ ಯಾವ ಕಾರ್ಯಕ್ಕಾದರೂ ಕೈ ಹಚ್ಚಬೇಕು. ಎಂತಹ ಸನ್ನಿವೇಶಗಳಲ್ಲೂ ತನ್ನ ಪ್ರಥಮ ನಿರ್ಧಾರವನ್ನು ತೊಲಗಿ ಹೋಗಬಾರದು. ಮೊದ ಮೊದಲು ಈ ರೀತಿಯ ನಿರ್ಧಾರವು ದುಸ್ಸಾಧ್ಯವೆಂದೇ ತೋರುವುದು; ಆದರೆ ಕೆಲವು ತಿಂಗಳುಗಳಲ್ಲೇ ಮಾನಸಿಕ ಪರಿವರ್ತನೆಯು ತನ್ನಷ್ಟಕ್ಕೆ ಉಂಟಾಗಿ ಈ ರೀತಿಯ ಚಿಹ್ನೆಯು ನಿರ್ಬಲಗೊಂಡು ಅಂತ್ಯದಲ್ಲಿ ಅಳಿಸಿ ಹೋಗುವುದು.

ಯಾವ ಸಂತನಲ್ಲಾಗಲೀ ಸನ್ಯಾಸಿಯಲ್ಲಾಗಲೀ ಬೈರಾಗಿಯಲ್ಲಾಗಲೀ ಅಥವಾ ಜೀವನವನ್ನು ಸಂಪೂರ್ಣ ಮಾರ್ಪಡಿಸಿದವರಲ್ಲಾಗಲೀ ಶಿರೋ ರೇಖೆಯ ಅಂತ್ಯವು ಕೆಳಗೆ ಬಗ್ಗಿಯೇ ಇರುವುದು; ಮತ್ತು ಅದರ ಕೊನೆಯು ಎರಡನೆ ಚಿತ್ರದ × ಈ ಗುರುತಿನ ಮಾಂಸ ಭರಿತ ಸ್ಥಳದಲ್ಲೇ ನಿಲ್ಲುವುದು. ಇಂತಹವರು ಉನ್ಮನಸ್ಕ (Eccentric) ರಾಗುವರು. ಇವರ ವಿಪರೀತ ಬುದ್ಧಿಯು ಇವರ ಜೀವನದಲ್ಲಿ ವಿಶೇಷ ಮತ್ತು ಪ್ರಕಾಶಿತ ಪರಿವರ್ತನೆಯುಂಟುಮಾಡುವುದು. ಚುಟುಕಾಗಿ ಹೇಳುವುದಾದರೆ, ಈ ರೀತಿಯ ಕುರುಹು ಜೀವನದಲ್ಲಿ ಹೆಚ್ಚು ಯಶಸ್ವಿಗಳಾಗದಿರುವವರಲ್ಲಿ ಮಾತ್ರ ಇರುತ್ತದೆ.

ಶಿರೋ ರೇಖೆಯು ಎಂದೂ ಮೇಲ್ಮುಖ ಮಾಡಿಕೊಂಡಿರಬಾರದು. ⌣ ಈ ಆಕಾರದಿಂದಿರುವ ಶಿರೋ ರೇಖೆಯುಳ್ಳ ಸ್ತ್ರೀಯಾಗಲೀ ಪುರುಷರಾಗಲೀ ಬಹಳ ಕೋಪಿಷ್ಟರೂ ಅಹಂಕಾರಿಗಳೂ ಆಗುವರು. ಅಲ್ಲದೆ ಇಂತಹವರು ಒಂದಲ್ಲ ಒಂದು ದಿನ ಮನುಷ್ಯ ಪ್ರಾಣಿಯನ್ನು ಕೊಲ್ಲದೆ ಇರಲಾರರು. ಶಿರೋ ರೇಖೆಯು ತಲೆಯೆತ್ತಿ ನಿಂತ ಚಿಹ್ನೆಯು ಎಂದೂ ಅಪಾಯರಹಿತವಲ್ಲ. ಇದು ಕೊಲೆಯ ಸಂಪೂರ್ಣ ಚಿಹ್ನೆಯೆಂದು ತಿಳಿಯತಕ್ಕದ್ದು. ಈ ರೀತಿಯ ಶಿರೋ ರೇಖೆಯುಳ್ಳ ಜನರಿಂದ ಆದಷ್ಟು ದೂರವಿರುವುದೇ ಶ್ರೇಯಸ್ಕರ. ಇದರ ಸತ್ಯಾಂಶವನ್ನು ಪರೀಕ್ಷಿಸಬೇಕಾದರೆ ಕೊಲೆ ಮಾಡಿ, ಸೆಶ್ಯನ್ಸ್ ಕೋರ್ಟುಗಳಿಗೆ ತರಲ್ಪಡುವ ಜನರ ಹಸ್ತಗಳನ್ನು ನೋಡಬೇಕು. ಸೆಶ್ಯನ್ಸ್ ಕೋರ್ಟಿನವರು ಖೂನಿ ತಕ್ಸೀರುಗಳ ವಿಚಾರಣೆಯಲ್ಲೇ ದೀರ್ಘ ಸಮಯವನ್ನು ತೆಗೆಯುವರು; ಇದರ ಬದಲಿಗೆ ಕೊಲೆಗಾರನೆಂದು ಆರೋಪಿತನಾದವನ ಹಸ್ತ ಪರೀಕ್ಷೆಯನ್ನು ಮಾಡಿ, ಮೇಲೆ ಹೇಳಿದಂತಹ ರೀತಿಯ ಶಿರೋ ರೇಖೆಯು ಸ್ಪಷ್ಟವಾದ ಬಣ್ಣ ಆಕಾರಗಳಿಂದಿದ್ದರೆ ಕೆಲಸವು ಬಹಳ ಸುಲಭವಾಗುವುದು. ಹೆಚ್ಚಿನ ಪಾಶ್ಚಾತ್ಯ ರಾಷ್ಟ್ರಗಳಲ್ಲೆಲ್ಲ ಖೂನಿ ವಿಚಾರಣೆಗಳ ಮೊದಲು ಅಪಾದಿತರ ಹಸ್ತ ಪರೀಕ್ಷೆ ಮಾಡಿಸಿ, ತಮ್ಮ ಮುಂದಿರುವ ತಕ್ಸೀರಿಗೆ ಆಧಾರವಾದ ವಿಷಯಗಳನ್ನು ಮೊದಲು ಸಂಗ್ರಹಿಸುವುದು ಅನೇಕ ನ್ಯಾಯಾಧೀಶರ ಕ್ರಮವಿರುತ್ತದೆ. ಗ್ರೀಕ್ ದೇಶದಲ್ಲೂ ಇಂತಹ ಆಚಾರವಿದ್ದಿತು. ಅಲ್ಲಿ ಇತ್ತಿತ್ತಲೂ, ವಧೂವರರ ಹಸ್ತ ಪರೀಕ್ಷೆ ಮಾಡಿದ ನಂತರವೇ ವಿವಾಹಗಳನ್ನು ನೆರವೇರಿಸುವ ಕ್ರಮವನ್ನು ಧರ್ಮ ಗುರುಗಳು ಇಟ್ಟುಕೊಂಡಿರುವರು. ಆದರೆ ಹಿಂದೂಸ್ಥಾನದಲ್ಲಿ ಈ ವಿಷಯದ ಕಡೆ ಯಾರ ಲಕ್ಷ್ಯವೂ ಹರಿದಿಲ್ಲ.

ಒಬ್ಬನ ಶಿರೋ ರೇಖೆಯು ಮೇಲೆ ಮುಖ ಮಾಡಿಕೊಂಡಿದ್ದು, ಅವನ ಅದೃಷ್ಟ ರೇಖೆಯೂ ಜೀವನ ರೇಖೆಯೂ ತುಂಡಾದಂತಿರುವುವಾದರೆ ಅಂತಹ ಮನುಷ್ಯನು ಖಂಡಿತವಾಗಿ ಪಾಶಿಯ ಕಂಭಕ್ಕಾಗಿಯೇ ಹುಟ್ಟಿ ಬೆಳೆದನೆಂದು ನಿರ್ಧರಿಸಬೇಕು. ತನ್ನ ಒಂದು ಇಚ್ಛೆಯು ನೆರವೇರಬೇಕೆಂದು ಅವನು ಸಹಾ ಚಿಂತಿಸುವನು. ತನಗೆ ವೈರಿಗಳಿರಬಾರದೆಂದೇ ಅವನ ಆಗ್ರಹವಾಗುವುದು. ಹಾಗೆ ವೈರಿಗಳಿರಬಾರದೆಂದು ಅವನು ಅಹಿಂಸಾಪರನಾಗದೆ ಅಹಂಕಾರಪರನಾಗುವನು. ಇದು, ಕ್ರಮೇಣ ಸನ್ನಿವೇಶಗಳ ಸಮಾಗಮಗಳಿಂದ ಅವನಿಗೆ ವೈರಿಗಳ ತಂಡವನ್ನೇ ಒದಗಿಸಿ ಕೊಡುವುದು. ಒಂದು ಕಡೆಯಿಂದ ಇವನ ಬಲತ್ಕಾರವು ನಡೆಯುತ್ತಿರುವಾಗ, ಒಂದು ಕಡೆಯಿಂದ ಇವನಂತಹ ಸ್ವಭಾವದವರ ಹಟವೂ ಹೆಚ್ಚುವುದು. ಎರಡು ಕಡೆಗಳ ಬೆಂಕಿಯೂ ಉರಿದೇಳಲಾರಂಭವಾಯಿತೆಂದರೆ, ಅವರವರ ನಕ್ಷತ್ರ ಬಲದ ಪ್ರಕಾರ ಅದು ಸ್ಫೋಟನವಾಗುವುದು—ಇದೇ ಕೊಲೆ.

ಹೆಚ್ಚಾಗಿ ದ್ರವ್ಯಾಶೆಯುಳ್ಳವರ ಎರಡು ಅಂಗೈಗಳ ಶಿರೋ ರೇಖೆಗಳೂ ಹೀಗೆ ಮೇಲ್ಮುಖ ಮಾಡಿಕೊಂಡಿರುತ್ತವೆ. ಹೇಗೆ ಒಬ್ಬನ ಅಂಗೈಯ ಬಣ್ಣವನ್ನು ನೋಡಿ ಅವನ ಆರೋಗ್ಯದ ಕುರಿತು ಹೇಳಬಹುದೋ, ಹಾಗೆ ಈ ಶಿರೋ ರೇಖೆಗಳ ರೂಪವನ್ನು ನೋಡಿ ಒಬ್ಬನ ಭೌತಿಕ ವಿಚಾರ ಮಗ್ನತೆಯ ಮಾನವನ್ನು ಅಳೆಯಬಹುದು.

(ಸಶೇಷ)


ಜನವರಿ ಒಗಟು.

ಒಗಟು ನಂಬ್ರ 3. | ಒಗಟು ನಂಬ್ರ ೪.

ಒಂದು (Kodak) ಕೆಮರ **ಬಹುಮಾನ** ಒಂದು (Kodak) ಕೆಮರ

ಕಟ್ಟಿದವರು:—ಶ್ರೀ. ಕೆ. ಟಿ. ದೇವುಜಿ, ಮುಂಬಾಯಿ.

ಮಾರ್ಚಿಯ ಸುವರ್ಣ ಪದಕವನ್ನು ನಿರೀಕ್ಷಿಸಿರಿ!



ಕೆಳಗಿನದನ್ನು ಸುಲಭ ಕನ್ನಡ ಮಾಡಿರಿ.

1 ದೀನರು
2 ಸದಾ
3 ಭಗವಾನನ
4 ಪ್ರೇಮಕ್ಕೆ
5 ಅರ್ಹರು
6 ದೀನರು
7 ಕ್ಲೇಶಗಳಿಗೆ
8 ಭಯಾನ್ವಿತರಾಗಬಾರದು

9 ದೀನರ
10 ಸೇವೆಯೇ
11 ಭಗವಾನನ
12 ಸೇವೆಯು
13 ದೀನರ
14 ಉದ್ಧಾರವೇ
15 ಧರಣಿಯ
16 ಉದ್ಧಾರವು

17–18 ದಿವಸ
19–20 ಕೈ
17, 21, 22–23 ಸೂರ್ಯ
18–24 ಮನುಷ್ಯ
25–26 ಬಾಗಿಲು
19, 27, 28–29 ಭಂಗಾರದ
20–30 ಯುದ್ಧ
31–32 ಕೃಷ್ಣ

33–34 ನವ
35–36 ವರ್ಷ
37–38 ಸರ್ವರಿಗೂ
39–40 ಶುಭವಾಗಲಿ

ನಿಯಮಗಳು:—ಇದರ ಬಿಚ್ಚುಗರು ಉತ್ತರದೊಡನೆ ಒಂದಾಣೆ ಚೀಟನ್ನು ನಮ್ಮ ಆಫೀಸಿಗೆ ರವಾನಿಸಬೇಕು. ನಾಲ್ಕು ಹೆಸರುಗಳನ್ನು ಕಳುಹಿಸುವವರು ಮೂರು ವರೆ ಆಣೆಗಳ ಅಂಚೆ ಚೀಟನ್ನು ರವಾನಿಸಬಹುದು. ಉತ್ತರಗಳು ಈ ತಿಂಗಳ ತಾ. 25 ರೊಳಗೆ ನಮ್ಮ ಕೈ ಸೇರಬೇಕು. ಸಮರ್ಪಕವಾಗಿ ಬಿಚ್ಚಿದವರ ಹೆಸರುಗಳು ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟವಾಗುವುವು. ಉತ್ತರಗಳನ್ನು ಅಂದವಾಗಿ ಬಿಡಿಸಿ ತಮ್ಮ ಕಲಾವಾತ್ಸಲ್ಯವನ್ನು ತೋರಿಸುವವರೊಳಗೆ ಸೋಡ್ತಿ ಎತ್ತಿ 2 ರೂಪಾಯಿಗಳನ್ನು ಬಹುಮಾನಿಸಲಾಗುವುದು. ಎಲ್ಲಾ ಬಿಚ್ಚುಗರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡಬೇಕು. ಕಳೆದ ಒಗಟಿನಲ್ಲಿ ಕಲಾ ಯೋಗ್ಯತೆಗಾಗಿ ಶ್ರೀ. ಬಿ ಲೋಕಯ ಸಾಲಿಯಾನ್ c/o ಗೋಪಾಲ ಶಂಕರ್, ಮುಂಬಾಯಿ ಇವರಿಗೆ 2 ರೂಪಾಯಿಗಳು ದೊರೆತಿವೆ. ದೀಪಾವಳಿ ಒಗಟಿನ ಸಂಖ್ಯೆ ನಂಬ್ರ 19ರಲ್ಲಿ ಇವರ ಹೆಸರು ಬೀಳಬೇಕಿತ್ತು.

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಬಡತನದ ಕಿಡಿ'ಯು ಯಾರನ್ನೂ ಉದ್ದೇಶಿಸಿ ಬರೆಯಲ್ಪಟ್ಟುದ್ದಲ್ಲ. ಅದು ಸ್ವಕಪೋಲ ಕಲ್ಪಿತವೆಂದು ಲೇಖಕರು ತಿಳಿಸುತ್ತಾರೆ. (ಸಂಪಾದಕ)

ಮುಂಬಾಯಿಯಲ್ಲಿನ ಶ್ರೀ. ಬೋಳಾರ ಗುಡ್ಡೆಮನೆ ದೇವಪ್ಪ ಪುತ್ರನಿಗೆ ಗೋವೆ ಸೋಡ್ತಿಯಲ್ಲಿ ೧೦,೦೦೦ ರೂಪಾಯಿ ದೊರೆತಿದೆಯಾಗಿ ಸುದ್ದಿ

ಇದೇ ೨೫ನೇ ಸೋಮವಾರ ದಿನ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಗವರ್ನಮೆಂಟ್ ಕೊಲೆಜಿನ ಅಧ್ಯಾಪಕರಾದ ಶ್ರೀ। ಕೆ ವೆಂಕಟರಾವ್, ಎಂ. ಎ. ಎಲ್. ಟಿ. ಇವರ ಹರಿಕಥೆಯು ನಡೆಯಿತು. ಅನೇಕ ಮಹನೀಯರು ಚಿತ್ತೈಯಿಸಿದ್ದರು. ಸ್ತ್ರೀಯರ ಸಂಖ್ಯೆಯೂ ವಿಶೇಷವಿತ್ತು. ಶ್ರೀ। ವೆಂಕಟರಾಯರ ಭಕ್ತಿರಸಪ್ರದಾಯಕವಾದ ಹರಿಕಥೆಯು ಸರ್ವರಿಂದಲೂ ಶ್ಲಾಘಿಸಲ್ಪಟ್ಟಿತು.

ಶ್ರೀ ಗೋಕರ್ಣನಾಥ ದೇವಸ್ಥಾನದ ಸೆಕ್ರಿಟರಿಗಳಾದ ರಾವ್ ಬಹದ್ದೂರ್ ಎನ್. ಎಸ್. ಸುವರ್ಣರು ಮುಂಬಾಯಿಗೆ ಹೋಗಿರುವರು. ಅವರು ತಲಪುತ್ತಲೇ ಮುಂಬಾಯಿಯ ಎಲ್ಲಾ ಬಿಲ್ಲವ ಸಂಸ್ಥೆಗಳ ಪ್ರತಿನಿಧಿಗಳು ಅವರನ್ನು ಸ್ವಾಗತೀಕರಿಸಿದರು.

ಮಿಡ್ನಾಪುರದಲ್ಲಿ ಕೊಲೆ ಮಾಡಲ್ಪಟ್ಟ ಮಿ। ಬರ್ಜರ ಪತ್ನಿಯವರು ಲಂಡನಿನ ಈಸ್ಟ್ ಇಂಡಿಯಾ ಎಸೋಸಿಯೇಶನಿನಲ್ಲಿ "ಬಂಗಾಳದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಜೀವನ"ದ ಕುರಿತು ಭಾಷಣ ಮಾಡಲು ನಿಂತಾಗ, ದೇಹವು ಕಂಪಿಸಿ ಭಾಷಣ ಮಾಡಲು ಅಸಾಧ್ಯವಾಯಿತು. ಸಹಾನುಭೂತಿಪರ ಠರಾವಾಗಿ ಸಭೆಯು ಕೊನೆಗೊಂಡಿತು.

ಇಂಗ್ಲೆಂಡಿನಲ್ಲಿ ಕಳೆದ ವಾರ ಎಲ್ಲೆಲ್ಲಿಯೂ ಬಿರುಗಾಳಿ, ಮಳೆಯು ಮಾರ್ಗಗಳನ್ನು ನಾಶ ಮಾಡಿತು. ನದಿಗಳಲ್ಲಿ ಐಸ್ ಕೂಡಿಕೊಂಡಿದೆ.

ಲಂಡನಿನಲ್ಲಿ ಆಲ್ವಾರ್ ಮಹಾರಾಜರ ಮನೆಯಲ್ಲಿ ಕಳೆದ ಎಂಟು ವರ್ಷಗಳಿಂದ ಸಂಗೀತಗಾರನಾಗಿದ್ದ ಜಮರುದ್ದೀನನೆಂಬವನು ಕುತ್ತಿಗೆಗೆ ಕ್ಷೌರ ಕತ್ತಿಯನ್ನು ಹಾಕಿಕೊಂಡು ಮೃತನಾಗಿರುವನೆಂದು ತಿಳಿದು ಬರುತ್ತದೆ.

"ಲೀಗ್ ಒಫ್ ನೇಶನ್ಸನ್ನು ಪುನರ್ನಿರ್ಮಿಸಿದರೆ ಉತ್ತಮ"ವೆಂದು ಸರ್ ಗೊಡ್‌ಫ್ರೇಯರು ಹೇಳಿದುದಕ್ಕೆ ಮೆಕ್‌ಡೊನಾಲ್ಡರು "ಬೇಡ ಸ್ವಾಮಿ ಅಂತಹುದು ಅಗತ್ಯವೇ ಇಲ್ಲ" ಎಂದರು.

ಮೊನ್ನೆ ಹೌಸ್ ಒಫ್ ಲೋರ್ಡ್ಸ್‌ನಲ್ಲಿ ಚಕ್ರವರ್ತಿಯವರು ಭಾಷಣ ಮಾಡಿ ಮುಗಿಸುವಷ್ಟರಲ್ಲಿ ಕ್ಲಿಡಸ್ಯೆಡಿನ ಪಾರ್ಲಿಮೆಂಟ್ ಸದಸ್ಯರಾದ ಮಿ. ಜೆ. ಮೆಕ್ ಗವರ್ನ್ ಎಂಬವರು 'ಮೀನ್ಸ್ ಟೆಸ್ಟ್'ನ ಕುರಿತು ಬೊಬ್ಬಿಟ್ಟರು. ಇವರ ಈ ವರ್ತನೆಯು ಇಡೀ ಇಂಗ್ಲಾಂಡಿನಲ್ಲಿ ಮಿಂಚಿನಂತೆ ಹರಡಿತು. ಸಾರ್ವಭೌಮರೆದುರು ಈ ರೀತಿ ಬೊಬ್ಬಿಟ್ಟ ಇವರ ಭಾವಚಿತ್ರಗಳನ್ನು ಪ್ರಕಟಿಸದ ಅಲ್ಲಿಯ ಪತ್ರಿಕೆಗಳಿಲ್ಲವಂತೆ!

ಬುಲುನಾಸ್ ಎಂಬಲ್ಲಿ ಕ್ರಿಸ್‌ಮಸ್ ದಿನ ಜ್ವಾಲಾಮುಖಿಯು ಸ್ಫೋಟನಗೊಂಡು ಅನೇಕ ಮನೆಮಠಗಳು ನಾಶವಾದುವು. ಜನರೂ ಮಡಿದರು. ಕುಜಿಂದೆರಬಾ ಎಂಬಲ್ಲಿ ಜ್ವಾಲಾಮುಖಿಯಿಂದಾಗಿ ೮ ಜನರು ಮೃತರಾದರು.

ಫ್ರಾನ್ಸ್‌ನಲ್ಲಿ ಮೊನ್ನೆ ಬಿದ್ದ ರೈಲು ಅಪಘಾತದಿಂದ ಒಟ್ಟು ೨೦೦ ಜನರು ಮೃತರಾದರು.

ಜಪಾನ ಚಕ್ರವರ್ತಿಗೆ ಒಂದು ಗಂಡು ಮಗುವು ಹುಟ್ಟಿರುತ್ತದೆ. ಗಂಡು ಮಗುವನ್ನು ನಿರೀಕ್ಷಿಸುತ್ತಿದ್ದ ದೇಶವು ಆನಂದಭರಿತವಾಗಿದೆ.

ಕ್ರಿಸ್‌ಮಸ್ ಅನಾಹುತಗಳು.

ನ್ಯೂಯೋರ್ಕಿನಲ್ಲಿ ಕ್ರಿಸ್‌ಮಸ್ ದಿನ ದೇಶದಲ್ಲೆಲ್ಲಾ ೩ ಇಂಚು ಹಿಮ ಬಿತ್ತು. ಅಮೆರಿಕದಲ್ಲಿ ಒಟ್ಟು ೧೪೦ ಜನರು ಆ ದಿನ ಮೋಟರ್ ಅಪಘಾತಕ್ಕೆ ತುತ್ತಾದರು. ಕ್ರಿಸ್‌ಮಸ್ ನಡೆಯುತ್ತಿದ್ದಾಗ ಮಿಚಿಗನ್ ಎಂಬಲ್ಲಿ ೫ ಮಂದಿ ಬೆಂಕಿಯಿಂದಾಗಿ ಮಡಿದರು. ಕೆನೋಶಾ ಎಂಬಲ್ಲಿ ೧೯ ವರ್ಷ ಪ್ರಾಯದ ತರುಣಿ ಗುಂಡಿಟ್ಟು ಪ್ರಾಣಹತ್ಯ ಮಾಡಿಕೊಂಡಳು. ಅಲ್ಲಿಯೇ ಒಬ್ಬ ಸರಾಫನನ್ನು ಯಾರೋ ಗುಂಡಿನಿಂದ ಕೊಂದರು. ಒರೆಗೆನ್ ಎಂಬಲ್ಲಿ ಮನೆಯೊಂದು ಬಿದ್ದು ನಾಲ್ಕು ಜನರು ತೀರಿಕೊಂಡಿರುವರು. ಎಲಟಿಯನ್ ದ್ವೀಪದಲ್ಲಿ ೪೦ ಮೈಲು ವೇಗದ ಬಿರುಗಾಳಿ ಬೀಸಿ ಅಸಂಖ್ಯ ಜನಜಾನುವಾರುಗಳು ಸಾಯುವಂತಾಯಿತು. ಫಿಲಿಫೈನ್‌ನ ಇಗರ್ಜಿಯಲ್ಲಿ ಮದ್ದು ಸುಡುವಾಗ ಇಗರ್ಜಿಗೆ ಬೆಂಕಿ ಹಿಡಿಯಿತೆಂಬ ವಾರ್ತೆಯೆದ್ದು ಜನರು ಸಿಕ್ಕಾಬಟ್ಟೆ ಓಡಿ ೧೩ ಜನರು ಅಡಿಗೆ ಬಿದ್ದು ಸತ್ತರು.

ಎಸೆಂಬ್ಲಿಗೆ ಬರುವ ವರ್ಷದ ದಶಂಬರ ೩೧ರ ತನಕ ಬಾಳುವೆ ಇದೆ ಎಂದು ವ್ಯಾಸರಾಯರ ಹೇಳಿಕೆ.

ಸರ್ಜಾಪುರದಲ್ಲಿ ರಾಮಾಚಾರಿ ಎಂಬವನು ತಮಾಷೆಗಾಗಿ ತನ್ನ ಪತ್ನಿಗೆ ಪುರುಷ ವೇಷ ಹಾಕಿಸಿ ಬಸ್ಸಿನಲ್ಲಿ ಕುಳಿತಾಗ ಪೋಲೀಸರ ಕಣ್ಣಿಗೆ ದೊರೆತು, ವಿಚಾರಣೆಯಾಗಿ ಅವರು ಗಂಡಹೆಂಡಿರೆಂದು ನಿಜಸ್ಥಿತಿಯು ತಿಳಿಯಿತು.

ಕ್ರಿಕೆಟ್ ಆಟಗಾರನಾದ ಅಮರನಾಥನ ಸೆಂಚುರಿಗೆ ಮೆಚ್ಚಿ ಬರೋಡದ ಮಹಾರಾಜರು ೧೦೦೦ ರೂಪಾಯಿಗಳನ್ನೂ, ಕೊಲ್ಹಾಪುರದ ಮಹಾರಾಜರು ೫೦೦ ರೂಪಾಯಿಗಳನ್ನೂ ಬಹುಮಾನವಾಗಿ ಕೊಟ್ಟರು.


ದಾವಣಗೆರೆಯಲ್ಲಿ ಒಬ್ಬ ಮುಸಲ್ಮಾನ ವೇಷಧಾರಿಯು ಕೆಲವು ಹುಡುಗರಿಗೆ ಬಾಳೆ ಹಣ್ಣು ತಿನ್ನಿಸಿ ಅವರನ್ನು ಮೂರ್ಛೆಗೊಳಿಸಿ ಪರಾರಿಯಾಗಿರುವನು. ಊರ ಮಕ್ಕಳನ್ನು ಹೊರಗೆ ಬಿಡಬಾರದೆಂದು ಎಲ್ಲರಿಗೂ ಮುನಿಸಿಪಾಲಿಟಿಯವರ ಅಪ್ಪಣೆ.

ಕಲ್ಕತ್ತದಲ್ಲಿ ೧೯೩೨ರಲ್ಲಿ ಒಟ್ಟು ೨೪ ಪತ್ರಿಕೆಗಳಿಂದ ಭದ್ರತೆ ಕೇಳಿರುತ್ತಾರೆ

ಬಡವರ ಬಂಧು ಮಹಾತ್ಮಾ ಗಾಂಧಿಯವರು ಇದೇ ಜನವರಿ ತಾ. ೧೪ನೇ ದಿನ ಸಂಜೆ ಮೈಲುಗಾಡಿಯಲ್ಲಿ ಮಂಗಳೂರಿಗೆ ಬಂದು ಉಡುಪಿ, ಕಾರ್ಕಳ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ತಾ. ೧೬ರಲ್ಲಿ ಕಲ್ಲಿಕೋಟೆಗೆ ಹಿಂತೆರಳುವರಾಗಿ ತಿಳಿದು ಬಂದಿದೆ.

ಅವರಿಗೆ ಕೈಲಾದ ದ್ರವ್ಯಸಹಾಯ ಮಾಡುವುದು

ನಮ್ಮ ಕರ್ತವ್ಯ



ಜನವರಿ

ಇದು ಜನವರಿ ಸಂಚಿಕೆ. ಬಡವರ ಬಂಧುವಿನ ಜೀವನದಲ್ಲಿನ ದ್ವಿತೀಯ ವರ್ಷದ ಸಪ್ತ ಸಂಚಿಕೆ. ಸುಂದರಗೊಳಿಸಿ ಹೊರಪಡಿಸಬೇಕೆಂದಿದ್ದರೂ, ನೆನಸಿದಷ್ಟು ಆಗಲಿಲ್ಲ. ಏಕೆ? ಸಾಧ್ಯವಾಗಲಿಲ್ಲವೆಂದೇ ಹೇಳುವೆವು. ಹೊಸ ವರ್ಷವು ನಮ್ಮ ಗ್ರಾಹಕರೆಲ್ಲರಿಗೆ ಶುಭದಾಯಕವಾಗಲೆಂದೂ, ಎಲ್ಲರೂ ಬಂಧುವಿನ ಮೇಲೆ ನಿತ್ಯದ ವಾತ್ಸಲ್ಯವನ್ನಿಟ್ಟು ಸಹಕರಿಸಲೆಂದೂ ಬೇಡುವೆವು.

ಉಪ ಸಂಪಾದಕರ ವಿವಾಹವು

ಇದೇ ತಾ. 24ನೇ ದಿನ ಆದಿತ್ಯವಾರ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಜರಗಿತು. ಜಾತಿ ಪರ ಜಾತಿಯ ಅನೇಕ ಮಹನೀಯರುಗಳು ನೆರೆದಿದ್ದರು. ಸ್ವದೇಶಿ ಉಡಿಗೆ ತೊಡಿಗೆಗಳ ಉಪಯೋಗದಿಂದಲೂ, ಆದಷ್ಟು ಸುಲಭ ರೀತಿಯಿಂದಲೂ ಈ ವಿವಾಹವನ್ನು ನೆರವೇರಿಸಲಾಯಿತು. ವಿವಾಹದ ವೆಚ್ಚವು ಬರೇ ರೂಪ್ಯಾ 15 ಆಗಿತ್ತು. ವಾದ್ಯವಿದ್ದಿಲ್ಲ, ಅತಿಥಿಗಳಿಗೆ ಭೋಜನವಿದ್ದಿಲ್ಲ. ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ವಧೂವರರನ್ನು ಆಶೀರ್ವದಿಸುತ್ತಾ ಈ ವಿವಾಹ ಕ್ರಮವನ್ನು ಕಂಡು, ಅತ್ಯಾನಂದಗೊಂಡು ಡಂಬರಾಹಿತ್ಯದಿಂದಲೂ, ಸೌಲಭ್ಯದಿಂದಲೂ, ಕೇವಲ ಬಡತನದಿಂದಲೂ ನಡೆದ ಈ ವಿವಾಹವು ಸಕಲರಿಗೆ ಆದರ್ಶಪ್ರಾಯವಾಗಿದೆ ಎಂದು ಭಾಷಣವಿತ್ತರು. ವಿವಾಹ ಸಂಬಂಧವಾಗಿ ಯಾವ ತರದ ಬಹುಮಾನಗಳನ್ನೂ (ಆಮಂತ್ರಣದಲ್ಲಿ ತಿಳಿಸಿದಂತೆ) ಸ್ವೀಕರಿಸಲಾಗಲಿಲ್ಲ. ಬಡವರ ಹಿತದೃಷ್ಟಿಯಿಂದ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಈ ವಿವಾಹ ಕ್ರಮವೊಂದನ್ನಿಟ್ಟು, ಸಾವಿರಾರು ಕುಟುಂಬಗಳ ಆಶೀರ್ವಾದಕ್ಕೆ ಪಾತ್ರರಾದ ಇದರ ಅಧ್ಯಕ್ಷ ಸೆಕ್ರೆಟರಿಗಳಿಗೆ ಅನಂತ ವಂದನೆಗಳು. ವಿವಾಹ ಸಂಬಂಧವಾಗಿ ನಮ್ಮ ವಾಚಕರಿಗೆ ಆಮಂತ್ರಣವನ್ನು ಕಳುಹಿಸಲನಾನುಕೂಲವಾದುದಕ್ಕಾಗಿ ಬಹಳ ಪಶ್ಚಾತ್ತಾಪವಿದೆ.

ತಾ. ೨೫ನೇ ದಿನ, ಬಂಧುವಿನ ಸಂಪಾದಕರು ವ್ಯವಸ್ಥೆಗೊಳಿಸಿದ ಮೇರೆಗೆ ಶ್ರೀ ಶಿವಭಕ್ತಿಯೋಗ ಸಂಘದ 'ಸಮಾಜ ಕೂಟ'ದ ಸಂಬಂಧವಾಗಿ ಗವರ್ನರ್ಮೆಂಟ್ ಕೊಲೆಜಿನ ಚರಿತ್ರಾಧ್ಯಾಪಕರಾದ ಮ। ರಾ। ಕೆ. ವೆಂಕಟರಾವ್, ಎಮ್. ಎ. ಎಲ್. ಟಿ. ಇವರಿಂದ 'ಸುಖವೆಲ್ಲಿ' ಎಂಬ ಕುರಿತು ಮನೋರಂಜಕ ಹರಿಕಥೆಯು ನಡೆಯಿತು. ಶ್ರೀ. ವೆಂಕಟರಾಯರ ವಾಗ್ವೈಖರಿಯೂ, ಭಾಷಾಜ್ಞಾನವೂ ವಿಸ್ತಾರವಾಗಿದ್ದು ಸಭೆಯು ಶ್ರವಣ ತಲ್ಲೀನವಾಯಿತು.

ಬಡವರ ಬಂಧು ಫ್ರೀ ನೈಟ್‌ಸ್ಕೂಲ್

ಒಂದನ್ನು ತೆರೆಯಬೇಕೆಂದು ನಮ್ಮ ಅಭಿಲಾಷೆಯಾಗಿರುತ್ತದೆ. ಈ ಬಗ್ಗೆ ಯತ್ನವು ನಡೆಯುತ್ತಿರುತ್ತದೆ. ಉದಾರ ಕನ್ನಡಿಗರೂ, ವಿದ್ಯಾಪ್ರೇಮಿಗಳೂ, ಕೊಡುಗೈಯನ್ನು ನೀಡಿದರೆ ಈ ಮಹತ್ತರ ಕಾರ್ಯವು ಆದಷ್ಟು ಶೀಘ್ರವಾಗಿ ಕೈಗೂಡುವುದರಲ್ಲಿ ಸಂದೇಹವಿಲ್ಲ

ಇದರೊಡನೆ

ಬಡವರ ಬಂಧು ಔಷಧಾಲಯವೊಂದನ್ನು ಸ್ಥಾನ ಕಾಲಗಳನ್ನರಿತು ಶ್ರೀ. ಬಿ. ವಿ. ಬಾಳಿಗರೆಂಬ ಪ್ರಸಿದ್ಧ ಔಷದಜ್ಞರ ಸಹಾಯದಿಂದ ತೆರೆಯಬೇಕೆಂದು ಆಶಿಸಿರುತ್ತೇವೆ. ಈ ಯತ್ನವು ಬೇಗನೆ ಕೈಗೂಡಿ ಬರಲು ನಮಗೆ ಎಲ್ಲರೂ ತಮ್ಮಿಂದಾದಷ್ಟು ಸಹಾಯವನ್ನು, ಕೋರಿದಾಗ ನೀಡಿಯಾರೆಂದು ಹಾರೈಸುತ್ತೇವೆ.

ರಾವ್‌ಬಹದ್ದೂರ್ ಎನ್. ಎನ್. ಸುವರ್ಣರವರು

ಕಳೆದ ಎರಡು ವಾರಗಳ ಹಿಂದೆ ಮುಂಬಾಯಿಗೆ ತೆರಳಿರುವರು. ಅವರನ್ನು ಮುಂಬಾಯಿಯ ಎಲ್ಲಾ ಸ್ವಜಾತೀಯ ಸಂಸ್ಥೆಗಳ ಪ್ರತಿನಿಧಿಗಳೂ ಸ್ವಾಗತೀಕರಿಸಿದರೆಂದು ತಿಳಿದು ಬಹು ಆನಂದಭರಿತರಾಗಿರುವೆವು. ಸಮಾಜದ ಕೀರ್ತಿ ಮಕುಟವಾದ ಶ್ರೀ. ಎನ್. ಎನ್. ಸುವರ್ಣರ ಎಲ್ಲಾ ಆಶಯಗಳು ನೆರವೇರುವಂತೆ ಮುಂಬಾಯಿಯ ಎಲ್ಲಾ ಸಮಾಜ ಕೂಟ ಮತ್ತು ಸಂಸ್ಥೆಗಳು ಒಮ್ಮನಸ್ಸಿನಿಂದ ಸಹಕರಿಸುವರೆಂದು ಹಾರೈಸುತ್ತೇವೆ. ಬಿಲ್ಲವರ ಎಸೋಸಿಯೇಶನು ತನ್ನ ಉದ್ದೇಶದಂತೆ ಶ್ರೀ ಗೋಕರ್ಣನಾಥ ಕ್ಷೇತ್ರದ ಶಿವರಾತ್ರಿ ಮಹೋತ್ಸವ ಸಮಯದಲ್ಲಿ ತನ್ನಿಂದ ಕೂಡಿದಷ್ಟು ಧನ ಸಹಾಯವನ್ನು ಮಾಡೀತೆಂದು ನಂಬಿರುತ್ತೇವೆ.

M. R. Ry. K. Venkappayya Avl., Welcome Hotel, Fort Bombay. Rs. 50—0—0

M. R. Ry. K. M. Gaithonde Avl., Cheif Agent Popular Insurance Co., Ltd. Kararwal Bld. Lohar Chal, Bombay. Rs. 10—0—0

M. R. Ry. N. S. Bangera Avl., 116 Proctor House, Proctor Road, Bombay Rs. 10-0-0

M. R. Ry. M. B. Amin Avl., Empire Automobiles New Queens' Road, Bombay 4. Rs. 10—0—0

M. R. Ry. U. K. Kadbet Avl., Bohra Bazar, Fort Bombay. Rs. 10—0—0

M. R. Ry. H. S. Mandon Avl., Parel, Bombay. Rs. 10—0—0

M. R. Ry. N. P. Bolar Avl., 22 Apollo street, Fort Bombay. Rs. 10—0—0

M. R. Ry. K. Sundar Amin Avl, 22 Police Court Lane, Top Floor, Fort Bombay. Rs. 10—0—0

M. R. Ry. N. B. Amin Avl, 22 Police Court Lane, Top Floor, Fort Bombay Rs. 10—0—0

M. R. Ry. M. Sampath Rao, Avl., 48 Mint Road, Fort Bombay. Rs. 5—0—0

M. R. Ry. B. K. Saliar Avl, Fudowar Hair Dressing Saloon, Grunbow Street, Fort Bombay.

M. R. Ry. Bhasker Kotenkar, Avl., C/o Havero Trading Co., Ltd. P. O. Box, No. 37 Bombay.

M. R. Ry. Ranga Rao, Avl., 40 Medows Street, Fort Bombay.

M. R. Ry. Birmana S. Kirodian, Avl., Co/ M/S Strasess & Co., Ltd. P. O. Box, 444 Fort Bombay.

M. R. Ry. Jarappa P. Saliyan Avl., C/o Bank of Toiwan Ltd, Churchgate Street, Bombay.

M. R. Ry. Permude Dasappa Bangera Avl., C/o Central Bank of India, Ltd., Fort Bombay.

M. R. Ry. B. S. Amin Avl., C/o Messers, Volkart Bros's Import Dept, Bombay.

M. R. Ry. Venkappa Kotian Avl., 9 a Police Court Lane, Fort Bombay.

M. R. Ry. K. A. Kotian Avl., Co/ O S. K. Taj Building P. O. Box, No. 355 Hornby Road, Fort Bombay.

M. R. Ry. B. Manjunath Avl., Proprietor, City Cycle Co., Mangalore.

M. R. Ry. Munjunath B. Amin Avl., 22 Police Court Lane, Top Floor, Fort Bombay.

M. R. Ry. A. Sankappa Avl., Tailor & Out fitter, A. R. Dias & Bros, Esplanade Road, Bombay.

M. R. Ry. M. Ishwar Avl. Photographer Savoy Chambers, 2nd floor, Dalal Street, Fort Bombay.

M. R. Ry. M. Anantha Paradeshi Avl., C/o The Indian Cement Co, Ltd., 24 Bruce Street, Fort Bombay.

Messers. M. P. Sanil & Brothers (of moolky) 1st floor, House No. 209 Bohra Bazar Street, Fort Bombay.

M. R. Ry. P. Babu, Avl., Teacher, Surathkal.

M. R. Ry. M. T. Mendon Avl., Valkeswar, Bombay.

M. R. Ry. B. G. Mendon Avl., Valkeswar, Bombay.

M. R. Ry. S. S. Karanth Avl., C/o Messrs. Kochikar Bros., Udipi

---

'ಮೀರಾಬಾಯಿ' ನಾಟಕ

ವನ್ನು ಬಡವರ ಬಂಧುವಿನ ಸಹಾಯಾರ್ಥವಾಗಿ ಆರ್ಯ ವಿದ್ಯಾ ವಿಜಯ ನಾಟಕ ಮಂಡಳಿಯವರು ಆಡಲಿರುವರೆಂದು ಈ ಮೊದಲೇ ತಿಳಿಸಿರುವೆವು. ಇದನ್ನು ತಾ. 20ನೇ ಜನವರಿ ದಿನ ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ಪ್ರದರ್ಶಿಸಬೇಕೆಂದಿದೆ. ಪ್ರಸಿದ್ಧ ರಂಗಭೂಮಿ ನಟರೂ ಕತೆಗಾರರೂ ಆದ ಪ್ರೊಫೆಸರ್ ಪಡುಕೋಣೆ ರಮಾನಂದ ರಾಯರೂ, ಕೊಲೊಂಬಿಯಾ ಗ್ರಾಮೊಫೋನಿನ ಹೆಸರಿನ ಶ್ರೀ. ಮಂಜುನಾಥ ಶಾಲಿವಾಹನರೂ ಇದರಲ್ಲಿ ಮುಂದಾಳುತನವನ್ನು ವಹಿಸಿರುವರು. ನಾಟಕ ವಸ್ತುವು ನವಯುಗದ ಸಂಪಾದಕರಾದ ಶ್ರೀ. ಕೆ. ಕೆ. ಶೆಟ್ಟಿಯವರಿಂದ ಬರೆಯಲ್ಪಟ್ಟಿದ್ದು, ಅತ್ಯಂತ ಪ್ರಶಸ್ತ ರೀತಿಯಿಂದ ಪ್ರದರ್ಶಿತವಾಗುವಂತೆ ಯೋಜನೆಯನ್ನು ಮಾಡಲಾಗಿದೆ. ಊರ ಮಹನೀಯರುಗಳೆಲ್ಲರೂ, ಮುಖ್ಯವಾಗಿ, ನಮ್ಮ ಊರ ಚಂದಾದಾರರೆಲ್ಲರೂ ಸಹಕರಿಸುವರಾಗಿ ನಂಬುಗೆ.

ಎಲ್ಲಾ ಕಡೆಗಳಲ್ಲೂ ದೊರಕುತ್ತೆ.

ಕೊನೆಯಪಕ್ಷ ನಮ್ಮ ಔಷಧಿಗಳನ್ನು ಉಪಯೋಗಿಸಿರಿ.

ಲಸ್ಟರ್ (ದೇಹ ಪೌಷ್ಟಿಕ.) [ರಿಜಿಸ್ಟರ್ಡ್]

ಅಪರೇಷನ್ ಚಿಕಿತ್ಸೆ ಬೇಕಾಗಿಲ್ಲ!! **ಮೇಹಧ್ವಂಸಿನಿ** ಶೀಘ್ರ ಗುಣಕಾರಿ!!

ಮೇಹಧ್ವಂಸಿನಿ (ರಿಜಿಸ್ಟರ್ಡ್.)

ರತ್ನಪ್ರಾಯವಾದ ಈ ಔಷಧಿಯನ್ನು ಸೇವಿಸುವುದರಿಂದ ಮಾನವನು ದುಷ್ಟ ಸ್ತ್ರೀಸಂಗಮದಿಂದ ಸಂಪಾದಿಸಿದ ವ್ಯಾಮೋಹದ ಅಸ್ತಿಯನ್ನು ಕಳೆದುಕೊಂಡು ದೃಢಕಾಯನಾಗುವನು. ಇದರ ಸೇವನೆಯಿಂದ ಹಸುರು, ಬಿಳಪು, ಕೆಂಪು ಮುಂತಾದ ೨೦ ವಿಧ ಪ್ರಮೇಹಗಳು ಧ್ವಂಸವಾಗುವುವು. ಮೇಹಜ್ವರ, ಮೇಹವಾಯು, ಮೇಹಗಡ್ಡೆ, ಹೃದ್ರೋಗ, ಕೈಕಾಲು ಸೆಳಿತ ಚರ್ಮರೋಗಗಳು ನಾಶವಾಗುವುವು. "ಬಹುಮೂತ್ರ"ವೆಂಬ ಘೋರವಾದ ಖಾಯಿಲೆ, ಮೂಲವ್ಯಾಧಿ ಮತ್ತು ಸ್ತ್ರೀಯರ "ಸಮಸ್ತ ಗರ್ಭಾಶಯದ ರೋಗಗಳು" ನಾಶವಾಗಿ ಕೆಟ್ಟುಹೋದ ರಕ್ತವು ಶುದ್ಧಿಯಾಗಿ ಶರೀರಕ್ಕೆ ಕಾಂತಿಯು ಬರುವುದು. ಸೇವಿಸುವುದಕ್ಕೆ ಹಿತಕರ, ಹೆಚ್ಚಿಗೆ ಪಥ್ಯವಿಲ್ಲ. ಕ್ರಯಃ 24 ತೋಲ ಬಾಟ್ಲಿ ರೂ. ೪—೦—೦. 12 ತೋಲ ರೂ. ೨—೪—೦. 6 ತೋಲ ಬಾಟ್ಲಿ ರೂ. ೧—೨—೦.

ನಿಮ್ಮ ಹಲ್ಲಿನ ಬಾಧೆಗೆ ದಿನವಹಿ ನಮ್ಮ ಲಸ್ಟರ್ ದಂತ ಮಂಜನವನ್ನು ಉಪಯೋಗಿಸಿರಿ. ಪಟ್ಟ 1ಕ್ಕೆ 0—1—0.

ನಿರಾಶ್ರಿತರಾದವರು ನರಳಬೇಕಾಗಿಲ್ಲ

ಇದರ ಸೇವನೆಯಿಂದ ವಾತ, ಪಿತ್ತ, ಗರ್ಭಿಜಾಡ್ಯ, ಚರ್ಮರೋಗಗಳು ನಿವಾರಣೆಯಾಗುವುವು. ಹೊಟ್ಟೆಶೂಲೆ, ಕೈಕಾಲುರಿ, ಕಣ್ಣುರಿ ನಾಶವಾಗಿ ಶರೀರವು ತಂಪಾಗಿ ವೀರ್ಯವು ಗಟ್ಟಿಯಾಗುವುದು. ಬಹಳ ಹಳೇ ಉಬ್ಬಸ, ಗೂರ್ಲು, ದಮ್ಮು, ಕೆಮ್ಮು. ಜ್ವರಗಡ್ಡೆಗಳು ನಾಶವಾಗಿ ಜಠರಾಗ್ನಿ ಹೆಚ್ಚುವುದು. ಅಂಗಾಂಗಗಳಲ್ಲಿಯ ನರಗಳ ನಿರ್ಬಲತ್ವವು ಧ್ವಂಸವಾಗಿ ಅಮಿತವೀರ್ಯವುಂಟಾಗಿ ರಕ್ತಶುದ್ಧಿಯಾಗಿ ಮಾಂಸಮಜ್ಜಾದಿಗಳಿಗೆ ಶಕ್ತಿಯುಂಟಾಗುವುದು. ಕೆಲಸಗಾರರಿಗೂ, ಉದ್ಯೋಗಸ್ಥರಿಗೂ, ವಿದ್ಯಾರ್ಥಿಗಳಿಗೂ, ನಿರ್ಬಲರಾದವರಿಗೂ "ಕ್ಷಯದಿಂದ ನರಳತಕ್ಕವರಿಗೂ" ಇದರ ಉಪಯೋಗ ಹೇಳತೀರದು. ಇದರ ಸೇವನೆಯಿಂದ ಬುದ್ಧಿ ಚುರುಕಾಗುವುದು. ಕ್ರಯಃ—24 ತೋಲ ಬಾಟ್ಲಿ ರೂ. ೩—೮—೦ 12 ತೋಲ ಬಾಟ್ಲಿ ರೂ. ೨—೦—೦. 6 ತೋಲ ಬಾಟ್ಲಿ ರೂ. ೧—೧—೦.

ವೇಪ್ರಿನ್ (ಬಹಿರ್ಲೇಪ.) [ರಿಜಿಸ್ಟರ್ಡ್]

(ಉರಿ, ನೋವು, ಒಡತೆಗಳಿಲ್ಲದೆ ಸುಲಭ ಚಿಕಿತ್ಸೆ.)

ಇದರ ಲೇಪನದಿಂದ ಕಜ್ಜಿ, ಗಜಕರ್ಣ, ಇಸಬು, ಗಾಯ, ವ್ರಣಗಳು ಆರುವುವು. ಟಾಕಿ, ಮುಸುಕು, ಮೇಹವ್ರಣ, ಮಡಿಮೆ, ಶಿಂಡಿ, ಮಚ್ಚಕಡಿತ ನಾಶವಾಗಿ ಚರ್ಮ ಪೂರ್ವ ಸ್ಥಿತಿಗೆ ಬರುವುದು. ಪರಂಗಿಹುಣ್ಣು, ತೊಡೆವಾಳ ಇವುಗಳಿಗೆ ಅತ್ಯಂತ ಪ್ರಯೋಜನಕಾರಿ. ಅಕಸ್ಮಾತ್ತಾಗಿ ಆಗುವ ಘಾಯಗಳಿಂದ ರಕ್ತ ಸುರಿವಿಕೆಯನ್ನು ನಿಲ್ಲಿಸಲು 'ವೇಪ್ರಿನ್' ಪ್ರತಿಯೊಬ್ಬರ ಮನೆಯಲ್ಲಿಯೂ ಇದ್ದೇ ಇರಬೇಕು. ಚೇಳಿನ ವಿಷವನ್ನು ತೆಗೆಯುವುದರಲ್ಲಿ ಅದ್ವಿತೀಯವಾದದ್ದು. ಕ್ರಯಃ—½ ಔನ್ಸು ಸೀಸೆ ೦—೮—೦ ¼ ಔನ್ಸು ೦—೪—೦

ಕೆಲವು ಅಭಿಪ್ರಾಯಗಳು.

ಗಿರಿ ಎಸ್ಟೇಟ್ ಮ॥ ಡೊಗ್ಲಾಸ್ ಮೆಪ್ಪನ್ ಸಾಹೇಬರು ಬರೆಯುವುದೇನೆಂದರೆ—ನಿಮ್ಮ ಮುಲಾಮು ಚೇಳಿನ ಕಡಿತಕ್ಕೂ, ಘಾಯಗಳಿಗೂ, ಏಟು ಬಿದ್ದದ್ದಕ್ಕೂ ತುಂಬಾ ಗುಣಕಾರಿಯಾಯಿತು. ಎಲ್ಲಾ ಕಾಫಿ ತೋಟಗಳಲ್ಲಿಯೂ ಅಕಸ್ಮಾತ್ತಾಗಿ ಆಳುಗಳಿಗೆ ಸಂಭವಿಸುವ ತೊಂದರೆಗಳಿಗೆ ತುಂಬಾ ಉಪಯುಕ್ತವಾದ ಔಷಧವು. ಎಲ್ಲರಲ್ಲಿಯೂ ಇರತಕ್ಕದ್ದು ಅತ್ಯವಶ್ಯಕವು.

ಅಹಮದಾಬಾದ್ ಕಾಂಗ್ರೆಸ್ ಆಸ್ಪತ್ರೆಯವರು ಬರೆಯುವುದೇನೆಂದರೆ—ನೀವು ಮೆಹರ್ಬಾನೆ ಮಾಡಿ ಕಳುಹಿಸಿದ 'ವೇಪ್ರಿನ್' ಮುಲಾಮು ಉಪಯೋಗಿಸಿದ್ದಾಯಿತು. ಬಹಳ ಚೆನ್ನಾಗಿ ಗುಣಕೊಟ್ಟಿದೆ. ಇನ್ನೂ ಸ್ವಲ್ಪ ಕಳುಹಿಸಿದರೆ ಒಳ್ಳೆಯದು.

ಮ॥ ಬಿ. ಎನ್. ವಿಜಯದೇವ, ಬಾರ್-ಅಟ್-ಲಾ, ಬೆಂಗಳೂರು ಇವರು ಬರೆಯುವುದೇನೆಂದರೆ—"ಮೇಹಧ್ವಂಸಿನಿ"ಯನ್ನು ಇಲ್ಲಿ ಒಬ್ಬರಿಗೆ ಕೊಟ್ಟು ಗುಣ ಕಂಡದ್ದರಿಂದ ನಿಮ್ಮ ಕಂಪೆನಿಯು ಶ್ರೇಯಸ್ಸಿಗೆ ಬರಲೆಂದು ಹಾರೈಸುವ.

ಮ॥ ರಾ॥ ಲೋವರ್ ಬರ್ಮ ಸೋಫಿಕಾಕಾವರು ಬರೆಯುವುದೇನೆಂದರೆ—ನಿಮ್ಮ ಅರ್ಧ ಬಾಟ್ಲಿ ಮೇಹಧ್ವಂಸಿನಿಯಿಂದ ಆರೋಗ್ಯ ತೋರುತ್ತಾ ಇದೆ. ದಯವಿಟ್ಟು ಇನ್ನೊಂದು ಬಾಟ್ಲಿ ಮೇಹಧ್ವಂಸಿನಿ ಮತ್ತು ನಿಮ್ಮ ಅರ್ಧ ಬಾಟ್ಲಿ ಲಸ್ಟರ್ ಕಳುಹಿಸಿಕೊಡಿರಿ.

ಮ॥ ರಾ॥ ಗಣೇಶರಾವ್, ಪೈಕ್ರಾಫ್ ರೋಡ್, ಮದ್ರಾಸ್ ಬರೆಯುವುದೇನೆಂದರೆ—ನನ್ನ ದೀರ್ಘಕಾಲದ ಇಸಬು ನಿಮ್ಮ ವೇಪ್ರಿನ್ ಉಪಯೋಗಿಸಿದ್ದರಿಂದ ಗುಣಕ್ಕೆ ಬಂದಿದೆ. ಇದು ಚರ್ಮವ್ಯಾಧಿಗೆ ಉತ್ತಮವಾದ್ದೆಂದು ನನ್ನ ಅನುಭವದಿಂದ ಹೇಳುತ್ತೇನೆ.

ಕೆಂಚಿ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್, ಸೆಕ್ರೆಟೆರಿ ಮ॥ ಟಿ. ಆರ್. ರಂಗನಾಥನರವರು ಬರೆಯುವುದೇನೆಂದರೆ—"ಲಸ್ಟರ್" ಔಷಧವು ಕಾಸ, ಶ್ವಾಸಗಳಿಗೂ ಮತ್ತು ಇತರ ವ್ಯಾಧಿಗಳಿಗೂ ತುಂಬಾ ಅನುಕೂಲಕೊಟ್ಟಿತು. ನನ್ನ ಅನೇಕ ಮಿತ್ರರಲ್ಲಿಯೂ ಬಂಧು ಬಳಗದಲ್ಲಿಯೂ ಪ್ರಚುರಪಡಿಸಿದ್ದೇನೆ. ನನ್ನ ಸ್ನೇಹಿತರು ಸಹ ಮೇಲ್ಕಂಡ ವ್ಯಾಧಿಗಳಲ್ಲಿ ಉಪಯೋಗಿಸಿ ಗುಣ ಕಂಡಿದ್ದಾರೆ. ದೇವರು ನಿಮ್ಮ ಪ್ರಯತ್ನಗಳಿಗೆ ಇನ್ನೂ ಹೆಚ್ಚು ಜಯಪ್ರದವನ್ನುಂಟುಮಾಡಲಿ ಎಂಬದಾಗಿ ನನ್ನ ಪ್ರಾರ್ಥನೆ.

ಲಸ್ಟರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,

ಚಿಕ್ಕಮಗಳೂರು (ಮೈಸೂರು ದೇಶ.)

M. GOPAL RAO,

ARTIST, PHOTOGRAPHER & PHOTO
MATERIAL DEALER,
MANGALORE.

Stokist of:

Gevaet, Kodak, Afga, Selo,

Wellington Ilford and Greterion Plates,

Papers and Roll Films.

Welling Cameras (INDIAN MAKE)

Films developed free for amatuers.

ತೊ ದ ಲ್ನ ಡಿ.

ಮುಂಬಾಯಿಯಲ್ಲಿ ಏಕಮಾತ್ರ

ವಾರ ಪತ್ರಿಕೆ.

ಕಥೆ, ಪದ್ಯ, ಹಾಸ್ಯ, ವಾರ್ತಾ ವಿನೋದಗಳೇ
ಮೊದಲಾದ ವಾಚನೀಯ ಲೇಖನಗಳಿಂದೊಪ್ಪುವ
ವಾರ ಪತ್ರಿಕೆ ಎಂದರೆ ಇದೊಂದೇ. ಪುಸ್ತಕ
ರೂಪದಲ್ಲಿ ವಾರಂಪ್ರತಿ ಹೊರಡುತ್ತದೆ.

ಚಂದಾ:—ವರ್ಷ 1ಕ್ಕೆ ರೂಪಾಯಿ 3–4–0. 6 ತಿಂ
ರೂಪಾಯಿ 1–12–0. 4 ತಿಂಗಳಿಗೆ ವಿದ್ಯಾರ್ಥಿಗಳಿಗೆ ವ
ರೂಪಾಯಿ 1–4–0.

ಕೂಡಲೇ ಬರೆಯಿರಿ

ತೊದಲ್ನುಡಿ ಆಫೀಸು,

140 Bora Bazaar Street,
Fort, BOMBA

SADHANA AUSADHALAYA DACCA. (BENGAL

Branch: Shyambazar Calcutta, Naer Depot

ಅಧ್ಯಕ್ಷರು:—ಜೋಗೇಶ ಚಂದ್ರಘೋಷ್

ಆಯುರ್ವೇದ ರೀತ್ಯಾ ತಯಾರುಮಾಡಿದ ಶುದ್ಧ ಔಷಧಗಳ ವೈದ್ಯಶಾ

ಅಪೇಕ್ಷಿಸಿದವರಿಗೆ ಔಷಧಗಳ ಪಟ್ಟಿಯನ್ನು ಮುಫತ್ತಾಗಿ ಕಳುಹಿಸಲಾಗುತ್ತೆ

ಮಕರಧ್ವಜ—(ಸ್ವರ್ಣ ಸಿಂಧೂರ) ಶುದ್ಧವಾದದ್ದು ಮತ್ತು ಚಿನ್ನದಿಂದ ಕೂಡಿದ್ದು, ಎಲ್ಲಾ ವಿಧವಾದ ರೋಗಗಳಲ್ಲಿಯೂ ಗುಣ ಕೊಡತಕ್ಕ ದಿವ್ಯೌಷಧ. ನರಗಳ ದೌರ್ಬಲ್ಯ, ಮಕ್ಕಳು ಮತ್ತು ಸ್ತ್ರೀಯರ ಗರ್ಭಾವಸ್ಥೆಯಲ್ಲಿ ಉಪಯೋಗವಾಗುವುದು. ತೊಲೆ೧ಕ್ಕೆ ರೂ. ೪–೦–೦.

ಸರಿಬಾದಿಸ ರಸ—ಪ್ರಮೇಹ ರಸಸಂಬಂಧವಾದ ರೋಗಗಳು ಮೂತ್ರ ರೋಗಗಳು, ರಕ್ತ ಕೆಡುವಿಕೆ ಮುಂತಾದ್ದನ್ನು ವಾಸಿಮಾಡುವದು. ರಕ್ತ ಶೋಧಕಾರಿಯಾದ ಅನೇಕ ದಿವ್ಯಮೂಲಿಕೆಗಳಿಂದ ತಯಾರಿಸಲ್ಪಟ್ಟಿದೆ. ಶರೀರದ ಸಮಸ್ತ ದೋಷಗಳನ್ನೂ ಗುಣಪ
ವುದು. ಬೆಲೆ–ಸೇರು ೧ಕ್ಕೆ ರೂ. ೩–೦–೦.

ಶುಕ್ರಸಂಜೀವನ—ಇಂದ್ರಿಯದ ನಿಶ್ಶಕ್ತಿ, ನಪುಂಸ
ಮುಂತಾದ ರೋಗಗಳಿಗೆ ಸಂಜೀವನ. ಬೆಲೆ ಶೇರು ೧ಕ್ಕೆ ರೂ.

ಅಬಲಾಬಾಂಧವ—ರಕ್ತಸ್ರಾವ, ಮುಟ್ಟುಕಟ್ಟು, ಸೊ
ನೋವು, ಋತುದೋಷ ಮುಂತಾದ ಎಲ್ಲಾ ವಿಧವಾದ ಗರ್ಭಾಶ
ವನ್ನಂಟಿದ ಸ್ತ್ರೀಯರ ರೋಗದ ಲಕ್ಷಣಗಳನ್ನು ಬರೆದು ಕಳುಹಿಸಿ
ಎಚ್ಚರದಿಂದ ನಾವೇ ಔಷಧಾನು ಪಾನಗಳನ್ನು ಮುಫತ್ತಾಗಿ ಬರ
ಕಳುಹಿಸುವೆವು.

ಕಾಗದ ಪತ್ರಗಳನ್ನು ಇಂಗ್ಲಿಷಿನಲ್ಲೇ ಬರೆಯಿರಿ.

ನವಯುಗಕ್ಕೊಪ್ಪುವ ವಾರಪತ್ರಿಕೆಯೆಂದರೆ

— ಮಂಗಳೂರಿನ —

ನವಯುಗ

ಸಣ್ಣ ಕಥೆ, ಪದ್ಯಗಳು, ವಿನೋದ, ವಿವಿಧ ಸಮಾಚಾರ, ಆಟಗಳ ನೋಟ, ಅಲ್ಲಲ್ಲಿಯ ಸೊಲ್ಲು ಮೊದಲಾದ ಉಚ್ಚ ತರಗತಿಯ ಲೇಖನಗಳು ಬರುವುವು.

ಸಂಪಾದಕ — ಕೆ. ಕೆ. ಶೆಟ್ಟಿ.

ಇಂದೇ ತರಿಸಿಕೊಳ್ಳಿರಿ.

ವಾರ್ಷಿಕ ಚಂದಾ:— ಅಂಚೆವೆಚ್ಚ ಸೇರಿ ರೂ. 3—4—0

ಊರವರಿಗೆ ರೂ. 2—8—0 ಮಾತ್ರ.

ಮಂಗಳೂರಿನ

"ಬಡವರ ಬಂಧು"

ಬಿಡಿ ಸಂಚಿಕೆಗಳು

ಮುಂಬಾಯಿಯಲ್ಲಿ

K. T. Kerkera, Esq.,
13 Thomas Street,
Colaba, **BOMBAY.**

ಇವರಲ್ಲೂ,

National Kanara News Agency,
Sir Phirozsha Metha Road,
Fort **BOMAY.**

ಇವರಲ್ಲೂ ದೊರೆಯುತ್ತವೆ.

ವಾರ್ಷಿಕ ಚಂದಾ ರೂ. ೧—೪—೦.

ದಯಮಾಡಿ

ಶ್ರೀ ವಿಲಾಸ

ಕಾಫಿ ಕ್ಲಬ್ಬನ್ನು ನೆನಪಿನಲ್ಲಿಟ್ಟುಕೊಳ್ಳಿರಿ!

ಕಡಿಮೆ ಖರ್ಚಿನಲ್ಲಿ ಹೆಚ್ಚು ಸಂತೃಪ್ತಿ

ಅತ್ಯುತ್ಕೃಷ್ಟ ಆಹಾರ ಮತ್ತು ಪಾನೀಯ

ಸರ್ವ ಜನರಿಂದ ಶ್ಲಾಘಿಸಲ್ಪಟ್ಟದ್ದು.

ತಮ್ಮ ಮಿತ್ರರೊಡನೆ ದಿನಾಲೂ ಬಂದು ಸಂತೃಪ್ತರಾಗಿರಿ. ಅವರು ಕೂಡಾ ನಮ್ಮ ಶ್ರೀ ವಿಲಾಸವನ್ನು ಯಾವಾಗಲೂ

ಮರೆಯರು.

ಶ್ರೀ ವಿಲಾಸ,
ಗಣಪತಿ ಹ್ಯಾಸ್ಕೂಲ್ ರೋಡ್,
ಮಂಗಳೂರು, ದ. ಕ.

A Recurring Pleasure! - to smoke them.

MANGALORE

DARBAR BEEDIES

Thousands Enjoy them Daily

WHY CANNOT YOU?

When buying see our trade mak. r

ಅವುಗಳನ್ನು ಸೇದುವುದೆಂದರೆ ಆನಂದ!

?

ಅವುಗಳನ್ನು ಸೇದುವುದೆಂದರೆ ಆನಂದ!

ಮಂಗಳೂರು

ದರ್ಬಾರ ಬೀಡಿಗಳು.

ದರ್ಬಾರಿನಲ್ಲಾಗಲೀ ಚಿಕ್ಕ ಕೂಟಗಳಲ್ಲಾಗಲೀ ಸಿಗರೇಟುಗಳ ಸ್ಥಾನವನ್ನು ಇವುಗಳೆ ಯೋಗ್ಯವೆನಿಸುವಂತೆ ವಹಿಸುವವು.

ಅವುಗಳ ಪರಿಮಳ——ಸಿಗರೇಟುಗಳಷ್ಟೆ!

ಉಪಯೋಗಿಸಲ್ಪಡುವ ಹೊಗೆಸೊಪ್ಪು

ಉತ್ಕೃಷ್ಟ ತರಗತಿಯದು. ನಾಜೂಕಾಗಿ ಕಟ್ಟಲ್ಪಟ್ಟುದು.

ಹಿಂದೂದೇಶವಲ್ಲೆಲ್ಲಾ ಹೆಸರಾಗಿವೆ.

ಒಮ್ಮೆ ಪಡೆದು, ಸೇದಿ ನೋಡಿ, ಆ ಮೇಲೆ ನಿತ್ಯಾನಂದ ಪಡೆಯಿರಿ!

ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್,
ರಥಬೀದಿ, ಮಂಗಳೂರು, ದ. ಕ.